the resolution of the Karnataka Slum Clearance Board. The matter is under correspondence with the Land-Lord.

ಶಾಸನ ರಚನೆ

ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕ, 1991
ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಯವರು) : ಮಾನ್ಯ ಉಪಾಧಕ್ಷಣೆಯವರೇ ನಾನು 1991ನೇ ಸಾಲಿನ ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷಣೇಯವರು: ಪ್ರಸ್ತಾಪ ಏನೆಂದರೆ 1991ನೇ ಸಾಲಿನ ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷಣೆಯವರೇ 1991ನೇ ಸಾಲಿನ ಕರ್ನಾಟಕ ಸ್ಟ್ಯಾಂಪ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷಣೇಯವರು: ವಿಧೇಯಕವನ್ನು ಮಂಡಿಸಲಾಗಿದೆ.

ಅನುಬಂಧ

ವಿತ್ತೀಯ ಕಾರ್ಯಕಲಾಪಗಳು

1991-92ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ

+ ಶ್ರೀ ಆರ್. ದಯಾನಂದ ರಾವ್ (ಗಾಂಧಿನಗರ) : ಮಾನ್ಯ ಅಧ್ಯಕ್ಷರೇ, ನಾನು 1991-92ನೇ ಸಾಲಿನ ಅಯವ್ಯಯವನ್ನು ಸದನದಲ್ಲಿ ಮಂಡಿಸಿರುವುದನ್ನು ಸ್ವಾಗತಿಸುತ್ತಾ ನನ್ನ ಸಲಹೆಗಳನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ನಮ್ಮ ಮುಖ್ಯಮಂತ್ರಿಯವರು ಒಂದು ಒಳ್ಳೆಯ ಅಯವ್ಯಯವನ್ನು ಕರ್ನಾಟಕ ಜನರಿಗೆ ಕೊಟ್ಟಿದ್ದಾರೆ. ಇದರಲ್ಲಿ ಸಾಕಷ್ಟು ಬಡ ಜನರಿಗೆ ಒಳ್ಳೊಳ್ಳೆಯ ಯೋಜನೆಗಳನ್ನು ನಮ್ಮ ಸರ್ಕಾರ ಇವತ್ತು ಕೊಟ್ಟಿದೆ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಅದರಲ್ಲಿಯೂ ಸಹ ಇವತ್ತು ನಮ್ಮ ಮುಖ್ಯ ಮಂತ್ರಿಯವರು ಯೋಜನೆಗಳನ್ನು ಹಾಕಿಕೊಂಡು ಗ್ರಾಮಾಂತರ ಜನರಿಗೆ ಕಾರ್ಯಕ್ರಮವನ್ನು ಕೊಟ್ಟಿದ್ದಾರೆ.

ಇನ್ನು 1991-92ರ ಅಯವ್ಯಯದಲ್ಲಿ ಕೊರತೆಯ ಹಣವನ್ನು 56 ಕೋಟಿ ರೂಪಾಯಿಗೆ ಇಳಿಸಿ ಇವೊತ್ತಿನ ದಿವಸ ಒಂದು ಒಳ್ಳೆಯ ಬಜೆಟ್ಟನ್ನು ಕೊಟ್ಟಿದ್ದಾರೆ ಎಂದು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಾನು ಮೊದಲನೆಯದಾಗಿ ಬೆಂಗಳೂರು ನಗರಾಭಿವೃದ್ಧಿಯ ಪರವಾಗಿ ಕೆಲವು ಸಲಹೆಗಳನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ಇವೊತ್ತು ಬೆಂಗಳೂರು ನಗರ ಸಿಕ್ಕಾಪಟ್ಟೆ ಬೆಳೆಯುತ್ತಿದೆ, ಇದನ್ನು ಸರ್ಕಾರ ಅದಷ್ಟು ತಡೆಗಟ್ಟಬೇಕಾಗಿದೆ. ಇದನ್ನು ತಡೆಗಟ್ಟದಿದ್ದರೆ ತುಂಬಾ ಕಷ್ಟವಾಗುತ್ತದೆ. ಇವೊತ್ತು ಬೆಂಗಳೂರು ನಗರದಲ್ಲಿ ನೀರಿನ ಬವಣೆ ಜಾಸ್ತಿಯಾಗುತ್ತಿದೆ. ಆದ್ದರಿಂದ, ಸುಮಾರು ಇವೊತ್ತು 40ರಿಂದ 50 ಲಕ್ಷ ಜನಸಂಖ್ಯೆಗೆ, ನೀರಿನ ವ್ಯವಸ್ಥೆಯನ್ನು ಮಾಡಬೇಕಾಗಿದೆ.

ಎಲ್ಲಾ ಕಡೆಗಳಲ್ಲೂ ಮನೆಗಳು ಹೆಚ್ಚು ಉದ್ಭವವಾಗಿರುವುದರಿಂದ ಈ ಜನಸಂಖ್ಯೆಗೆ ನೀರನ್ನು ಒದಗಿಸುವುದಕ್ಕೆ ಆಗದ ಪರಿಸ್ಥಿತಿಯಾಗಿದ್ದು ನಮ್ಮ ಸರ್ಕಾರ ಕಷ್ಟದಲ್ಲಿದೆ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ಒಂದು ಸಬರ್‌ಬನ್ ಏರಿಯಾ ಎಂದು ಏನು ಇದೆ ಈ ಬೆಂಗಳೂರಿನಲ್ಲಿ ಅಲ್ಲೆಲ್ಲಾ ಮನೆಗಳು ಉದ್ಭವಿಸಿದಂತೆ ನಿಲ್ಲಿಸಬೇಕಾಗಿದೆ. ಈಗಾಗಲೇ ನಮ್ಮ ತಿಪ್ಪಗೊಂಡನಹಳ್ಳಿ ಮತ್ತು ಹೆಸರುಘಟ್ಟ ಕೆರೆಗಳು ನಮಗೆ ಏನು ನೀರನ್ನು ಒದಗಿಸುತ್ತಿದ್ದವು, ಅವುಗಳಲ್ಲಿ ನೀರು ಕಡಿಮೆಯಾಗುತ್ತಿದೆ. ಈ ಕೆರೆಗಳು ಪೂರ್ತಿಯಾಗಿ ಡ್ರೈ ಆಗುತ್ತಿವೆ. ಇವೊತ್ತು ನಾವು ಬರೀ ಕಾವೇರಿ ಒಂದನೇ ಮತ್ತು ಎರಡನೇ ಸ್ಟೇಜ್‌ನಿಂದ ಬರತಕ್ಕದ್ದು ನಿರೀಕ್ಷಿಸಿಕೊಂಡಿದ್ದು. ಅಲ್ಲಿಂದ ಬರತಕ್ಕಂಥ ನೀರನ್ನು ಸುಮಾರು 40-50 ಲಕ್ಷ ಜನರಿಗೆ ಕೊಡಬೇಕಾಗಿದೆ. ಈ ಒಂದು ಕಾವೇರಿ ನೀರು ಎಲ್ಲಿ ಬರುತ್ತದೆ ಅಂದರೆ, ಟಿ.ಕೆ.ಹಳ್ಳಿ, ನಾನು ಮಂತ್ರಿಗಳ ಜೊತೆ ಹೋಗಿದ್ದೆ. ನಮ್ಮ ಶಿಂಷಾದಿಂದ ಬರತಕ್ಕಂಥ ಕರೆಂಟ್ ಏನಾದರೂ ಒಂದು ಗಂಟೆ ನಿಂತು ಹೋಗಿದ್ದರೆ, ಬೇಕಾದಷ್ಟು ಮಿಲಿಯನ್ಸ್ ಆಫ್ ಗ್ಯಾಲನ್ ಬೆಂಗಳೂರಿಗೆ ನೀರು ತರುವುದಕ್ಕೆ ಆಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ಸರ್ಕಾರ ಬೆಂಗಳೂರು ನಗರದಲ್ಲಿ ಈಗಾಗಲೇ ಕೊಳವೆ ಬಾವಿಗಳನ್ನು ಸುಮಾರು ಕಾರ್ಪೊರೇಷನ್‌ನಿಂದ 300 ಕೊಳವೆ ಬಾವಿಗಳನ್ನು ಮತ್ತು ಬಿಡಬ್ಲ್ಯು ಎಸ್‌ಎಸ್‌ಬಿಯಿಂದ 300 ಬಾವಿಗಳನ್ನು ಕೊಡಲಿಕ್ಕೆ ಮುಂದೆ ಬಂದು ಈಗಾಗಲೇ ಕೆಲಸ ಶುರುವಾಗಿದೆ. ಇದು ಒಂದು ಸಂತೋಷದ ವಿಷಯ. ಇನ್ನು ಬೆಂಗಳೂರು ಅಭಿವೃದ್ಧಿ ಯೋಜನೆಗಳಿಗೆ ಸರ್ಕಾರ ಇವೊತ್ತು ವಿಶ್ವಬ್ಯಾಂಕಿನ ನೆರವನ್ನು ಪಡದಿದೆ. ಇದರಲ್ಲಿ ಸುಮಾರು 314.29 ಕೋಟಿ ರೂಪಾಯಿ. ಬೆಳೆಯುತ್ತಿರುವ ಬೆಂಗಳೂರು ನಗರದಲ್ಲಿ ಸಾರಿಗೆ ವ್ಯವಸ್ಥೆಯನ್ನು ಸರಿಮಾಡುವುದಕ್ಕೆ ಮತ್ತು ನೀರಿನ ವ್ಯವಸ್ಥೆಯನ್ನು ಸರಿ ಮಾಡುವುದಕ್ಕೆ ಮತ್ತು 4 ಫ್ಲೈಓವರ್, ಇದರಲ್ಲಿ 4 ಸಬ್‌ವೇ ಕಟ್ಟುವಂಥಾದ್ದು ಪ್ರೋಗ್ರಾಮ್ ಸಹ ಇವೊತ್ತು ಈ ಕಾರ್ಯಕ್ರಮದಲ್ಲಿ ಅಳವಡಿಸಿದೆ. ಇದರಲ್ಲಿ 109.86 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸಾರಿಗೆ ಸೇವಾ ಸುಧಾರಣೆ ಕಾರ್ಯಕ್ರಮಗಳು ಸೇರಿದೆ ಮತ್ತು ಈಗಾಗಲೇ ಬೆಂಗಳೂರು ಮಹಾ ನಗರಪಾಲಿಕೆಯವರು ಎರಡು ಸಬ್‌ವೇ, ಮೂರು ಫ್ಲೈಓವರ್ ನಿರ್ಮಿಸಲು ತೀರ್ಮಾನಿಸಿದ್ದಾರೆ. ಈಗಾಗಲೇ ಗಾಂಧಿನಗರ ಕ್ಷೇತ್ರದಲ್ಲಿ ಒಂದು ಸಬ್‌ವೇ, ಕೆಲಸ ಪ್ರಾರಂಭವಾಗಿದೆ. ಅದು ಸುಮಾರು 65 ಲಕ್ಷ ರೂಪಾಯಿಗಳ ಸಬ್‌ವೇ, ಅದು ರೈಲ್ವೇಸ್ಟೇಷನ್‌ನಿಂದ ಬಸ್ ನಿಲ್ದಾಣಕ್ಕೂ, ಮತ್ತು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೂ ಸುಗಮವಾಗಿ ಓಡಾಡಲಿಕ್ಕೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಈ ಸಬ್‌ವೇ ಕೆಲಸ ಪ್ರಾರಂಭ ಮಾಡಿದ್ದಾರೆ. ಇದಕ್ಕೆ ನನ್ನ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ, ಇವತ್ತು ಆಕ್ಟ್ರಾಯ್ ಬಗ್ಗೆ ಮಾತನಾಡುವುದಾದರೆ ನಗರಪಾಲಿಕೆಗಳಿಗೆ ಹಣ ಬೇಕಾಗಿದೆ. ಆಕ್ಟ್ರಾಯ್‌ನ್ನು ವಸೂಲು ಮಾಡಲೇಬೇಕಾಗಿದೆ. ಕಾರ್ಪೊರೇಷನ್ ಮತ್ತು ಮುನಿಸಿಪಾಲಿಟಿಗಳಿಗೆ ನಾವು ಹಣವನ್ನು ಕಲೆಕ್ಷನ್ ಮಾಡದಿದ್ದರೆ ನಾವು ಪ್ರಗತಿಪರ ಕಾರ್ಯಕ್ರಮಗಳನ್ನು ಮುನಿಸಿಪಾಲಿಟಿಗಳಲ್ಲಿ, ಕಾರ್ಪೊರೇಷನ್‌ಗಳಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲ. ಈ ಹಣವನ್ನು ನಾವು ಕಲೆಕ್ಷನ್ ಮಾಡಲೇಬೇಕು. ಇದನ್ನು ಮಾಡುವಾಗ ಸರಿಯಾಗ ಕ್ರಮವನ್ನು ತೆಗೆದುಕೊಳ್ಳಲೇಬೇಕಾಗುತ್ತದೆ. ಏಕೆಂದರೆ ಇದರಲ್ಲಿ ಎಷ್ಟೋ ಹಣ ಅಧಿಕಾರಿಗಳ ಜೇಬಿಗೆ ಹೋಗಬಹುದು.

ಇದನ್ನು ತಡೆಗಟ್ಟುವುದಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಆ ಆಕ್ಟ್ರಾಯ್ ಹಣವನ್ನು ಕಾರ್ಪೊರೇಷನ್‌ಗಳಿಗೆ ಮತ್ತು ಮುನಿಸಿಪಾಲಿಟಿಗಳಿಗೆ ಸಿಕ್ಕುವಂತೆ ಮಾಡಬೇಕು. ಈ ಕಾರ್ಯಕ್ರಮವನ್ನು ಸರ್ಕಾರ ಏನು ಹಾಕಿಕೊಂಡಿದೆ ಅದನ್ನು ಸರಿಯಾದ ರೀತಿಯಲ್ಲಿ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ಶಿಕ್ಷಣದ ಬಗ್ಗೆ ನನ್ನ ಕೆಲವು ಸಲಹೆಗಳನ್ನು ತಮ್ಮ ಮುಂದಿಡಬಯಸುತ್ತೇನೆ. ಇವತ್ತು ನನ್ನ ಕ್ಷೇತ್ರದಲ್ಲಿ ಎಷ್ಟೋ ಸರ್ಕಾರಿ ಶಾಲೆಗಳಿವೆ. ಅವುಗಳು ಅತ್ಯಂತ ದುಃಸ್ಥಿತಿಯಲ್ಲಿ ಇದ್ದು ಅಲ್ಲಿ ಮಕ್ಕಳು ಓಡುವುದಕ್ಕೇ ಆಗದ ರೀತಿಯಲ್ಲಿದೆ. ಆ ಶಾಲೆಗಳಲ್ಲಿ ಜವಾನರೂ ಇರುವುದಿಲ್ಲ. ಆ ಮಕ್ಕಳೇ ಬೆಳಗ್ಗೆ ಹೋಗಿ ಶಾಲಾ ಕೊಠಡಿಗಳನ್ನು ಗುಡಿಸಬೇಕಾದಂಥ ಪರಿಸ್ಥಿತಿ ಈ ಬೆಂಗಳೂರು ನಗರದ ಶಾಲೆಗಳಲ್ಲಿ ಉದ್ಭವವಾಗಿದೆ. ಇದನ್ನು ಸರ್ಕಾರ ಬಹಳ ಸೂಕ್ಷ್ಮವಾಗಿ ಪರಿಗಣಿಸಿ ಕೂಡಲೇ ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ, ಮತ್ತು ಸರಿಯಾದ ರೀತಿಯಲ್ಲಿ ಈ ಶಿಕ್ಷಣವನ್ನು ಬೆಳೆಯಬೇಕೆಂದರೆ ಅದು ಕಾಲೇಜುಗಳಲ್ಲಾಗಲಿ, ಎಸ್.ಎಸ್.ಎಲ್.ಸಿ.ಯಲ್ಲಾಗಲಿ ಪರೀಕ್ಷೆಗಳಲ್ಲಿ ಕಾಪಿ ಹೊಡೆಯುವುದನ್ನು ಕಡ್ಡಾಯವಾಗಿ ನಿಲ್ಲಿಸಬೇಕು. ಏಕೆಂದರೆ ಕಾಪಿ ಹೊಡೆದು ಇವತ್ತು ಸುಮಾರು 25-30 ಪರ್ಸೆಂಟ್ ವಿದ್ಯಾರ್ಥಿಗಳು ಪಾಸಾಗಿ ಬರುತ್ತಿದ್ದಾರೆ. ಇದನ್ನು ಮೊದಲು ತಡೆಗಟ್ಟ ಬೇಕಾಗಿದೆ. ಇಲ್ಲದೇ ಹೋದರೆ ಈ ರೀತಿ ಕಾಪಿ ಹೊಡೆದು ಡಿಗ್ರಿಗಳನ್ನು ತೆಗೆದುಕೊಂಡು ಬರತಕ್ಕವರಿಗೆಲ್ಲಾ ಉದ್ಯೋಗವನ್ನು ಕೊಡುವುದು ಬಹಳ ಕಷ್ಟವಾಗುತ್ತದೆಂದು ಹೇಳಬಯಸುತ್ತೇನೆ.

ಇನ್ನು ಶಾಲಾ ಮಕ್ಕಳಿಗೆ ಮಿಡ್ ಡೇ ಮೀಲ್ಸ್ ಕೊಡುವ ಯೋಜನೆಯನ್ನು ನಮ್ಮ ಸರ್ಕಾರ ಹಾಕಿಕೊಂಡಿದೆ. ಇದರ ಬಗ್ಗೆ ಹೇಳುವುದಾದರೆ, ತಮಿಳುನಾಡಿನಲ್ಲಿ ದಿವಂಗತ ಎಂ.ಜಿ. ರಾಮಚಂದ್ರನ್‌ರವರು ಈ ಕಾರ್ಯಕ್ರಮವನ್ನು ಶಾಲಾ ಮಕ್ಕಳಿಗೆ ಕೊಟ್ಟು ಇಡೀ ಪ್ರಪಂಚದಲ್ಲೇ ಒಂದು ಒಳ್ಳೆಯ ಹೆಸರನ್ನು ತೆಗೆದುಕೊಂಡಿದ್ದಾರೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಂಥ ಒಂದು ಕಾರ್ಯಕ್ರಮವನ್ನು ಇವತ್ತು 1ನೇ ತರಗತಿಯಿಂದ 7ನೇ ತರಗತಿಯವರೆಗೆ ಶಾಲೆಗಳಿಗೆ ಹೋಗತಕ್ಕ ಮಕ್ಕಳು ಯಾರಿದ್ದಾರೆ ಅವರಿಗೆ ಊಟವನ್ನು (ಮಿಡ್ ಡೇ ಮೀಲ್ಸ್) ಕೊಡತಕ್ಕ ಕಾರ್ಯಕ್ರಮ ನಾವು ಹಾಕಿಕೊಂಡಿದ್ದೇವೆ.

ಗ್ರಾಮೀಣ ಪ್ರದೇಶದಲ್ಲಿ ಎಷ್ಟೋ ಪರಿಸಿಷ್ಟ ಜಾತಿ ಮತ್ತು ಪರಿಸಿಷ್ಟ ವರ್ಗದ ಮಕ್ಕಳು ಶಾಲೆಗಳಿಗೆ ಹೋಗದೆ ಬಡತನದ ಬೇಗೆಯಲ್ಲಿದ್ದಾರೆ, ಅವರ ತಂದೆತಾಯಿಗಳು ಆ ಮಕ್ಕಳಿಗೆ ಊಟವನ್ನು ಕೊಡದೆ, ಶಾಲೆಗಳಿಗೆ ಕಳುಹಿಸಲೂ ಆಗದಂಥ ಪರಿಸ್ಥಿತಿಯಲ್ಲಿರುವಾಗ ನಮ್ಮ ಸರ್ಕಾರದವರು ಇಂಥ ಕಾರ್ಯಕ್ರಮವನ್ನು ಹಾಕಿಕೊಂಡಿರತಕ್ಕದ್ದು ಆ ಮಕ್ಕಳಿಗೆ ಒಂದು ಶುಭ ಯೋಗ ಬಂದಂತಾಗಿದೆಯೆಂದು ನಾನು ಹೇಳಬಯಸುತ್ತೇನೆ. ಆ ಬಡ ತಂದೆತಾಯಿಗಳು ತಮ್ಮ ಮಕ್ಕಳನ್ನು ಊಟಕ್ಕೆ ಮತ್ತು ಪಾಠವನ್ನು ಕಲಿಯಲು ಶಾಲೆಗಳಿಗೆ ಕಳುಹಿಸಿಕೊಡುತ್ತಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ವಿದ್ಯುಚ್ಛಕ್ತಿಯ ಬಗ್ಗೆ ಹೇಳುವುದಾದರೆ, ಉತ್ಪಾದನೆ ಮತ್ತು ಬಳಸುವಿಕೆಗೋಸ್ಕರ ಕೋಟ್ಯಾಂತರ ರೂಪಾಯಿ ಹಣವನ್ನು ನಮ್ಮ ಕರ್ನಾಟಕ ಸರ್ಕಾರ ಖರ್ಚು ಮಾಡುತ್ತಿದೆ. ಇದರ ಬಗ್ಗೆ ಸರಿಯಾದ ಯೋಜನೆಗಳನ್ನು ಹಾಕಿಕೊಂಡು ಮುಖ್ಯವಾದ ಸ್ಥಳಗಳಲ್ಲಿ ಎಂ.ಯು.ಎಸ್.ಎಸ್. ಪವರ್ ಸ್ಟೇಷನ್‌ಗಳನ್ನು ಜಾಸ್ತಿ ಕಟ್ಟಿದರೆ ನಾವು ಬಹಳಷ್ಟು ವಿದ್ಯುಚ್ಛಕ್ತಿಯನ್ನು ಉಳಿಸಬಹುದು. ಈ ಎಂ.ಯು.ಎಸ್.ಎಸ್.ಪವರ್ ಸ್ಟೇಷನ್‌ಗಳನ್ನು ಸ್ಥಾಪಿಸುವುದಕ್ಕೆ ಸುಮಾರು 75 ಲಕ್ಷ ರೂ. ಆಗಬಹುದು.

ಒಂದು ಎಂ.ಇ.ಎಸ್.ಎಸ್. ಪವರ್ ಸ್ಟೇಷನ್‌ಗೆ ಸುಮಾರು 35 ಲಕ್ಷ ರೂಪಾಯಿಗಳು ಆಗಬಹುದು. ಇಂಥ ಒಂದು ಸ್ಟೇಷನ್‌ನ್ನು ಕೊಟ್ಟಲ್ಲಿ ಕೋಟ್ಯಾಂತರ ರೂಪಾಯಿ ಇವತ್ತು ಸರ್ಕಾರಕ್ಕೆ ಲಾಭ ಬರುತ್ತದೆನ್ನುವ ವಿಷಯವನ್ನು ಹೇಳುತ್ತೇನೆ. ಮತ್ತು ಈ ಗ್ರಾಮಾಂತರ ಪ್ರದೇಶಗಳಲ್ಲಿ ಪಂಪುಸೆಟ್ಟುಗಳು ಕೂಡ ಓಡಲಿಕ್ಕೆ ಒಳ್ಳೆಯ ಅವಕಾಶವಾಗುತ್ತದೆ. ರೈತರು ಸಹ ಹಣವನ್ನು ಉಳಿಸುತ್ತಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಸರ್ಕಾರ ಇಂದು "ಆರಾಧನ" ಎನ್ನುವ ಕಾರ್ಯಕ್ರಮವನ್ನು ಕೊಟ್ಟಿದೆ. ಇದು ಹರಿಜನರ ಕಾಲೋನಿ, ಲಂಬಾಣಿ ತಾಂಡಗಳಲ್ಲಿ, ವಡ್ಡರ ಕಾಲೋನಿಗಳಲ್ಲಿ ದುಸ್ಥಿತಿಗೊಂಡಿರುವ ದೇವಸ್ಥಾನಗಳನ್ನು ಸರಿಪಡಿಸುವುದಕ್ಕಾಗಿ ಬೇಕಾದಷ್ಟು ಹಣವನ್ನು ಸರ್ಕಾರ ಇಟ್ಟಿದೆ. ಆದರೆ ಇದರಲ್ಲಿ ನಾನು ಮಾನ್ಯ ರಾಮಕೃಷ್ಣ ಹೆಗಡೆಯವರು ಮತ್ತು ಮಾನ್ಯ ಬೊಮ್ಮಾಯಿಯವರು ಸರ್ಕಾರವನ್ನು ನಡೆಸುತ್ತಿದ್ದಾಗ ಇಂಥ ಕಡೆ ಷರಾಬ್ ಅಂಗಡಿಗಳನ್ನು ತೆಗೆದಿದ್ದರು. ಅದರಲ್ಲೂ ಜಾಸ್ತಿಯಾಗಿ ಪರಿಸಿಷ್ಟ ಜಾತಿ ಮತ್ತು ಪರಿಸಿಷ್ಟ ಪಂಗಡಗಳವರ ತಾಂಡಗಳಲ್ಲಿ ಷರಾಬ್ ಅಂಗಡಿಗಳನ್ನು ತೆರೆದಿದ್ದನ್ನು ಪೂರ್ತಿಯಾಗಿ ಅದನ್ನು ಇವತ್ತು ನಮ್ಮ ಸರ್ಕಾರದವರು ತಡೆಗಟ್ಟಲು ಕ್ರಮ ಕೈಗೊಂಡಿದ್ದರಿಂದ ಈ ಒಂದು ತಾಂಡಗಳಲ್ಲಿ, ಕೇರಿಗಳಲ್ಲಿ ಇರತಕ್ಕಂಥ ಪರಿಸಿಷ್ಟ ಜಾತಿ ಮತ್ತು ಪರಿಸಿಷ್ಟ ಪಂಗಡದವರನ್ನು ಉದ್ಧಾರ ಮಾಡಿದಂತಾಗುತ್ತದೆಂದು ಹೇಳಲು ಇಷ್ಟಪಡುತ್ತೇನೆ.

ಮತ್ತೆ ಪೋಲೀಸ್ ಇಲಾಖೆಯ ಬಗ್ಗೆ ಕೆಲವು ಸಲಹೆಗಳನ್ನು ಇಡುವುದಕ್ಕೆ ಇಷ್ಟಪಡುತ್ತೇನೆ. ನನ್ನ ಕ್ಷೇತ್ರದಲ್ಲಿ ಪೋಲೀಸ್ ಕ್ವಾರ್ಟರ್ಸ್ ಏನು ಇದೆ, ಆ ಪೋಲೀಸ್ ಕ್ವಾರ್ಟರ್ಸ್‌ಗಿಂತ ಜೈಲುಖಾನೆ ಎಷ್ಟೋ ಚೆನ್ನಾಗಿದೆ. ಅದರ ಬಗ್ಗೆ ಸುಮಾರು ಎಷ್ಟೋ ದಿವಸಗಳಿಂದ ನಮ್ಮ ಸರ್ಕಾರದ ಗಮನಕ್ಕೆ, ಮತ್ತು ಅಧಿಕಾರಿಗಳ ಗಮನಕ್ಕೆ ತಂದು ಲೆಟರ್‌ನ್ನು ಸಹ ಬರೆದಿದ್ದೇನೆ. ಆ ಪೋಲೀಸ್ ಕ್ವಾರ್ಟರ್ಸ್ ಯಾವಾಗ ಬೀಳುತ್ತದೋ ಹೇಳುವುದಕ್ಕಾಗುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಅಧಿಕಾರಿಗಳಿಗೆ, ಮಾನ್ಯ ಮಂತ್ರಿಗಳಿಗೆ ಲೆಟರ್‌ನ್ನು ಬರೆದಿದ್ದರೂ ಏನೂ ಪ್ರಯೋಜನವಾಗಲಿಲ್ಲ. ಈಗಾದರೂ ನಮ್ಮ ಸರ್ಕಾರದಿಂದ ಆ ಒಂದು ಮನೆಗಳನ್ನು ರಿಪೇರಿ ಮಾಡುವುದಕ್ಕೆ ಪಿ.ಡಬ್ಲ್ಯುಡಿ ವಶದಲ್ಲಿರತಕ್ಕಂಥ ಮನೆಗಳನ್ನು ಪೋಲೀಸ್ ಗೃಹ ನಿರ್ಮಾಣ ಸಹಕಾರಿ ಸಂಘಕ್ಕೆ ಕೊಟ್ಟು ಅವರ ಕೈಯಲ್ಲೇ ರಿಪೇರಿ ಮಾಡುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಟ್ಟಲ್ಲಿ, ಈ ಕೆಲಸ ಸುಮಗವಾಗಿ ನಡೆಯಲಿಕ್ಕೆ ಸಾಧ್ಯವಾಗುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಮುಖ್ಯವಾಗಿ ರಾಜ್ಯದ ಅಬಕಾರಿ ಬಗ್ಗೆ ಎರಡು ಸಲಹೆಗಳನ್ನು ಇಡಲಿಕ್ಕೆ ಇಷ್ಟಪಡುತ್ತೇನೆ, ನಾವು ನಿರೀಕ್ಷಿಸಿದ್ದು 550 ಕೋಟಿ ರೂಪಾಯಿಗಳು ಬರುತ್ತದೆಂದು. ಆದರೆ ಇವತ್ತು ನಾವು 400 ಕೋಟಿ ರೂಪಾಯಿ ಚಿಲ್ಲರೆ ಪಡೆಯಲು ಸಾಧ್ಯವಾಗುವುದು. ಈ ಒಂದು ಸಾರಾಯಿ ಆಕ್ಷನ್ ಹಾಕುವುದರ ಮುಖಾಂತರ ಈ ಆಕ್ಷನ್ ಹಾಕಿದ ಹಣ ನಮಗೆ ಫೈನಾನ್‌ಷಿಯಲ್ ಇಯರ್ ಎಂಡಿಂಗ್‌ನಲ್ಲಿ, ನಮಗೆ ಬರತಕ್ಕಂಥದ್ದು ಇದೆ. ಇದನ್ನು ವಸೂಲು ಮಾಡಲು ಸರ್ಕಾರದವರು ಯಾವುದಾದರೂ ಒಂದು ತರದ ಸೆಕ್ಯೂರಿಟಿಯನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಮ್ಮ ಆಯವ್ಯಯದಲ್ಲಿ ತೋರಿಸಿರುವ ಹಾಗೆ 18 ಕೋಟಿ ರೂಪಾಯಿಗಳನ್ನು ಇವತ್ತು ಸರ್ಕಾರ ಹಣ ವ್ಯಯದಲ್ಲಿ ಕೊರತೆಯಾಗಿ ತೋರಿಸಿದ್ದಾರೆ. ಕಂಟ್ರಾಕ್ಟರುಗಳು ಕೋರ್ಟಿಗೆ ಹೋಗಿದ್ದಾರೆಂದು ತಿಳಿಸಿದ್ದಾರೆ.

ಕೋರ್ಟಿಗೆ ಅವರು ಹೋಗುವುದಕ್ಕೆ ಮುಂಚೆ ಈ ಅಧಿಕಾರಿಗಳು ಏನು ಮಾಡುತ್ತಿದ್ದರು? ಏತಕ್ಕೆ ಹಣವನ್ನು ಸರಿಯಾದ ಟೈಮ್‌ನಲ್ಲಿ ಪಡೆಯಲಿಕ್ಕೆ ಆಗಲಿಲ್ಲವೆಂದು ಕೇಳಬೇಕಾಗಿದೆ. ಕೆಲವು ಅಧಿಕಾರಿಗಳು ಈ ವಿಷಯವನ್ನು ಮುಂಚೆಯೇ ಆ ಕಂಟ್ರಾಕ್ಟರುಗಳಿಗೆ ತಿಳಿಸಿ ಅವರುಗಳು ಕೋರ್ಟಿಗೆ ಹೋಗುವ ರೀತಿಯಲ್ಲಿ ಅಧಿಕಾರಿಗಳು ಮಾಡಿದ್ದಾರೆ, ಇದನ್ನು ತಡೆಯಬೇಕು. ಈಗಾಗಲೇ 18 ಕೋಟಿ ರೂಪಾಯಿಗಳನ್ನು ಕಳೆದುಕೊಂಡಿರುತ್ತೇವೆ. ಫೈನಾನ್‌ಷಿಯಲ್ ಇಯರ್ ಎಂದಿನಲ್ಲಿ ಮತ್ತೆ ನಮಗೆ ಅದೇ ಕಂಟ್ರಾಕ್ಟರ್‌ಗಳು ದುಡ್ಡನ್ನು ಕೊಡದೆ ವಂಚಿತರಾಗಬಹುದು. ಆದ್ದರಿಂದ ಸರ್ಕಾರದವರೇ ಅವರ ಅಂಗಡಿಗಳನ್ನು ತಮ್ಮ ವಶದಲ್ಲಿಟ್ಟುಕೊಂಡು ಡೇ ಟು ಡೇ ಏನು ಕಲೆಕ್ಷನ್ ಆಗುತ್ತದೆ ಆ ಹಣವನ್ನು ನಾವೇ ಇಟ್ಟುಕೊಂಡಲ್ಲಿ ಸರ್ಕಾರದ ಬೊಕ್ಕಸಕ್ಕೆ ಹಣ ಬರುತ್ತದೆಂದು ನಾನು ಸಲಹೆಯನ್ನು ತಮ್ಮ ಮುಂದಿಡುತ್ತೇನೆ.

ಇನ್ನು ಸಾಕ್ಷರತೆಯ ಬಗ್ಗೆ ನಾನು ಮಾತನಾಡಬೇಕೆಂದರೆ, ಈಗಾಗಲೇ ನಾವು ನಮ್ಮ ಕರ್ನಾಟಕದಲ್ಲಿ ಸಾಕ್ಷರತೆಯಲ್ಲಿ ಬಹಳ ಹಿಂದುಳಿದಿದ್ದೇವೆ. ಕೇರಳ ಮತ್ತು ಇತರ ಬೇರೆ ರಾಜ್ಯಗಳಿಗೆ ಸಾಕ್ಷರತೆಯ ಬಗ್ಗೆ ಹೋಲಿಸಿದಾಗ ನಮ್ಮ ಕರ್ನಾಟಕ ಬಹಳ ಹಿಂದುಳಿರುವುದು ಕಂಡುಬರುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ನಮ್ಮ ಕರ್ನಾಟಕದಲ್ಲಿ ಶೇಕಡಾ 40ರಷ್ಟು ಮಂದಿ ಸಾಕ್ಷರತೆಯನ್ನು ಹೊಂದಿರಬಹುದು. ಆದರೆ ಇನ್ನೂ ಸುಮಾರು 60 ಪರ್ಸೆಂಟ್ ಜನ ಸಾಕ್ಷರತೆಯನ್ನು ಹೊಂದಬೇಕಾಗಿದೆ. 1990-91ರ ಆಯವ್ಯಯದಲ್ಲಿ ಅಂದರೆ ಮಾರ್ಚ್ ಕೊನೆಯೊಳಗೆ ಬಿಜಾಪುರ ಜಿಲ್ಲೆಯಲ್ಲಿ 5.39 ಲಕ್ಷ ಅನಕ್ಷರಸ್ಥರಿಗೆ ರಾಯಚೂರು ಜಿಲ್ಲೆಯಲ್ಲಿ 5.91 ಲಕ್ಷ ಜನರಿಗೆ, ಮಂಡ್ಯ ಜಿಲ್ಲೆಯಲ್ಲಿ 4 ಲಕ್ಷ ಜನರಿಗೆ ಸಾಕ್ಷರತೆಯನ್ನು ಮಾಡಿಸುತ್ತೇವೆಂದು ನಮ್ಮ ಸರ್ಕಾರ ಹೇಳಿದೆ. 1991-92ನೇ ಸಾಲಿನಲ್ಲಿ ಸುಮಾರು 34.91 ಲಕ್ಷ ಜನರಿಗೆ ಇಡೀ ರಾಜ್ಯದಲ್ಲಿ ಸಾಕ್ಷರತೆಯನ್ನು ಕೊಡುವ ಕಾರ್ಯಕ್ರಮವನ್ನು ನಮ್ಮ ಸರ್ಕಾರ ಹಾಕಿಕೊಂಡಿದೆ. ಇಂಥ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ಜನರಿಗೆ ಕೊಡುವುದಾಗಿ ಕಾಂಗ್ರೆಸ್ಸಿನ ಚುನಾವಣಾ ಪ್ರಣಾಳಿಕೆಯಲ್ಲಿ ಏನು ಕೊಟ್ಟಿದೆ ಅದೆಲ್ಲವನ್ನು ಅಳವಡಿಸಿದೆ ದಿವಂಗತ ಶ್ರೀಮತಿ ಇಂದಿರಾಗಾಂಧಿಯವರ 20 ಅಂಶಗಳ ಕಾರ್ಯಕ್ರಮವನ್ನು ನಮ್ಮ ಆಯವ್ಯಯದಲ್ಲಿ ಅಳವಡಿಸಿದೆ ಎಂದು ಹೇಳಿ ನನಗೆ 5 ನಿಮಿಷಗಳ ಕಾಲ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ನನ್ನ ಧನ್ಯವಾದಗಳನ್ನು ಸಲ್ಲಿಸುತ್ತಾ ಎರಡು ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷಿಣಿಯವರು : ಇವತ್ತು ಬಹಳ ದೊಡ್ಡ ಪಟ್ಟಿ ಇದೆ; ಇವತ್ತೇ ಚರ್ಚೆಯನ್ನು ಮುಗಿಸಬೇಕಾಗುತ್ತದೆ. ಆದ್ದರಿಂದ ಸಮಯ ನೋಡಿಕೊಂಡು ಮಾತನಾಡಿ. ಈಗ ಬೈರೇಗೌಡರು.

ಶ್ರೀ ಸಿ. ಬೈರೇಗೌಡ: ಮಾನ್ಯ ಉಪಾಧ್ಯಕ್ಷಿಣಿಯವರೆ, ಈ ದಿವಸ ನಮ್ಮ ರಾಜ್ಯದ ಮುಖ್ಯಮಂತ್ರಿಗಳು.......

ಶ್ರೀ ಬಸವರಾಜ ರಾಯರೆಡ್ಡಿ : ಯಾರೂ ಮಂತ್ರಿಗಳೇ ಇಲ್ಲ.

ಉಪಾಧ್ಯಕ್ಷಿಣಿಯವರು : ರೇಷ್ಮೆ ಇಲಾಖೆಯ ಮಂತ್ರಿಗಳು ಇದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ : ಅವರು ಯಾವುದೋ ಕೆಲಸಕ್ಕೆ ಎಂಗೇಜ್ ಆಗಿದ್ದಾರೆ. ಆದ್ದರಿಂದ ಸದನವನ್ನು ಮುಂದೂಡಿ. ಇದಕ್ಕೆ ತಮ್ಮ ಆತ್ಮ ಒಪ್ಪಿದರೆ ಮಾಡಿ.

ಉಪಾಧ್ಯಕ್ಷಣಿಯವರು : ಶ್ರೀ ಮುನಿಯಪ್ಪನವರು ಇದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ : ಮೊಗಸಾಲೆಯಲ್ಲಿ ಬಹಳ ಮಂದಿ ಮಂತ್ರಿಗಳು ಇದ್ದಾರೆ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೆಗೌಡ : ಮುನಿಯಪ್ಪನವರು ರೇಷ್ಮೆ ಖಾತೆಯ ಸಚಿವರು ನಿಮಗೆ ಅವರ ಪರಿಚಯ ಇಲ್ಲವೆಂದು ಕಾಣುತ್ತದೆ.

ಉಪಾಧ್ಯಕ್ಷಿಣಿಯವರು : ಮಾನ್ಯ ಬಸವಲಿಂಗಪ್ಪನವರು ಇಲ್ಲೇ ಇದ್ದಾರೆ, ಬರುತ್ತಿದ್ದಾರೆ, ಮಾತನಾಡಿ.

ಶ್ರೀ ಬಸವರಾಜ ರಾಯರೆಡ್ಡಿ : ಮಂತ್ರಿಗಳನ್ನು ಕರೆಸಿ, ಇಲ್ಲದಿದ್ದರೆ ಸದನವನ್ನು ಮುಂದೂಡಿ.

ಉಪಾಧ್ಯಕ್ಷಿಣಿಯವರು : ಸದನವನ್ನು ಮುಂದೂಡುವುದು ಬೇಕಾಗಿಲ್ಲ, ಮಂತ್ರಿಗಳು

(ಗೊಂದಲ)

ಶ್ರೀ. ಟಿ.ಎಂ. ಮಂಜುನಾಥ್ : ನಿಮ್ಮ ವಿರೋಧಪಕ್ಷದ ನಾಯಕರು, ಉಪನಾಯಕರು ಯಾರೂ ಇಲ್ಲವಲ್ಲ. ಮುಂದಿನ ಸಾಲೆಲ್ಲಾ ಖಾಲಿ ಇದೆಯಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ನಮ್ಮದು ಮೀಟಿಂಗ್ ನಡೆಯುತ್ತಿದೆ, ನಮಗೆ ಈಗ ಇಲ್ಲಿ ಬೇಕಾಗಿರುವುದು ಮಂತ್ರಿಗಳು.

ಉಪಾಧ್ಯಕ್ಷಿಣಿಯವರು: ಮಂತ್ರಿಗಳು ಬರುತ್ತಿದ್ದಾರೆ.

(ಗೊಂದಲ)

ಉಪಾಧ್ಯಕ್ಷಣಿಯವರು: ಬೈರೇಗೌಡರೆ, ಮಾತನಾಡಿ.

(ಗೊಂದಲ)

ಶ್ರೀ ಜಿ. ರಾಜುಗೌಡ : ನೀವು ಕುಳಿತುಕೊಳ್ಳಿ ಮಂತ್ರಿಗಳು ಬರುತ್ತಾರೆ.

ಶ್ರೀ ಬಸವರಾಜ ರಾಯರೆಡ್ಡಿ: ಕುಳಿತುಕೊಳ್ಳಿ ಎಂದು ಕೇಳುವುದಕ್ಕೆ ನೀವು ಯಾರು? ಅಧ್ಯಕ್ಷರು ಹೇಳಲಿ.

ಉಪಾಧ್ಯಕ್ಷಣಿಯವರು: ರಾಜೂಗೌಡರೆ, ತಾವು ಇಲ್ಲಿಂದ ಮಾತನಾಡುವುದು ಬೇಡ. (ಮಾನ್ಯ ಸದಸ್ಯರಾದ ರಾಜುಗೌಡರು ತಮ್ಮ ಸ್ಥಾನದಲ್ಲಿರದೆ ಬೇರೆ ಸ್ಥಾನದಲ್ಲಿದ್ದರು.) ಶ್ರೀಯುತ ಬೈರೇಗೌಡರೆ, ತಾವು ಗೌರ್ನರ್ಸ್ ಅಡ್ರೆಸ್ ಮೇಲೆ ಒಂದೂವರೆ ಘಂಟೆ ಮಾತನಾಡಿದ್ದೀರಿ. ಇದರಲ್ಲಿ ಕಡಿಮೆ ಟೈಂ ತೆಗೆದುಕೊಂಡರೆ ಬೇರೆಯವರಿಗೆ ಅವಕಾಶವಾಗುತ್ತದೆ.

ಶ್ರೀ ಸಿ. ಬೈರೇಗೌಡ: ಪ್ರಯತ್ನ ಮಾಡುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ: ಮಂತ್ರಿಗಳನ್ನು ಕರೆಸಿ. ಅಥವಾ ಸದನವನ್ನು ಮುಂದುಮಾಡಿ.

ಉಪಾಧ್ಯಕ್ಷಣೇಯವರು: ಮಂತ್ರಿಗಳು ಬಂದಿದ್ದಾರೆ.

ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಉಪಾಧ್ಯಕ್ಷಿಣಿಯವರೇ, ಇಲ್ಲಿ ನಾನು ಮಾತನಾಡಬೇಕಾಗಿದ್ದರೆ ಬಹಳ ಶ್ರಮವಹಿಸಿ ಏನೇನು ನಡೆದಿದೆ. ಏನೇನು ಆಗುತ್ತಿದೆ ಎಂಬ ಬಗ್ಗೆ ಅನೇಕ ದಾಖಲೆಗಳನ್ನು ಮತ್ತು ಈ ಸದನದ ವರದಿಗಳನ್ನು ಉಲ್ಲೇಖಿಸಿ ಮಾತನಾಡತಕ್ಕ ಅಭ್ಯಾಸವನ್ನು ಇಟ್ಟುಕೊಂಡಿದ್ದೇನೆ. ಅದೇ ಕೆಲಸವನ್ನು ನಾನು ಹಿಂದೆ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡತಕ್ಕ ಸಂದರ್ಭದಲ್ಲಿ ಕೂಡ ಮಾಡಿದ್ದೆ. ಆದರೆ ಇವತ್ತು ಸಂಬಂಧಪಟ್ಟ ಮಂತ್ರಿಗಳಿಲ್ಲ. ತಾವು ಹೇಳುತ್ತೀರಿ ಬಸವಲಿಂಗಪ್ಪನವರಿದ್ದಾರೆ, ಹಿಂದುಗಡೆ ಮುನಿಯಪ್ಪನವರಿದ್ದಾರೆ ಎಂದು. ದೈಹಿಕವಾಗಿ ಅವರು ಇಲ್ಲಿರುತ್ತಾರೆ. ಆದರೆ ತಲೆ ಎಲ್ಲೆಲ್ಲಿ ಉಪಯೋಗಿಸುತ್ತಾರೋ ಗೊತ್ತಿಲ್ಲ, ಇದಕ್ಕೆ ಉದಾಹರಣೆ ಏನೆಂದರೆ ಹಿಂದೆ ಮಾಡಿದ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಮಾತನಾಡಿದಾಗ ಏನೇನು ಗುರುತರವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದೆ ಅದು ರಾಜ್ಯದ ಆಡಳಿತದ ಮೇಲೆ ಪರಿಣಾಮ ಬೀರತಕ್ಕ ವಿಚಾರಗಳು. ಅದ್ಯಾವುದಕ್ಕೂ ಮುಖ್ಯಮಂತ್ರಿಗಳು ಉತ್ತರ ಕೊಡತಕ್ಕ ಪ್ರಯತ್ನವನ್ನೇ ಮಾಡಿಲ್ಲ. ಅದು ಏನು ತೋರಿಸುತ್ತದೆಂದರೆ ದೈಹಿಕವಾಗಿ ಇಲ್ಲಿರಬೇಕು, ಇರುತ್ತಾರೆ. ಸರ್ಕಾರಕ್ಕೆ ನಾನು ಹೇಳುವುದು ಕೇಳಿಸುವುದಿಲ್ಲ. ಅದಕ್ಕೆ ಕಿವಿ ಇದೆಯೋ ಇಲ್ಲವೋ ಗೊತ್ತಿಲ್ಲ. ಇದನ್ನು ನಾನು ತೀವ್ರವಾಗಿ ಪ್ರತಿಭಟಿಸಿ ತಾವು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಅದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತಾ.....

ಶ್ರೀ ಬಿ. ಬಸವಲಿಂಗಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಬೈರೇಗೌಡರು ಹೇಳಿದ್ದೆಲ್ಲಾ ಮಾಡುತ್ತೇವೆ. ಪುನಃ ಇಲ್ಲಿ ತಕರಾರು ಏತಕ್ಕೆ? ನಾವು ದೈಹಿಕವಾಗಿಯೂ ಇರುತ್ತೇವೆ, ಮಾನಸಿಕವಾಗಿಯೂ ಇರುತ್ತೇವೆ. ನೀವು ಹೇಳಿದ್ದೆಲ್ಲಾ ಕೇಳಿದ್ದೇವೆ.

ಶ್ರೀ ವಿ. ಮುನಿಯಪ್ಪ: ನೀವು ಪ್ರತಿಭಟಿಸಿ ಕುಳಿತುಕೊಳ್ಳುತ್ತೀರಿ ಅಂದುಕೊಂಡಿದ್ದೆ. ಮಾತನಾಡುತ್ತಿದ್ದೀರಲ್ಲ.

ಶ್ರೀ ಸಿ. ಬೈರೇಗೌಡ: ನಾನು ಪ್ರಸ್ತಾಪ ಮಾಡಿದ ಅನೇಕ ವಿಚಾರಗಳಿಗೆ ಉತ್ತರ ಬರಲಿಲ್ಲ. ಕೋಟ್ಯಾಂತರ ರೂಪಾಯಿಗಳ ದುರ್ವ್ಯವಹಾರ ಆಗಿರುವುದಕ್ಕೆ, ಸಾರ್ವಜನಿಕ ಹಣ ಹಾಳಾಗಿರುವ ವಿಚಾರ ಪ್ರಸ್ತಾಪ ಮಾಡಿದ್ದೆ. ಅದ್ಯಾವುದಕ್ಕೂ ಉತ್ತರ ಕೊಡಲಿಲ್ಲ. ಅವರು ಕ್ರಮ ತೆಗೆದುಕೊಂಡರೆ ಅಷ್ಟೇ ಸಾಕು. ಕ್ರಮ ತೆಗೆದುಕೊಂಡಿರುವುದೂ ಕೂಡ ಇಲ್ಲ. ಆದ್ದರಿಂದಲೇ ಪ್ರತಿಭಟನೆ ಸೂಚಿಸುತ್ತೇನೆ ಎಂದು ಹೇಳಿದ್ದು. ನನ್ನ ಕೆಲಸವನ್ನು ನಾನು ರಾಜ್ಯದ ಹಿತದೃಷ್ಟಿಯಿಂದ. ಜನತೆಯ ಹಿತದೃಷ್ಟಿಯಿಂದ ಮಾಡಬೇಕಾಗಿದೆ. ಆ ಕೆಲಸಕ್ಕೆ ನಾನು ನಿಂತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಅರ್ಥಮಂತ್ರಿಗಳಾಗಿರತಕ್ಕ ಮಾನ್ಯ ಬಂಗಾರಪ್ಪನವರು ತಮ್ಮ ಮೊದಲೇ ಆಯವ್ಯಯ ಪತ್ರವನ್ನು ಸದನದ ಒಪ್ಪಿಗೆಗಾಗಿ ಅಂದರೆ ತಾತ್ಕಾಲಿಕವಾಗಿ ಓಟ್ ಆನ್ ಅಕೌಂಟ್ ಒಪ್ಪಿಗೆಗಾಗಿ ಈ ಸಭೆಯ ಮುಂದೆ ಇಟ್ಟಿದ್ದಾರೆ. ಇದನ್ನು ಗತ್ಯಂತರವಿಲ್ಲದೆ ಅನ್ಯ ಮಾರ್ಗವಿಲ್ಲದೆ ವಿರೋಧಿಸಲೇಬೇಕಾಗಿದೆ. ಕಾರಣ ಏನೆಂದರೆ ಈ ರಾಜ್ಯದಲ್ಲಿ ಒಂದು ಪರಿಪಾಠ ಬಂದಿದೆ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಮೇಲೆ ಪರಿಪಾಠ ಏನು ಬಂದಿದೆ ಎಂದರೆ ಯಾರು ಮುಖ್ಯಮಂತ್ರಿಗಳಾಗುತ್ತಾರೆ, ಯಾವ ಭಾಗದಿಂದ ಅವರು ಬರುತ್ತಾರೆ ಆ ಭಾಗಕ್ಕೆ ಅವರು ಸೀಮಿತವಾಗಿ ಮುಖ್ಯಮಂತ್ರಿಗಳಾಗಿದ್ದಾರೆ ಎಂಬ ಭಾವನೆ ಇವತ್ತಿನ ದಿವಸ ನನಗಂತೂ ಕೂಡ ಬಂದಿದೆ.

ಕಾರಣ ಏನು ಎಂದರೆ ಹಿಂದೆ ಮಾನ್ಯ ವೀರೇಂದ್ರ ಪಾಟೀಲರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು. ಅವರ ಕಾಲದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿಗಾಗಿ ಒಂದು ವಿಶೇಷವಾಗಿ ಅಭಿವೃದ್ಧಿ ಮಂಡಲಿಯನ್ನು ಸ್ಥಾಪನೆ ಮಾಡಿದರು. ಅದಕ್ಕೆ 50 ಕೋಟಿ ರೂಪಾಯಿವರೆಗೆ ಹಣ ಕೊಟ್ಟಿದ್ದಾರೆ. ನಾನು ಅದನ್ನು ಮಾಡಬಾರದು ಎಂದು ಹೇಳುವುದಿಲ್ಲ, ಅದನ್ನು ಸ್ವಾಗತ ಕೂಡ ಮಾಡಿದ್ದೇನೆ. ಅದೇ ರೀತಿ ಈ ರಾಜ್ಯದ ಮಲೆನಾಡು ಪ್ರದೇಶದಿಂದ ಬಂದಿರತಕ್ಕವರು ಬಂಗಾರಪ್ಪನವರು. ಅವರು ಬಂದ ತಕ್ಷಣ ಅವರಿಗೆ ಬೇರೆ ಏನೂ ಕಾಣಲಿಲ್ಲ. ಅವರಿಗೆ ಕಂಡಿದ್ದು ಮಲೆನಾಡು ಪ್ರದೇಶ ಮಾತ್ರ. ಒಂದೆರಡು ಅಂಕಿ ಅಂಶಗಳನ್ನು ನಾನು ಸದನದ ಮುಂದೆ ಇಟ್ಟರೆ ಅದು ಸೂಕ್ತವೆಂದು ನಾನು ಭಾವಿಸಿದ್ದೇನೆ.

ತಾವು ಇಲ್ಲಿ ಎಕನಾಮಿಕ್ ಸರ್ವೆಯನ್ನು ಕೊಟ್ಟಿದ್ದೀರಿ. ಎಕನಾಮಿಕ್ ಸರ್ವೆಯನ್ನು ನಾವು ಪರಿಶೀಲನೆ ಮಾಡಿ ನೋಡಿದರೆ ಅದರಲ್ಲಿ ಕೋಲಾರ ಜಿಲ್ಲೆ ಕೊನೆಯಲ್ಲಿದೆ. ಇವೊತ್ತಿನ ದಿವಸ ಇದನ್ನು ಸಭೆಯ ಗಮನಕ್ಕೆ ಮತ್ತು ರಾಜ್ಯದ ಜನತೆಯ ಗಮನಕ್ಕೆ ತರಬೇಕಾದ್ದು ನನ್ನ ಕರ್ತವ್ಯ. ಮಾನ್ಯ ಸಭಾಧ್ಯಕ್ಷಿಣಿಯವರೇ, ನಾನು ಎಲ್ಲಾ ಜಿಲ್ಲೆಗಳ ಬಗ್ಗೆ ಓದುವುದಕ್ಕೆ ಹೋಗುವುದಿಲ್ಲ. ಇಲ್ಲಿ ಪರ್‌ಕ್ಯಾಪಿಟ ಇನ್‌ಕಂ ಬಳ್ಳಾರಿ ಜಿಲ್ಲೆಯಲ್ಲಿ ರೂ. 3,789.50, ಬೀದರ್ 2.776.98, ಅದೇ ರೀತಿ ಗುಲ್ಬರ್ಗ 3,154.47, ರಾಯಚೂರು 2,838.49 ಮತ್ತು ಕೋಲಾರ 2,421.93. ಇದು ನಾನು ಹೇಳುವ ಅಂಕಿ-ಅಂಶ ಅಲ್ಲ. ಸರ್ಕಾರದಿಂದ ಕೊಟ್ಟಿರತಕ್ಕದ್ದು. ಇದನ್ನು ಗಮನಿಸಿದರೆ, ಏನು ಅರ್ಥವಾಗುತ್ತದೆಂದರೆ, ಇಲ್ಲಿ ಯಾರು ಮುಖ್ಯಮಂತ್ರಿಗಳಾಗುತ್ತಾರೋ, ಶ್ರೀ ಬಂಗಾರಪ್ಪನವರು ಆಗಬಹುದು, ಮಾನ್ಯ ವಿರೋಧಪಕ್ಷದವರು ಆಗಬಹುದು, ಅದಲ್ಲಿ, ಅವರು ಸಮಗ್ರವಾಗಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿರಬೇಕು. ಆದರೆ, ರಾಜ್ಯದ ದುರಾದೃಷ್ಟ, ಅವರು ಕೇವಲ

ಕರ್ನಾಟಕದ ಮುಖ್ಯಮಂತ್ರಿಯಾಗಿ ಮಾಡದೇ ಇರತಕ್ಕಂಥ ಉದಾಹರಣೆ ನಮ್ಮೆದುರಿಗಿದೆ. ಆದುದರಿಂದ, ನಾನು ಈ ಸಂದರ್ಭದಲ್ಲಿ ಇದನ್ನು ಪ್ರಚಾರ ಮಾಡಲಿಕ್ಕೆ ಬಯಸುತ್ತೇನೆ. ಕೋಲಾರ ಜಿಲ್ಲೆಯ ಪಕ್ಕದಲ್ಲಿರತಕ್ಕ ಬೆಂಗಳೂರು ಗ್ರಾಮಾಂತರ, ತುಮಕೂರು, ಚಿತ್ರದುರ್ಗ ಇಂಥಹ ಜಿಲ್ಲೆಗಳಲ್ಲಿ ಮಳೆ ಬೀಳದೆ ಕುಡಿಯುವ ನೀರಿಗೆ ತಾಪತ್ರಯವಾಗಿದೆ. ಈ ವಿಷಯದ ಬಗ್ಗೆ ಸದನದಲ್ಲಿ ಈಗಾಗಲೇ ಮೂರು ಬಾರಿ ಚರ್ಚೆಯಾಗಿದೆ. ಆದುದರಿಂದ, ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ, ಯಾವ ಮುಖ್ಯಮಂತ್ರಿಯೇ ಆಗಲಿ, ಯಾವುದೇ ಒಂದು ಪ್ರದೇಶದಿಂದ ಚುನಾಯಿತರಾಗಿ ಬಂದಿದ್ದರೆ, ಅವರು ಏಕೀಕೃತ ಕರ್ನಾಟಕದ ಮುಖ್ಯಮಂತ್ರಿಯಾಗಿ ಕೆಲಸ ಮಾಡಬೇಕು. ಇಲ್ಲಿ ಜನತೆಗೆ ಏನು ಅನಾನುಕೂಲ, ತೊಂದರೆ ಇದೆ? ಅದನ್ನು ಬಗೆಹರಿಸತಕ್ಕ ಒಂದು ಕಾರ್ಯಕ್ರಮವನ್ನು ಹಾಕಬೇಕೇ ವಿನಾ ಒಂದು ಪ್ರದೇಶಕ್ಕೆ ಹಾಕಿಕೊಳ್ಳುವ ಕಾರ್ಯಕ್ರಮಗಳನ್ನು ಇನ್ನು ಮುಂದಾದರೂ ಕೈಬಿಡಬೇಕು.

ಈಗ ಮಾಡಿದ್ದಾರೆ, ಸಂತೋಷ.. ಆದರೆ, ಅದೇ ರೀತಿಯಲ್ಲಿ ಉಳಿದಿರತಕ್ಕ ಇತರ ಪ್ರದೇಶಗಳಲ್ಲಿಯೂ ಕೂಡಾ ಅಭಿವೃದ್ಧಿಪಡಿಸತಕ್ಕಂಥ ಕಾರ್ಯಕ್ರಮ ಹಾಕಿಕೊಳ್ಳಬೇಕೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷಿಣಿಯವರೇ, ಇದೇ ರೀತಿ ಇವೊತ್ತಿನ ದಿವಸ ರಾಜ್ಯಕ್ಕೆ ಹೊಸ ಹೊಸ ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ಆದರೆ, ಕೆಲವೊಂದು ಕಾರ್ಯಕ್ರಮಗಳಿಗೆ ಹಣ ಬೇಕು, ಹಣ ಬರಬೇಕು. ಅಂಕಿ-ಅಂಶಗಳ ಪ್ರಕಾರ ಇವೊತ್ತು ಎಷ್ಟು ಹಣ ಬರಬೇಕಾಗಿತ್ತೋ ಅಷ್ಟು ಹಣ ಇನ್ನೂ ಕೂಡಾ ಬಂದಿಲ್ಲ. ಬಂದಿಲ್ಲದಿರತಕ್ಕ ಉದಾಹರಣೆಯನ್ನು ಈಗಾಗಲೇ ಈ ಚರ್ಚೆಯಲ್ಲಿ ಭಾಗವಹಿಸಿರತಕ್ಕಂಥ ಮಾನ್ಯ ಶ್ರೀ ಘೋರ್ಪಡೆಯವರು ಮತ್ತು ಮಾನ್ಯ ಸದಸ್ಯರು ಹೇಳಿದ್ದಾರೆ. ಕುಡಿಯುವ ನೀರಿಗಾಗಿ ಹೆಚ್ಚುವರಿ ಬರತಕ್ಕಂಥ ಆದಾಯದಲ್ಲಿ 25 ಕೋಟಿ ರೂ. ಕೊಡುತ್ತೇವೆಂಬ ಮಾತನ್ನು ಕೂಡಾ ಹೇಳಿದ್ದಾರೆ. ನಾನು ಈ ವಾದಕ್ಕೆ ಎಲ್ಲಾ ವಿವರಗಳನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದು ಉದಾಹರಣೆ ಮಾತ್ರ ಕೊಡುವುದಕ್ಕೆ ಇಷ್ಟಪಡುತ್ತೇನೆ. ರೂ. 25 ಕೋಟಿಯಲ್ಲಿ ಒಂದು ಪೈಸೆಯೂ ಕೊಡಲಿಲ್ಲ. ಅದು ಕೊಡದೇ ಇದ್ದರೆ, ಮಾನ್ಯ ಶ್ರೀ ಘೋರ್ಪಡೆಯವರು ನಿನ್ನೆ ದಿವಸ ಹೇಳಿದ್ದಾರೆ, ಬಜೆಟ್‌ನಲ್ಲಿ ಏನೇನು ಕಾರ್ಯಕ್ರಮ ಇದೆ, ಆ ಕಾರ್ಯಕ್ರಮಗಳಲ್ಲಿರತಕ್ಕಂಥ ಹಣವನ್ನು ಕುಡಿಯುವ ನೀರಿಗಾಗಿ ಬಿಡುಗಡೆ ಮಾಡತಕ್ಕಂಥ ಪರಿಸ್ಥಿತಿಗೆ ಬಂದಿದ್ದೇವೆಂದು ಆಡಳಿತ ಪಕ್ಷದ ಸದಸ್ಯರು ಹೇಳಿದ ಮೇಲೆ, ಅದಕ್ಕಿಂತ ಮುಂದೆ ಹೋಗಿ ಹೇಳುವುದು ಉಚಿತವಲ್ಲವೆಂದು ಭಾವಿಸುತ್ತೇನೆ. 55 ಕೋಟಿ ರೂಪಾಯಿಯನ್ನು ನೀರಾವರಿಗೆ ಒದಗಿಸಿದ್ದರಲ್ಲಿ ಎಷ್ಟು ಖರ್ಚಾಗಿದೆ ಎಂದು ಇಲ್ಲಿ ಹೇಳಿದ್ದೇನೆ ಅದು ಕಡತದಲ್ಲಿ ಇದೆ. ಮತ್ತೊಂದು ಸಾರಿ ಹೇಳುವುದಕ್ಕೆ ಹೋಗುವುದಿಲ್ಲ.

ಇದಕ್ಕೆ ಕಾರಣವೇನೆಂದರೆ ಸರಕಾರಕ್ಕೆ ಯಾವ್ಯಾವ ಮೂಲಗಳಿಂದ ಆದಾಯ ಬರಬೇಕಾಗಿತ್ತು ಆ ಮೂಲಗಳಿಂದ ಆದಾಯ ಬರುತ್ತಿಲ್ಲ. ಅದರಲ್ಲೂ ಮಾನ್ಯ ಬಂಗಾರಪ್ಪನವರ ಸರಕಾರ ಬಂದ ಮೇಲೆ ಈ ರಾಜ್ಯದ ಹಣಕಾಸಿನ ಅವ್ಯವಸ್ಥೆ, ದುರ್ವ್ಯವಸ್ಥೆ ಯಥೇಚ್ಛವಾಗಿ ಇವತ್ತಿನ ದಿವಸ ನಡೆಯುತ್ತಿದೆ. ಇದಕ್ಕೆ ಇವತ್ತಿನ ದಿವಸ ಬಡಾಯಿಯನ್ನು ಕೊಚ್ಚಿ ಕೊಂಡಿದ್ದರೆ. ಯಾವುದರಲ್ಲಿ ಅಂದರೆ ಈ ರಾಜ್ಯದ ಅಬಕಾರಿ ವಿಚಾರದಲ್ಲಿ 556 ಕೋಟಿ ರೂಪಾಯಿಗಳ ಹಣ ಬರಬೇಕಾಗಿದೆ ಎಂದು ಹೇಳಿದ್ದಾರೆ. ಆದರೆ ಅದು ಬರುತ್ತಿಲ್ಲ. ಅದು 426.27 ಕೋಟಿ ರೂಪಾಯಿ ಎಂದು ಅವರೇ ಹೇಳಿಕೊಂಡಿದ್ದಾರೆ. ಇದಕ್ಕೆ ಕಾರಣ ಏನು ಎಂದರೆ ಈ ಮುಖ್ಯಮಂತ್ರಿಗಳ ಈ ಭಾಷಣವೇನು ಇದೆ ಇದು ಈ ರಾಜ್ಯದ ಎಕ್ಸೈಸ್ ದೊರೆಗಳ ಬ್ರೀಫ್ ಕೇಸಿನಿಂದ ಹೊರಗಡೆ ಬಂದಿರತಕ್ಕಂತಹ ವರದಿ ಇದು.

ಶ್ರೀ ಕೆ. ಶಿವಮೂರ್ತಿ: ಮಾನ್ಯ ಬೈರೇಗೌಡರು ಬಹಳ ಚೆನ್ನಾಗಿ ಭಾಷಣ ಮಾಡುತ್ತಿದ್ದಾರೆ. ಅವರು ಹಿಂದೆ ಎಕ್ಸೈಸ್ ಮಂತ್ರಿಗಳಾಗಿದ್ದರು ಎಂದು ಅನ್ನಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್: ಮೀನುಗಾರಿಕಾ ಮಂತ್ರಿಗಳಾಗಿದ್ದರು. ಮೀನಿಗೂ ಬೀರಿಗೂ ಸಂಬಂಧವಿಲ್ಲ. ಮೀನು ಎಲ್ಲಿ? ಬೀರು, ಬ್ರಾಂದಿ ವಿಸ್ಕಿ ಎಲ್ಲಿ? ಅವರು ಕುಡಿಯುವುದನ್ನೂ ನಾನು ನೋಡಿಲ್ಲ.

ಶ್ರೀ ಕೆ. ಶಿವಮೂರ್ತಿ : ಆದರೆ ಅದರ ಬಗ್ಗೆ ಆಳವಾದ ಅಗಾಧವಾದ ಪಾಂಡಿತ್ಯವಿದೆ.

ಶ್ರೀ ವಾಟಾಳ್ ನಾಗರಾಜ್ : ಅದು ನನಗೆ ಗೊತ್ತಿಲ್ಲ, ಅಗೋಚರವಾಗಿ ತಾವು ಕಂಡು ಹಿಡಿದಿರಬಹುದು.

ಶ್ರೀ ಕೆ. ಶಿವಮೂರ್ತಿ : ಉತ್ತಮವಾದ ಸಲಹೆ ಕೊಡಲಿ ಈಗ ಏಕೆ ಈ ಪ್ರಸಕ್ತ ದೂರೆಗಳಿಂದ ಬಂದಿರುವುದು ಎಂದು ಹೇಳುತ್ತಿದ್ದಾರೆ ಅದು ಸರಿಯಲ್ಲ. ತಮ್ಮ ಸಲಹೆ ಇದ್ದರೆ ಕೊಡಿ ಒಪ್ಪಿಕೊಳ್ಳುತ್ತೇನೆ.

ಶ್ರೀ ಬನ್ನಿಕೋಡ್ ಎಚ್. ಬಸಪ್ಪ: ಅವರು ಅದನ್ನೇ ಹೇಳುವುದಕ್ಕೆ ಹೊರಟಿದ್ದಾರೆ ಕೇಳಿ.

ಶ್ರೀ ಸಿ. ಬೈರೇಗೌಡ: ಏನೇನಾಗಿದೆ ಎಂದು ಹೇಳುವುದಕ್ಕೇ ನಾನು ಇಲ್ಲಿ ನಿಂತಿದ್ದೇನೆ. ಇವತ್ತು ಹೊಸದಾಗಿ ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿಲ್ಲ.

ಶ್ರೀ ಆರ್.ಎನ್. ನಾಯಕ್: ಪುಸ್ತಕಗಳು ಪ್ರಿಂಟಿಂಗ್ ಪ್ರೆಸ್‌ನಿಂದ ಬರುತ್ತವೆ. ಅಷ್ಟೂ ಸಾಮಾನ್ಯ ಜ್ಞಾನ ಇಲ್ಲದಿದ್ದರೆ ಏನು ಮಾಡುವುದಕ್ಕಾಗುತ್ತದೆ? ಎಕ್ಸೈಸ್ ದೊರೆಗಳಿಂದ ಬ್ಯಾಗಿನಿಂದ ಈಚೆಗೆ ಬರುತ್ತದೆಂದು ಹೇಳುತ್ತಿದ್ದಿರಿ. ನಿಮ್ಮ ಸಾಮಾನ್ಯ ನಾಲೆಡ್ಜ್ ಎಲ್ಲಿ ಹೋಯ್ತಿತು.

ಶ್ರೀ ಸಿ. ಬೈರೇಗೌಡ: ಎಕ್ಸೈಸ್ ದೊರೆಗಳ ಬ್ರೀಫ್‌ಕೇಸ್‌ನಿಂದ ಬಂತೋ ಅಥವಾ ಅವರ ಜೇಬಿನಿಂದ ಬಂತೋ ಎನ್ನುವುದನ್ನು ತಿಳಿಸುತ್ತೇನೆ. ಯಾರ ಜೇಬಿನಿಂದ ಬಂತು ಎನ್ನುವುದನ್ನು ತಿಳಿಸುತ್ತೇನೆ. ನಾನು ಮೊದಲ ಬಾರಿಗೆ ಈ ಮಾತನ್ನು ಹೇಳುತ್ತಿಲ್ಲ, ನಮ್ಮ ಸರಕಾರವಿದ್ದಾಗಲೂ ಕೂಡ ಅವತ್ತೂ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಒಂದು ದಿವಸಕ್ಕೆ ಒಂದು ಕೋಟಿ ರೂಪಾಯಿ ನಷ್ಟವಾಗುತ್ತದೆ ಹಣ ಪೋಲಾಗುತ್ತದೆಂದು ಅವತ್ತೂ ಹೇಳಿದ್ದೆ. ಆವತ್ತಿನ ದಿವಸ ಕೆಲವರು ಲಘುವಾಗಿ ಮಾತನಾಡಿದ್ದೂ ಉಂಟು ಬೇರೆ ಬೇರೆ ಮಾತನಾಡಿದ್ದೂ ಉಂಟು. ನಾನು ಆವತ್ತಿನ ದಿವಸ ಏನು ಹೇಳಿದ್ದೆ ಅದು ಅಕ್ಷರಶಃ ಸಾಬೀತಾಗಿದೆ ಇವತ್ತಿನ ದಿವಸ. ಹಗಲು ಹೊತ್ತಿನಲ್ಲಿ ಯಾವ ಬಾವಿಯನ್ನು ಚೆನ್ನಾಗಿ ಕಂಡಿರುತ್ತೇವೆಯೋ ಸ್ಪಷ್ಟವಾಗಿ ಗೋಚರಿಸಿದೆಯೋ ಅದೇ ಬಾವಿಯಲ್ಲಿ ಹಗಲು ಬೀಳತಕ್ಕಂತಹ ಕೆಲಸವನ್ನು ಈ ಸರಕಾರ ಮಾಡುತ್ತಿದೆ.

ಏನೆಂದರೆ ಸೆಕೆಂಡ್ಸ್ ಹಾವಳಿಯನ್ನು ತಡೆಗಟ್ಟುವುದಕ್ಕೆ ಒಂದು ದಿಟ್ಟವಾದ ಕಾರ್ಯಕ್ರಮವನ್ನು ಹಿಂದೆ ಇದ್ದ ಅಬಕಾರಿ ಮಂತ್ರಿ ಹಾಗೂ ಅರ್ಥಮಂತ್ರಿಗಳು ತೆಗೆದುಕೊಂಡಿದ್ದರು ಅದನ್ನು ನಾನು ಸ್ವಾಗತ ಮಾಡಿದ್ದೆ. ಇದೇ ಸದನದಲ್ಲಿ ಕೂಡ ಅಭಿನಂದನೆಯನ್ನು ಮಾಡಿದ್ದೇನೆ. ನಾನು ಈಗಲೂ ಕೂಡ ಅಭಿನಂದಿಸುವುದಕ್ಕೆ ಇಷ್ಟಪಡುತ್ತೇನೆ. ಕಾರಣ ಏನೆಂದರೆ ಅವರ ಕಾಲದಲ್ಲಿ ತೆಗೆದುಕೊಂಡಂತಹ ದಿಟ್ಟ ಕ್ರಮದಿಂದ ಸರ್ಕಾರಕ್ಕೆ ಆದಾಯ ಹೆಚ್ಚಾಗಿ ಬಂದಿದೆ. ಆ ಅಂಕಿಅಂಶಗಳನ್ನು ನೀವು ಇವತ್ತಿನ ದಿವಸ ಹೇಳುತ್ತಿದ್ದೀರಿ. ಅದನ್ನೆಲ್ಲ ಬಿಚ್ಚಿ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇವತ್ತಿನ ದಿವಸ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾದ ಮೇಲೆ ತಕ್ಷಣವೇ ಏನು ಪರಂಪರೆ ಇತ್ತೋ ಏನು ಕಾರ್ಯಕ್ರಮವನ್ನು ಹಾಕಿದ್ದರೋ ಆ ಕಾರ್ಯಕ್ರಮವೆಲ್ಲವನ್ನು ಮಣ್ಣುಪಾಲು ಮಾಡತಕ್ಕ ಕಾರ್ಯಕ್ರಮ ನಡೆದಿದೆ. ಒಂದನೆಯದು

ಅದನ್ನು ಎಂಎಸ್‌ಐಎಲ್‌ನಿಂದ ಮಾಡಿಸಬೇಕು ಎನ್ನತಕ್ಕದ್ದನ್ನು ಮಾಡಲಿಕ್ಕೆ ಎಕ್ಸೈಜ್ ನಿಯಮವನ್ನು ತಿದ್ದುಪಡಿ ಮಾಡಿ ಸಂಪೂರ್ಣವಾಗಿ..

ಶ್ರೀ ಕೆ. ಶಿವಮೂರ್ತಿ: ಈ ವಿಷಯ ಸುಪ್ರೀಕೋರ್ಟ್ ಮುಂದಿದೆ. ಅದ್ದರಿಂದ ಅದರ ಬಗ್ಗೆ ಮಾತನಾಡತಕ್ಕದ್ದು ಸರಿಯಲ್ಲ.

ಶ್ರೀ ಸಿ. ಬೈರೇಗೌಡ: ಏನು ವಿಷಯ ಸುಪ್ರೀಂಕೋರ್ಟ್ ಮುಂದಿದೆ? ಅದು ತಮಗೂ ಕೂಡ ಗೊತ್ತಿಲ್ಲ. ನಾನು ಆ ವಿಚಾರವನ್ನು ಬಿಟ್ಟು ಇಲ್ಲಿ ಏನು ನಡೆಯುತ್ತದೆ ತಾವೇನು ಮಾಡಿದ್ದೀರಿ ಅದನ್ನು ಹೇಳುತ್ತಿದ್ದೇನೆ. ನಿಯಮಗಳನ್ನು ತಿದ್ದುಪಡಿ ಮಾಡಿದ್ದು ಅದು ಕೋರ್ಟ್‌ಗೆ ಹೋಯಿತು ಅದು ನನಗೂ ಗೊತ್ತಿದೆ. ಕೋರ್ಟ್‌ನಲ್ಲಿರುವುದು ಅದು ಅಲ್ಲಿರಲಿ. ಅದು ರಾಜ್ಯದ ಕೋರ್ಟ್‌ನಲ್ಲಿ ತೀರ್ಮಾನವಾಗಿತ್ತು. ಈಗ ಅದು ಸುಪ್ರೀಂ ಕೋರ್ಟ್‌ನಲ್ಲಿದೆ. ಅದಕ್ಕೆ ಇನ್ನು ಹೆಚ್ಚಿನ ಒತ್ತು ಕೊಡುವುದಕ್ಕೋಸ್ಕರ, ಅದಕ್ಕೆ ಬಲ ಕೊಡುವುದಕ್ಕೋಸ್ಕರ ಒಂದು ಸುಗ್ರೀವಾಜ್ಞೆಯ ಮೂಲಕ ಎಕ್ಸೈಜ್ ಕಾನೂನಿಗೆ ಒಂದು ಸುಗ್ರೀವಾಜ್ಞೆಯನ್ನು ತಂದರು. ಸುಗ್ರೀವಾಜ್ಞೆಯ ಪ್ರತಿ ನನ್ನ ಹತ್ತಿರವಿದೆ. ಇದು ಸಾಮಾನ್ಯವಾಗಿ ಸುಗ್ರೀವಾಜ್ಞೆಗಳನ್ನು ತಂದರೂ ಅದರಲ್ಲೂ ಅತಿಮುಖ್ಯವಾಗಿರತಕ್ಕ ಅತಿ ಪ್ರಾಮುಖ್ಯವಾಗಿರತಕ್ಕ ವಿಚಾರವನ್ನು ತಂದಾಗ ಅದು ರಾಜ್ಯದ ಆರ್ಥಿಕ ಪರಿಸ್ಥಿತಿಯ ಮೇಲೆ, ರಾಜ್ಯದ ಅಭಿವೃದ್ಧಿಯ ಮೇಲೆ ಪರಿಣಾಮ ಬೀರತಕ್ಕ ಕ್ರಮ. ದಿಟ್ಟತನದಿಂದ ತೆಗೆದುಕೊಂಡಂತಹ ಸುಗ್ರೀವಾಜ್ಞೆ ಇಲ್ಲಿದೆ.

ಆ ನೋಟೀಫಿಕೇಶನ್ ನಂ, ಈ ರೀತಿ ಇದೆ. ನಂ. ಎಚ್‌ಎಡಬ್ಲ್ಯು 34 ಎಲ್‌ಎನ್‌ಜಿ 90 ಬೆಂಗಳೂರು, ದಿನಾಂಕ 13-8-90 ಕರ್ನಾಟಕ ಆರ್ಡಿನೆನ್ಸ್ ನಂ.4 1990 ಈ ಆರ್ಡಿನೆನ್ಸ್ ಮೂಲಕ ಸರ್ಕಾರ ಎಕ್ಸೈಜ್ ಕಾನೂನಿಗೆ ತಿದ್ದುಪಡಿ ಮಾಡುವುದಕ್ಕೆ ತಂದಿತು. ಆದರೆ ಅದು ಈ ಸದನದ ಮುಂದೆ ಬರಲಿಲ್ಲ. ಈ ಸುಗ್ರೀವಾಜ್ಞೆಯನ್ನು ಯಾವ ಉದ್ದೇಶದಿಂದ ತರಲಾಗಿತ್ತು ಆ ಆರ್ಡಿನೆನ್ಸ್‌ನ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್ ಓದುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಅದು ಪ್ರಿಂಟ್ ಆಗಿದೆ. ಮೂಲ ಉದ್ದೇಶ ಏನಿದೆ ಅದು ಕಾನೂನನ್ನು ತಿದ್ದುಪಡಿ ಮಾಡಿ ಈ ಸೆಕೆಂಡ್ಸ್ ಹಾವಳಿಯನ್ನು ರದ್ದು ಮಾಡತಕ್ಕ ಉದ್ದೇಶವಿದ್ದರೆ, ಆ ಉದ್ದೇಶವನ್ನು ರೈಟ್ ಎಬೌಟರ್ನ್ ಮಾಡುವ ಕೆಲಸವನ್ನು ಈ ಸರ್ಕಾರ ತೆಗೆದುಕೊಂಡಿದೆ. ಆಮೇಲೆ ಈ ನಿಯಮ ಏನಿದೆ ಈ ಸದನದ ಅಜೆಂಡಾದಲ್ಲೂ ಕೂಡ ಅದು ಬಂದಿತ್ತು. ಮಸೂದೆ ಸದನದಲ್ಲಿ ಇಂಟರ್‌ಡಕ್ಷನ್ ಆಗಬೇಕೆಂದು ಅಜೆಂಡಾದಲ್ಲಿ ಬಂದಿದೆ. ಅದರ ಬಗ್ಗೆ ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಸಹ ಚರ್ಚೆಯಾಯಿತು. ಈ ಬಿಲ್‌ನ ಬಗ್ಗೆ ಚರ್ಚೆ ಮಾಡಬೇಕೆಂದು ಅದು ಅಲ್ಲಿ ಚರ್ಚೆಗೆ ಬಂದಿತ್ತು. ಆದರೆ ಈ ಸದನಕ್ಕೆ ಅದು ಬರಲಿಲ್ಲ. ಇವತ್ತು ಆ ಬಿಲ್ ಇಲ್ಲಿದೆ.

ಶ್ರೀ ಜಿ.ಎಸ್. ಆಚಾರ್ ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಶ್ರೀ ಕೆ. ಶಿವಮೂರ್ತಿ: ಆ ಬಿಲ್ ಇಲ್ಲಿ ಬಂತಲ್ಲ ಅವತ್ತು ಅಸೆಂಬ್ಲಿ ನಡೆಯಿತೇನು? ಜಿಲ್ಲಾ ಪರಿಷತ್ತು ಮಸೂದೆಯನ್ನು ಹರಿದುಹಾಕಿ ಧರಣಿ ಮಾಡತಕ್ಕಂಥ ಸಂದರ್ಭ ಬಂತು....

ಶ್ರೀ ಸಿ. ಬೈರೇಗೌಡ: ಎಲ್ಲಾ ಅಚ್ಚಾಗಿದೆ. ಎಲ್‌ಎ.ಬಿಲ್ ನಂ. 24 ಆಫ್ 1990. ಇದನ್ನು ತಂದಿದ್ದಿರೋ ಇಲ್ಲವೇ? ಏಕೆ ಇದನ್ನು ಕಾನೂನು ಮಾಡಲಿಲ್ಲ? ಸದನದ ಒಪ್ಪಿಗೆಯನ್ನು ಏಕೆ ಪಡೆಯಲಿಲ್ಲ? ನಾವು ಏನಾದರೂ ವಿರೋಧ ಮಾಡುತ್ತೇವೆ ಎಂದು ಹೇಳಿದ್ದೀವಾ? ಏಕೆ ಮಾಡಲಿಲ್ಲ ಇದನ್ನು? ಇದರ ಬಗ್ಗೆ ಸರ್ಕಾರ ರಾಜ್ಯದ ಜನತೆಗೆ ಉತ್ತರ ಕೊಡಬೇಕಾಗಿದೆ. ಆರ್ಡಿನೆನ್ಸ್ ತಂದಿದ್ದು ಏತಕ್ಕೆ? ಈ ಬಿಲ್ ಅನ್ನು ಅಚ್ಚುಹಾಕಿಸಿ ಈ ಸದನದಲ್ಲಿ ಅದನ್ನು ಇಡಬೇಕೆಂಬ ತೀರ್ಮಾನಕ್ಕೆ

ಸರ್ಕಾರ ಬಂದು ಪುನಃ ವಾಪಸ್ಸು ಹೋಗಿರತಕ್ಕಂಥಾದ್ದಕ್ಕೆ ಕಾರಣ ಏನು? ಆದ್ದರಿಂದ ನಾನು ಹೇಳಿದೆ? ಇವತ್ತು ಈ ಭಾಷಣ ಏನಿದೆ, ಇದು ಎಕ್ಸೈಸ್ ದೊರೆಗಳ ಬ್ರೀಫ್‌ಕೇಸಿನಿಂದ ಬಂದಿರತಕ್ಕ ಭಾಷಣವಾಗಿದೆಯೆಂದು ಇದೇ ಹೇಳುತ್ತದೆ. ತಾವು ನಡೆದುಕೊಂಡಿರತಕ್ಕಂಥ ರೀತಿಯನ್ನು ಇದು ತೋರಿಸುತ್ತದೆ. ಇದಕ್ಕಿಂತ ಜ್ವಲಂತ ಉದಾಹರಣೆ ಬೇರೆ ಬೇಕಾಗಿಲ್ಲ, ಇನ್ನೊಂದು, ಈ ಕೇಸ್ ಬಗ್ಗೆ ಮಾತನಾಡಿ ನನಗೆ ಜ್ಞಾಪಕ ಮಾಡಿಕೊಟ್ಟರು. ಅದು ಏನೆಂದರೆ, ಸುಪ್ರೀಂ ಕೋರ್ಟಿನಲ್ಲಿ ಕೇಸು ಇರತಕ್ಕದ್ದು ನಿಜ. ಯಾರು ಪ್ರತಿವಾದಿಗಳು, ಎಕ್ಸೈಸ್ ದೊರೆಗಳಾಗಿರತಕ್ಕಂಥವರು ಸುಪ್ರೀಂ ಕೋರ್ಟಿಗೆ ಹೋಗಿದ್ದಾರೆ, ಅವರ ಪರವಾಗಿ ಒಬ್ಬ ಶ್ರೀ ರಾಮಸ್ವಾಮಿ ಎನ್ನತಕ್ಕಂಥವರು ವಾದ ಮಾಡುತ್ತಿದ್ದರು. ಅವರು ಇವತ್ತಿನ ದಿವಸ ದೇಶದ ಅಟಾರ್ನಿ ಜನರಲ್ ಆಗಿ ನೇಮಕಗೊಂಡಿದ್ದಾರೆ. ಇವತ್ತು ಅಲ್ಲಿ ಏನು ನಡೆಯುತ್ತಿದೆ? ಅವರನ್ನು ಪುನಃ ಈ ಕೇಸನ್ನು ವಾದ ಮಾಡುವುದಕ್ಕೆ, ಈ ಎಕ್ಸೈಸ್ ದೊರೆಗಳ ಪರವಾಗಿ ವಾದ ಮಾಡುವುದಕ್ಕೆ ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆಯತಕ್ಕಂಥ ಒಂದು ಪ್ರಯತ್ನವನ್ನು ಇವತ್ತು ಆ ವಕೀಲರು ನಡೆಸಿದ್ದಾರೆ ಸುಪ್ರೀಂ ಕೋರ್ಟಿನಲ್ಲಿ.

ಇದಕ್ಕೆ ಸರ್ಕಾರ ಒಪ್ಪಿಗೆಯನ್ನು ಕೊಡಕೂಡದು. ಒಪ್ಪಿಗೆ ಕೊಡದಿರುವುದರ ಬಗ್ಗೆ ನಮ್ಮ ಸರ್ಕಾರ ಕೇಂದ್ರ ಸರ್ಕಾರಕ್ಕೆ ಬರೆಯಬೇಕಾಗಿತ್ತು. ಅದು ಬರೆದಿದ್ದಾರೋ ಅಥವಾ ಇಲ್ಲವೋ ಗೊತ್ತಿಲ್ಲ. ಒಂದು ರೀತಿಯಲ್ಲಿ ನೀವೇನಾದರೂ ಆ ರೀತಿ ಒಪ್ಪಿಗೆ ಕೊಟ್ಟರೆ, ಮೊನ್ನೆ ದಿವಸ ಒಂದು ಸಣ್ಣ ವಿಚಾರಕ್ಕೆ ಈ ರಾಜ್ಯದ ಒಬ್ಬ ಹಿರಿಯ ಅಧಿಕಾರಿಯಾದಂಥವರು, ಹಿಂದೆ ಮುಖ್ಯ ಕಾರ್ಯದರ್ಶಿಯವರಾಗಿದ್ದ ಶ್ರೀ ಶಂಕರನಾರಾಯಣನ್‌ರವರ ವಿಚಾರದಲ್ಲಿ ರಾಜ್ಯ ಸರ್ಕಾರದ ಪರವಾಗಿ ವಾದಮಾಡುವುದಕ್ಕೆ ಅವರನ್ನು ಡೆಲ್ಲಿಯಿಂದ ಕರೆಸಿದ್ದರು. ಆ ಒಂದು ಕೇಸಿನಲ್ಲಿ ಟ್ರಿಬ್ಯುನಲ್‌ಮುಂದೆ ವಾದ ಮಾಡುವುದಕ್ಕೆ ಬಂದಿದ್ದರು. ಆ ಕೇಸಿನಲ್ಲಿ ರಾಜ್ಯ ಸರ್ಕಾರದ ಪರವಾಗಿ ಅದೇ ವಕೀಲರು ಇನ್ನೊಂದು ಕೇಸಿನಲ್ಲಿ ರಾಜ್ಯದ ಹಿತ ಕಾಪಾಡತಕ್ಕಂಥ ಮೊಕದ್ದಮೆಯಲ್ಲಿ ರಾಜ್ಯದ ವಿರುದ್ಧವಾಗಿ ವಾದ ಮಾಡತಕ್ಕಂಥ ಒಂದು ಪ್ರಯತ್ನ ಇವತ್ತಿನ ದಿವಸ ನಡೆಯುತ್ತಿದೆ. ಇದಕ್ಕೆ ರಾಜ್ಯ ಸರ್ಕಾರ ಏನಾದರೂ ತನ್ನ ವಿರೋಧವನ್ನು ಕೇಂದ್ರ ಸರ್ಕಾರಕ್ಕೆ ಸೂಚಿಸಿದೆಯೇ ಅಥವಾ ಇಲ್ಲವೇ ಎನ್ನತಕ್ಕಂಥದ್ದನ್ನು ಈ ಸದನಕ್ಕೆ ತಿಳಿಸಬೇಕು ಎಂದು ಈ ಸಂದರ್ಭದಲ್ಲಿ ನಾನು ವಿನಂತಿಸುತ್ತೇನೆ. ಈಗ ಅಧ್ಯಕ್ಷಿಣಿಯವರೇ ....

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್: ಈಗ ಅಲ್ಲಿ ಅಧ್ಯಕ್ಷರು ಇದ್ದಾರೆ ನೋಡಿ. ನೀವು ನಮ್ಮ ಕಡೆ ನೋಡಿ ಮಾತನಾಡುತ್ತೀರಿ.

ಶ್ರೀ ಸಿ. ಭೈರೇಗೌಡ : ಹೌದು, ತಪ್ಪಾಯಿತು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಎಕ್ಸೈಸ್ ಕಡೆಗೆ ಹೋಗುವುದರಿಂದ ಈ ತರಹ ಆಗುತ್ತದೆ.

ಶ್ರೀ ಬಿ.ಎಂ. ಇದಿನಬ್ಬ : ಅವರು ಭಾಷಣದಲ್ಲಿ ಮೈಮರೆತಿರುವುದರಿಂದ ವಿಷಯದ ಕಡೆಗೆ ಹೋಗುತ್ತಿದ್ದಾರೆ.

ಚೇರ್ಮನ್: ನೀವು ಎಲ್ಲ ಪಾಯಿಂಟ್ಸನ್ನೂ ಕವರ್ ಮಾಡಿದ್ದೀರಿ. ದಯವಿಟ್ಟು ಬೇಗ ಮುಗಿಸಿಬಿಡಿ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ಇವತ್ತು ಈ ಸೆಕೆಂಡ್ಸ್ ಎನ್ನತಕ್ಕದ್ದು ಇದರಲ್ಲಿ ಎರಡು-ಮೂರು ತರಹದ್ದು ಇದೆ.

ಇವತ್ತು ಬೀದಿ ಬೀದಿಯಲ್ಲಿ, ಹಾದಿ ಹಾದಿಯಲ್ಲಿ ನಡೆಯುತ್ತಿದೆ. ನಾನು ಆಗಲೇ ಪ್ರಸ್ತಾಪ ಮಾಡಿದೆ. ಒಂದು ದಿವಸಕ್ಕೆ ಒಂದು ಕೋಟಿ ರೂಪಾಯಿಯಷ್ಟು ಒಂದು

ಕಾಲದಲ್ಲಿ ಹೋಗಿತ್ತು ಎಂದು. ಇವತ್ತು ಅದನ್ನು ಮೀರಿಸತಕ್ಕ ರೀತಿಯಲ್ಲಿ ಎಲ್ಲಿ ನೋಡಿದರೂ ಕೂಡ ಈ ಸೆಕೆಂಡ್ಸ್ ಪ್ರಭಾವ ರಾಜ್ಯದಲ್ಲಿ ನಡೆಯುತ್ತಿದೆ. ಬೆಂಗಳೂರಿನಲ್ಲಿ ಹಾದಿ, ಹಾದಿಯಲ್ಲಿ ಮೂಲೆ ಮೂಲೆಯಲ್ಲಿ ನಡೆಯುತ್ತಿದೆ. ಇವತ್ತು ನಾನು ಅನೇಕ ಲೇಬಲ್ಸ್‌ಗಳನ್ನು ಇಲ್ಲಿ ತಂದಿದ್ದೇನೆ. ಇವುಗಳನ್ನು ರಾಜ್ಯದಲ್ಲಿ ಮಾರಾಟ ಮಾಡಕೂಡದು, ಇವುಗಳಿಗೆ ನಿಷೇದ ಇದೆ. ಅವುಗಳಲ್ಲಿ 4-5ನ್ನು ಮಾತ್ರ ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

Haywards Whisky. not for sale in Madhya Pradesh, not for sale in Rajasthan. Macdowell, Batch No. 16th January, 91 for export Lord John, Delux Whisky, Royal Brandy-for export only. Macdowell Whisky, Western Blend whisky, Western XXX rum.

ಈ ರೀತಿಯಾಗಿ ಅನೇಕ ಬ್ರಾಂಡ್‌ಗಳು ರಾಜ್ಯದಲ್ಲಿ ಮಾರಾಟವಾಗುತ್ತಿದೆ. ಇವೆಲ್ಲವೂ ರಾಜ್ಯದಲ್ಲಿ ಮಾರಾಟವಾಗಬಾರದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್: ಈಗ ನಮಗೆ ಗೊತ್ತಾಯಿತು, ಇವರು ತೊಂದರೆ ತೆಗೆದುಕೊಳ್ಳುತ್ತಿದ್ದಾರೆ. ಬಹಳಷ್ಟು ಸ್ಟಡಿ ಮಾಡಿ, ಬಹಳಷ್ಟು ತೊಂದರೆ ತೆಗೆದುಕೊಂಡು ಭಾಷಣ ಮಾಡುತ್ತೇನೆಂದು ತಾವು ಪ್ರಾರಂಭದಲ್ಲಿ ಹೇಳಿದಿರಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಸಭೆಯಲ್ಲಿ ಒಂದು ರೀತಿಯ ರುಚಿ ಹತ್ತುತ್ತಿದೆ ಮತ್ತು ಏರುತ್ತಿದೆ. ಸಭೆ ದಾರಿ ತಪ್ಪಿತು, ಈ ಬಗ್ಗೆ ಸ್ವಲ್ಪ ಗಮನ ಹರಿಸಬೇಕು.

ಶ್ರೀ ಸಿ. ಬೈರೇಗೌಡ: ಈ ರೀತಿಯಲ್ಲಿ ಹಾದಿ ಬೀದಿಯಲ್ಲಿ ನಡೆಯುತ್ತಿದೆ. ಹಿಂದೆ ಒಂದು ಕೋಟಿ ರೂಪಾಯಿ ಎಂದು ಹೇಳಿದೆ. ಅದನ್ನು ಮೀರತಕ್ಕ ರೀತಿಯಲ್ಲಿ ಐ.ಎಂ.ಎಫ್.ಎಲ್. ಹೋಗುತ್ತಿದೆ. ಇನ್ನು ಸಾರಾಯಿ ಬಗ್ಗೆ ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ಇದು ಪೂರ್ತಿಯಾಗಿ ನಮಗೆ ಬರುತ್ತಾ ಇಲ್ಲ. ಮಂಥ್ಲಿ ರೆಂಟಲ್ಸ್ ಬರುತ್ತಾ ಇಲ್ಲ ಎನ್ನುವುದನ್ನು ಅವರೂ ಒಪ್ಪಿದ್ದಾರೆ. ಬರದೇ ಇರುವುದಕ್ಕೆ ಕಾರಣ ಇದೆ.

ಮತ್ತೊಂದು ಸಾರಿ ಹೇಳಬೇಕಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಇದು ತಮ್ಮ ಜಿಲ್ಲೆ ಅಧ್ಯಕ್ಷರೇ (ಮಾನ್ಯ ಬಿ.ಎಸ್. ಆಜಾದ್‌ರವರು ಅಧ್ಯಕ್ಷ ಪೀಠದಲ್ಲಿದ್ದರು) ತಾವೂ ಕೂಡ ಇಲ್ಲಿ ಒತ್ತಾಯ ಮಾಡಿದ್ದೀರಿ. ಅಲ್ಲಿ ಹೆಂಡವನ್ನು ಇಳಿಸುವುದಕ್ಕೆ ಮಾರಾಟ ಮಾಡುವುದಕ್ಕೆ ಎಲ್ಲಾ ಪಕ್ಷದ ಶಾಸಕರೂ ಸರ್ಕಾರದ ಮೇಲೆ ಒತ್ತಾಯವನ್ನು ತಂದಿರುತ್ತಾರೆ. ಈ ಒತ್ತಾಯ ಯಾವಾಗ ಬಂತು ಎಂದರೆ ಹರಾಜು ಎಲ್ಲವೂ ಮುಗಿದು ಹೋಗಿತ್ತು, ಮುಗಿದು ಹೋದಮೇಲೆ ಒತ್ತಾಯ ಬಂತು. ಹಿಂದೆ ಇದ್ದ ಸರ್ಕಾರ, ಈ ಮೂರ್ತೇದಾರರು ಯಾರಿದ್ದಾರೆ, ಅವರಿಗೆ ಬೇರೆ ಪರ್ಯಾಯ ವ್ಯವಸ್ಥೆ ಮಾಡುತ್ತೇವೆಂದೂ ಯಾರು ನಿರುದ್ಯೋಗಿಗಳಾಗಿದ್ದಾರೆ, ಅವರಿಗೆ ಬೇರೆ ಪರ್ಯಾಯ ವ್ಯವಸ್ಥೆ ಮಾಡಿ, ಉದ್ಯೋಗವನ್ನು ಕೊಡತಕ್ಕ ಕೆಲಸವನ್ನು ಮಾಡುವುದಾಗಿ ಆ ಸಂದರ್ಭದಲ್ಲಿ ಅಶ್ವಾಸನೆ ಮಾಡಿದರು. ಮಾನ್ಯ ಬಂಗಾರಪ್ಪನವರು ಬಂದ ತಕ್ಷಣ ಮಾಡಿದ ಕೆಲಸ ಏನೆಂದರೆ ಪರ್ಯಾಯ ವ್ಯವಸ್ಥೆ ಮಾಡುವುದಕ್ಕೆ ಹೋಗಲಿಲ್ಲ, ಯಾರು ನಿರುದ್ಯೋಗಿಗಳಾಗಿದ್ದಾರೆ, ಅವರಿಗೆ ಬೇರೆ ಉದ್ಯೋಗ ಕೊಡತಕ್ಕ ಕೆಲಸ ಮಾಡಲಿಲ್ಲ, ಧಾರಾಳವಾಗಿ ಹೆಂಡವನ್ನು ಇಳಿಸಿ ಮಾರಾಟ ಮಾಡಿ ಎಂಬ ಆಜ್ಞೆಯನ್ನು ಮಾಡಿದ್ದಾರೆ. ಇವತ್ತಿನ ದಿವಸ ಎಕ್ಸೈಸ್ ಬಾಬಿನಲ್ಲಿ ಪ್ರತಿಯೊಂದು ಕೂಡ ಸರ್ಕಾರದ ಕಾನೂನು ಪ್ರಕಾರ ಪ್ರತಿಯೊಂದಕ್ಕೂ ಕಾನೂನು ಇದೆ.

ಇದನ್ನು ಯಾವ ರೀತಿ ಇಡಬೇಕು, ಯಾವ ರೀತಿ ತಯಾರಿಸಬೇಕೆನ್ನುವುದಕ್ಕೆ ಕಾನೂನು ಇದೆ. ಇವತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾನೂನು ಇಲ್ಲ, ಅಲ್ಲಿ ಹೆಂಡ ಹರಾಜು ಮಾಡಬೇಕಾಗಿತ್ತು. ಇಲ್ಲಿಯವರೆಗೂ ಕೂಡಾ ಹೆಂಡವನ್ನು ಹರಾಜು ಮಾಡಲಿಲ್ಲ. ಅದರ ಜೊತೆಗೆ ಇವತ್ತು ಅಲ್ಲಿ ಏನಾಗಿದೆ ಎಂದರೆ, ಯಾರು ಸಾರಾಯಿ ಗುತ್ತಿಗೆದಾರರು ಇದ್ದರು, ಅವರು ನಮಗೆ ವ್ಯಾಪಾರ ಕಡಿಮೆ ಆಯಿತು, ಮೊದಲು ನೀವು ಹೆಂಡ ಮಾರಾಟ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ ಎಂದು ತಿಳಿಸಿದ್ದೀರಿ, ಆದರೆ ಪುನಃ ತಾವು ಈಗ ಹೆಂಡ ಮಾರಾಟ ಮಾಡಲು ಅವಕಾಶ ಕೊಟ್ಟಿರುವುದರಿಂದ ನಮಗೆ ಸಾರಾಯಿ ಮಾರಾಟವಾಗುತ್ತಿಲ್ಲ ಎನ್ನತಕ್ಕಂಥ ವಾದವನ್ನು ಇವತ್ತು ಕೋರ್ಟಿನಲ್ಲಿ ಹೂಡಿದ್ದಾರೆ. ಹೀಗಿದೆ, ಇದರ ಹಿಕ್ಮತ್ತು ಏನು ಎಂದು ಆಮೇಲೆ ಹೇಳುತ್ತೇನೆ. ಸುಮಾರು ದಕ್ಷಿಣ ಕನ್ನಡ ಜಿಲ್ಲೆ ಒಂದರಿಂದ ರಾಜ್ಯದ ಬೊಕ್ಕಸಕ್ಕೆ 50 ಕೋಟಿ ರೂಪಾಯಿಗಳಷ್ಟು ಹಣ ಕಡಿಮೆ ಬರುತ್ತಿದೆ. ಒತ್ತಾಯ ಬಂದಿದೆ, ಅವಕಾಶ ನೀಡಿದ್ದೇವೆ ಎಂದು ಹೇಳಬಹುದು, ಆದರೆ ಸರಕಾರ ಪರ್ಯಾಯ ವ್ಯವಸ್ಥೆ ಮಾಡುತ್ತೇವೆಂದು ಹೇಳಿತ್ತು. ಪರ್ಯಾಯ ವ್ಯವಸ್ಥೆ ಮಾಡುವುದಕ್ಕೆ ಬದಲು ಕಾನೂನಿಗೆ ವಿರುದ್ಧವಾಗಿ ಅಲ್ಲಿ ಮಾರಾಟವಾಗುತ್ತಿರತಕ್ಕಂಥ ಹೆಂಡದಿಂದ ಒಂದು ವ್ಯವಸ್ಥೆ ಮಾಡುವುದಕ್ಕೆ ಬದಲು ಕಾನೂನಿಗೆ ವಿರುದ್ಧವಾಗಿ ಅಲ್ಲಿ ಮಾರಾಟವಾಗುತ್ತಿರತಕ್ಕಂಥ ಹೆಂಡದಿಂದ ಒಂದು ನಯಾಪೈಸೆ ಸಹ ಸರ್ಕಾರಕ್ಕೆ ಆದಾಯ ಇಲ್ಲ. ಯಾರು ಹರಾಜಿನಲ್ಲಿ ಸಾರಾಯಿ ಗುತ್ತಿಗೆ ಪಡೆದಿದ್ದರು ಅವರಿಂದಲೂ ಹಣ ಬರುತ್ತಿಲ್ಲ ಆದುದರಿಂದ ದಕ್ಷಿಣ ಕನ್ನಡ ಜಿಲ್ಲೆ ಒಂದರಿಂದಲೇ ಸುಮಾರು 50 ಕೋಟಿ ರೂಪಾಯಿಗಳ ಆದಾಯ ಸರಕಾರಕ್ಕೆ ಬರಬೇಕಾಗಿರುವುದು ಬರುತ್ತಿಲ್ಲ. ಉಳಿದ ಜಿಲ್ಲೆಯಲ್ಲಿ ಏನಾಗಿದೆ ಎಂದರೆ ಅನೇಕರು ಇವತ್ತಿನ ದಿವಸ ಕೋರ್ಟ್ ಮುಂದೆ ಹೋಗಿದ್ದಾರೆ.

ಹೀಗೆ ಕೋರ್ಟಿಗೆ ಹೋಗಿ ಎಂದು ಸರಕಾರದಿಂದಲೇ ಇವರಿಗೆ ಪ್ರೇರಣೆ. ಇವರು ಕೋರ್ಟಿಗೆ ಹೋಗಿದ್ದಾರೆ. ಅಲ್ಲಿ ಏನಾದರೂ ಸರಕಾರದವರು ಕೇವಿಯಟ್ ಹಾಕಿದ್ದಾರೆಯೋ? ಯಾವ ಯಾವ ತಾಲ್ಲೂಕಿಗೆ ಸಂಬಂಧಪಟ್ಟಹಾಗೆ ಕೋರ್ಟಿಗೆ ಹೋಗುತ್ತಾರೆ ಎಂದು ಇವರಿಗೆ ಗೊತ್ತಿಲ್ಲದೆ ಇಲ್ಲ, ಸಣ್ಣಪುಟ್ಟ ನೆವಗಳನ್ನು ಒಡ್ಡಿ ಕೋರ್ಟಿಗೆ ಹೋಗಿದ್ದಾರೆ. ಸರಕಾರಕ್ಕೆ ಮಾಹಿತಿ ಕೂಡಾ ಇಲ್ಲದೇ ಇಲ್ಲ, ಹಾಗಾದರೆ ಯಾವ ಯಾವ ತಾಲ್ಲೂಕಿನಲ್ಲಿ ನೀವು ಕೇವಿಯಟ್ ಹಾಕಿದ್ದೀರಿ.? ಕೇವಿಯಟ್ ಹಾಕದೇ ಇದ್ದರೆ ಅಬ್ಜೆಕ್ಷನ್ಸ್ ಹಾಕಬಹುದು. ಒಂದು ಸಲ ಸ್ಟೇ ಸಿಕ್ಕಿತು ಎಂದರೆ ಕೇವಿಯಟ್ ಇಲ್ಲ, ಏನೂ ಇಲ್ಲ, ಎಕ್ಸೈಸ್ ದೊರೆಗಳು ಆರಾಮ ಅವರಿಗಿಂತಲೂ ಸರಕಾರ ಆರಾಮ. ಈ ಕೇಸ್‌ಗಳಲ್ಲಿ ಅಬ್ಜಕ್ಷನ್ ಹಾಕತಕ್ಕದ್ದು ಸರಕಾರದ ಪ್ರಥಮ ಕರ್ತವ್ಯ. ಆ ಪ್ರಥಮ ಕರ್ತವ್ಯವನ್ನು ಸರಕಾರ ಮಾಡಲಿಲ್ಲ. ಮಾಡತಕ್ಕಂಥ ಪ್ರಯತ್ನ ಕೂಡಾ ಆಗುತ್ತಿಲ್ಲ. ಸರಕಾರದ ವಕೀಲರಿಗೆ ತಾಕೀತು ಮಾಡಬೇಕಾಗಿತ್ತು, ಇಷ್ಟು ಕೇಸ್‌ನಲ್ಲಿ ಇಷ್ಟನೇ ತಾರೀಖಿನ ಒಳಗಾಗಿ ಅಬ್ಜೆಕ್ಷನ್ಸ್ ಹಾಕಬೇಕೆಂದು ಹೇಳಬೇಕಾಗಿತ್ತು, ಆದರೆ ಸರಕಾರ ಆ ಕ್ರಮ ತೆಗೆದುಕೊಂಡಿಲ್ಲ. ಇದರಿಂದ ಸಾರಾಯಿ ಬಾಬಿನಲ್ಲಿ ಏನು ಹಣ ಬರಬೇಕಾಗಿತ್ತು ಅದು ಬರುತ್ತಿಲ್ಲ, 18 ಕೋಟಿ ರೂಪಾಯಿ ಬರಬೇಕೆಂದು ಸರಕಾರದವರು ಹೇಳಿದ್ದಾರೆ. ಅದು ಇನ್ನೂ ಹೆಚ್ಚಾಗತಕ್ಕಂಥ ಸಂದರ್ಭ ಇದೆ. ಆದುದರಿಂದ ನಾನು ಸರಕಾರವನ್ನು ಒತ್ತಾಯ ಮಾಡುತ್ತೇನೆ. ಯಾವ ಯಾವ ತಾಲ್ಲೂಕಿನಲ್ಲಿ ಕೋರ್ಟಿಗೆ ಹೋಗಿ ತಡೆಯಾಜ್ಞೆ ತಂದಿದ್ದೀರಿ? ತಡೆಯಾಜ್ಞೆ ಕೊಡದಂತೆ ಕೇವಿಯಟ್ ಹಾಕಿದ್ದೀರಿ? ಹಾಕದೇ ಇದ್ದರೆ ಕಾರಣ ಏನು? ಇದಕ್ಕೆ ಇವರೂ ಶಾಮೀಲಾಗಿದ್ದಾರೆ ಎಂಬುದೇ ಕಾರಣ. ಕೋರ್ಟಿನಿಂದ ಸ್ಟೇ ಆದಮೇಲೆ ಅಬ್ಜೆಕ್ಷನ್ಸ್ ಹಾಕಬೇಕಾಗಿತ್ತು. ಯಾವ ಯಾವ ಕೇಸಸ್‌ನಲ್ಲಿ ಅಬ್ಜೆಕ್ಷನ್ಸ್ ಹಾಕಿದ್ದೀರಿ ಎಂಬುದನ್ನು ಈ ಸದನದ ಮುಂದೆ ಇಡಬೇಕು. ಇದು ರಾಜ್ಯದ ಜನತೆಗೆ ಗೊತ್ತಾಗಬೇಕು. ಇದನ್ನು ನಾನು ಒತ್ತಾಯ ಮಾಡುತ್ತೇನೆ. ಈ ಸರ್ಕಾರದ ಬಂದ ಮೇಲೆ ರೆಕ್ಟಿಫೈಡ್

ಸ್ಪಿರಿಟ್ ವಿಚಾರ ಏನಾಗಿದೆ ಎಂದು ಹೇಳುತ್ತೇನೆ. ಒಂದು ಸಲ ಮಾನ್ಯ ಬಂಗಾರಪ್ಪನವರು ವಿರೋಧ ಪಕ್ಷದ ಕಡೆ ಕುಳಿತಿದ್ದಾಗ ಅವರು ಮಾತನಾಡಿ ಮಾತನಾಡಿ, ಕೊನೆಗೆ ಎಷ್ಟು ಘಂಟೆ ಮಾತನಾಡಿದರೋ ಗೊತ್ತಾಗಲಿಲ್ಲ.

ಕೊನೆಗೆ ಅವರ ಕೈಯಲ್ಲಿ ಮಾತನಾಡುವುದಕ್ಕೆ ಕೂಡಾ ಆಗಲಿಲ್ಲ. ಆಗ ಶಿವಮೂರ್ತಿಯವರು ಹಿಂದುಗಡೆ ಕುಳಿತಿದ್ದರು ಎಂದು ಕಾಣುತ್ತದೆ. ನೀವು ಇರಲಿಲ್ಲವೆಂದು ಕಾಣುತ್ತದೆ. ನಾನೂ ಕೂಡಾ ಆ ದೃಶ್ಯವನ್ನು ನೋಡಿದೆ. ಅವರು ಅಧಿಕಾರಕ್ಕೆ ಬಂದಮೇಲೆ ಈ ಸ್ಪಿರಿಟ್ ವಿಚಾರ ಏನಾಗಿದೆ, ಅಧ್ಯಕ್ಷರೇ, ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವುದಕ್ಕೆ ನೀರು ಸಿಗುತ್ತಿಲ್ಲ. ಮೂರನೇ ಸಾರಿ ಈ ಸದನದಲ್ಲಿ ಕುಡಿಯುವ ನೀರಿನ ಬಗ್ಗೆ ಚರ್ಚೆ ಆಯಿತು. ಇವತ್ತು ಸಾರಾಯಿ ಯಾವ ಊರಿನಲ್ಲಿ ಇಲ್ಲ, ಎಲ್ಲಾ ಊರಿನಲ್ಲೂ ಸಾರಾಯಿ ಸಿಗುತ್ತಿದೆ.

ಮಾನ್ಯ ಸದಸ್ಯರೊಬ್ಬರು ಹೇಳುತ್ತಿದ್ದಾರೆ ಬೇಕಾದಷ್ಟು ಸಿಗುತ್ತಿದೆ ಎಂದು. ಕುಡಿಯುವ ನೀರು ಇಲ್ಲ, ಫ್ಯಾಕ್‌ನಲ್ಲಿ ಪ್ಲಾಸ್ಟಿಕ್ ಚೀಲದಲ್ಲಿ ಮನೆ ಮನೆಯಲ್ಲೂ ಸಿಗುತ್ತಿದೆ ಎಂದು ಮಾನ್ಯ ಸದಸ್ಯರು ಮತ್ತೊಬ್ಬರು ಹೇಳುತ್ತಿದ್ದಾರೆ. ಇದಕ್ಕೆ ಎಲ್ಲಿಂದ ಈ ಸ್ಪಿರಿಟ್ ಬರುತ್ತದೆ. ಈ ಸ್ಪಿರಿಟ್‌ದು ಒಂದು ದೊಡ್ಡ ಕಥೆ ಇದೆ. ಇವತ್ತು ಇಲ್ಲಿ ನನ್ನ ಒಂದು ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಅದನ್ನು ನಾನು ಈ ಸದನದ ಗಮನಕ್ಕೆ ತರಬೇಕಾಗಿರತಕ್ಕಂಥ ಅವಶ್ಯಕತೆ ಇದೆ. ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 552 ದಿನಾಂಕ 8-3-91ರಲ್ಲಿ ಈ ಸದನದ ಮುಂದೆ ಇಟ್ಟಿದ್ದಾರೆ. ಅದರಲ್ಲಿ ಅಂಕಿಅಂಶಗಳು ಇವೆ. ನಾನು ಅವೆಲ್ಲವನ್ನೂ ಉಲ್ಲೇಖ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಪ್ರಶ್ನೆ ಕೇಳಿರತಕ್ಕಂಥಾದ್ದು ಯಾವ ಪ್ರಕಾರ ಇದೆ ಎಂದರೆ ನಾನು ಕೆಲವು ತಾರೀಖುಗಳನ್ನು ಕೇಳಿದ್ದೇನೆ. ದಿನಾಂಕ 1-7-87ಮತ್ತು 1-7-88 ಮತ್ತು 1-7-89 ಮತ್ತು 1-7-90 ಮತ್ತು 1-11-90ರಂದು ಈ ರಾಸಾಯನಿಕ ಘಟಕಗಳಿಗೆ ನೀಡಿದ ಲೈಸೆನ್ಸ್‌ಗಳು ಎಷ್ಟು ಎಂದು ಪ್ರಶ್ನೆ ಕೇಳಿದ್ದೇನೆ. ಆ ಉತ್ತರ ಈ ರೀತಿ ಇದೆ. ದಿನಾಂಕ 1-7-80ರಲ್ಲಿ ಆರ್.ಎಸ್-2 ಅಂದರೆ ರೆಕ್ಟಿಫೈಡ್ ಸ್ಪಿರೀಟ್. ಎರಡಕ್ಕೆ. ಡಿ.ಎಲ್. ಮೂರು ಒಂದಕ್ಕೆ, 1-7-88ರಲ್ಲಿ ಎರಡಕ್ಕೆ ಡಿ.ಎಲ್. ಮೂರು ಎರಡಕ್ಕೆ ಮತ್ತೆ 1-7-89ರಂದು ಇಲ್ಲ, ಇಲ್ಲ, 1-7-91 ಇಲ್ಲ ಇಲ್ಲ 1-11-91ರಲ್ಲಿ 30ಕ್ಕೆ ಕೊಟ್ಟಿದ್ದಾರೆ. ಹಿಂದಿನ ವರ್ಷಗಳಲ್ಲಿ ಇಲ್ಲ-ಇಲ್ಲ-ಎಂದು ಬಂದು ಈ ಸರ್ಕಾರ ಬಂದ ತಕ್ಷಣ ದಿನಾಂಕ 1-11-91 ರಂದು 30ಕ್ಕೆ ಕೊಟ್ಟಿದ್ದಾರೆ. ಆದರೆ ಅದು 30 ಅಲ್ಲ, ಇವತ್ತು ನನ್ನ ಲೆಕ್ಕದ ಪ್ರಕಾರ ಸುಮಾರು 80 ಕೆಮಿಕಲ್ ಯೂನಿಟ್ಸ್‌ಗೆ ಲೈಸೇನ್ಸ್ ರಿನ್ಯೂ ಮಾಡಿರತಕ್ಕಂಥ ಕೆಲಸ ಮಾಡಿದ್ದಾರೆ. ಸುಮಾರು 80ಕೆಮಿಕಲ್ ಯೂನಿಟ್ಸ್‌ಗೆ ಕೊಟ್ಟಿದ್ದಾರೆ. ವರ್ಷೇ ವರ್ಷೇ ನಾವು ಅವರಿಗೆ ಎಷ್ಟು ಕೋಟಾ ಕೊಡಬೇಕೆನ್ನುವ ಉತ್ತರ ಕೊಟ್ಟಿದ್ದಾರೆ. ಅವೆಲ್ಲವನ್ನೂ ಕೂಡ ನಾನು ಹೇಳುವುದಕ್ಕೆ ಹೋಗುವುದಿಲ್ಲ.

ಈ ಸರ್ಕಾರ ಬಂದ ಮೇಲೆ ಯಾರ್ಯಾರಿಗೆ ಎಷ್ಟೆಷ್ಟು ಸ್ಪಿರಿಟ್ ಕೊಟ್ಟಿದ್ದಾರೆ ಎನ್ನತಕ್ಕಂಥ ವಿವರಗಳು ಪೂರ್ತಿಯಾಗಿದೆ. 1-7-90ರವರೆಗೆ 45 ಕಂಪನಿಗಳಿಗೆ ಸ್ಪಿರಿಟ್ ಕೊಟ್ಟಿದ್ದಾರೆ. ಸುಮಾರು ಒಂದು ಕೋಟಿ 17 ಲಕ್ಷ 75 ಸಾವಿರ 273 ಲೀಟರ್ ಕೊಟ್ಟಿದ್ದಾರೆ. ಇದು ಕೆಮಿಕಲ್ ಯೂನಿಟ್ಸ್‌ಗೆ ಕೊಟ್ಟಿರತಕ್ಕಂಥಾದ್ದು. ಇದರಲ್ಲಿ ನಾನು ಬೇರೆ ಕೆಲಸ ಕೂಡ ಮಾಡಿದೆ. ಆದರೆ ಇದು 45 ಅಲ್ಲ, 3-4 ಕಂಪನಿಗಳನ್ನು ಬಿಟ್ಟರೆ ಯಾವುದೂ ಕೂಡ ಅಲ್ಲ. ಯಾವ ಒಂದು ಉದ್ದೇಶದಿಂದ ಸ್ಪಿರಿಟ್ ಉಪಯೋಗಿಸುತ್ತಾರೋ ಅದಕ್ಕೆ ಉಪಯೋಗಿಸುತ್ತಿಲ್ಲ. ಅವರೆಲ್ಲರೂ ಕೂಡ ಅಗಲೇ ನಾನು ಪ್ರಸ್ತಾಪ ಮಾಡಿದಂತಹ ಸೆಕೆಂಡ್ಸ್‌ಗೆ ಐ.ಎಂ.ಎಫ್.ಎಲ್.ಗೆ ಹಾಗೂ ಸಾರಾಯಿಗೆ ಉಪಯೋಗಿಸುತಾರೆ. ಒಂದು ಲೀಟರ್ ಸ್ಪಿರಿಟ್‌ಗೆ ಎಷ್ಟು ಬೆಲೆ ಆಗುತ್ತದೆಂದು

ನಾನು ತಿಳಿದುಕೊಳ್ಳಲು ಪ್ರಯತ್ನಮಾಡಿದೆ ಅವರು ಸರ್ಕಾರಕ್ಕೆ ಕೊಡತಕ್ಕಂಥ ಬೆಲೆ 5-65 ಪೈಸೆ ಆದರೆ ಇದಕ್ಕೆ ಇನ್ನೊಂದು ವಿಚಾರ ಮಾನ್ಯ ಅಧ್ಯಕ್ಷರೇ 3 ರೂಪಾಯಿ ಎಕ್ಸೈಜ್ ಡ್ಯೂಟಿ ಕೊಡಬೇಕು. ಆ ಎಕ್ಸೈಜ್ ಡ್ಯೂಟಿ ಕೊಡದಂತೆ ಸ್ಟೇ ತೆಗೆದುಕೊಂಡಿದ್ದಾರೆ. ಸರ್ಕಾರ ಇಂಡಸ್ಟ್ರಿಯಲ್ ಆಲ್ಕೋಹಾಲ್‌ನಲ್ಲಿ ಇಂಡಸ್ಟ್ರಿಗಳಿಗೆ ಕೊಡುವುದಕ್ಕೆ ಹೈಕೋರ್ಟ್‌ನಲ್ಲಿ ಸ್ಟೇ ಇದೆ. ಹಲವಾರು ವರ್ಷಗಳಾಗಿದೆ. ಆ ಸ್ಟೇ ಇಲ್ಲಿಯವರೆಗೆ ವೆಕೇಟ್ ಮಾಡತಕ್ಕಂಥ ಕೆಲಸಕ್ಕೆ ತಮ್ಮ ಸರ್ಕಾರದಿಂದ ಆಗಿಲ್ಲ. ಇವತ್ತು ಇದರ ಕಾಸ್ಟ್ ಅಲ್ಲಿ 5.75 ಇಶ್ಯೂ ಪ್ರೈಸ್ ಇದೆ. ಆಫೀಸ್‌ನಲ್ಲಿ ಒಂದು ಲೀಟರ್‌ಗೆ ಒಂದು ರೂಪಾಯಿ ಕೊಡಬೇಕು. ಅದು ಸರ್ಕಾರಿ ಖಜಾನೆಗೆ ಬರತಕ್ಕದ್ದಲ್ಲ.

ಅದು ಆಫೀಸ್ ಖರ್ಚು, ಅದಾದಮೇಲೆ ಅದು ಹೊರಗಡೆ ಬರುತ್ತದೆ. ಟ್ರಾನ್ಸ್‌ಪೋರ್ಟೇಷನ್ ಚಾರ್ಜಸ್ ಎಲ್ಲಾ ಸೇರಿ ಒಂದು ಲೀಟರ್ ಸ್ಪಿರಿಟ್‌ಗೆ 10 ರೂಪಾಯಿ ಅಗುತ್ತದೆ. ಹೌದಾ ಶಿವಮೂರ್ತಿಯವರೆ? ಅದನ್ನು 20ರಿಂದ 22ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ. ಈ 10 ರೂಪಾಯಿ ಇದೆಯಲ್ಲಾ ಖರ್ಚು, ಅದರಲ್ಲಿ 3ರೂಪಾಯಿ ಬೇರೆ ಇದೆ, ಈ 3 ರೂಪಾಯಿ ಯಾರ ಶೇರ್? ಶಿವಮೂರ್ತಿಯವರೇ, ಅವರು ಹೇಳುವುದಿಲ್ಲವೆಂದು ನನಗೆ ಗೊತ್ತಿದೆ. ನೋಡಿ ಅವರು ಸುಮ್ಮನೆ ಇದ್ದಾರೆ. ಈ 3 ರೂಪಾಯಿ ಎಲ್ಲಿ? ಯಾರಿಗೆ? ಸೇರುತ್ತದೆ? ಪ್ರತಿ ಕೋಟಾದಲ್ಲೂ ಒಂದು ಲೀಟರ್ ರೆಕ್ಟಿಫೈಡ್ ಸ್ಪಿರಿಟ್‌ನಲ್ಲಿ 3 ರೂಪಾಯಿ ಅಧಿಕಾರ ಸೂತ್ರ ಹಿಡಿದಿರತಕ್ಕಂಥವರ ಜೇಬಿಗೆ ಹೋಗುತ್ತದೆ. ಒಂದು ಲಕ್ಷ ರೆಕ್ಟಿಫೈಡ್ ಸ್ಪಿರಿಟ್ ಮಾಡಿದರೆ 3 ಲಕ್ಷ ರೂಪಾಯಿ ಸೇರುತ್ತದೆ. ಇನ್ನೂ ಒಂದು ಮಾನ್ಯ ಅಧ್ಯಕ್ಷರೆ ನಾನು ಆಗಲೇ ಒಂದು ವಿಷಯವನ್ನು ಹೇಳಿದೆ, ಕಳೆದ ಆರು ತಿಂಗಳಲ್ಲಿ ಇವರು ಎಷ್ಟು ಕೊಟ್ಟಿದ್ದಾರೆ ಎನ್ನುವ ಅಂಕಿ ಅಂಶ ಕೂಡ ಇದೆ. ಕಳೆದ ಆರು ತಿಂಗಳಲ್ಲಿ ಎಷ್ಟು ಕೊಟ್ಟಿದ್ದಾರೆಂದರೆ, statement showing the names of chemical units, Licenced quota sanctioned, quantity allotted for 1990-91 quantity allotted from 1-7-90 to 1-1-91.

ಈ 6,7 ತಿಂಗಳಲ್ಲಿ ಎಷ್ಟು ಕೊಟ್ಟಿದ್ದಾರೆ ಅಧ್ಯಕ್ಷರೆ? ಸುಮಾರು 85 ಲಕ್ಷ ಲೀಟರ್ ರೆಕ್ಟಿಫೈಡ್ ಸ್ಪಿರಿಟ್‌ನ್ನು ಕೊಟ್ಟಿದ್ದಾರೆ. ಹಿಂದೆ 1 ಕೋಟಿ 80 ಲಕ್ಷ ಲೀಟರ್ ಕೊಟ್ಟಿದ್ದಾರೆ. ಇವರು ಬಂದ ಮೇಲೆ 85 ಲಕ್ಷ ಲೀಟರ್ ರೆಕ್ಟಿಫೈಡ್ ಸ್ಪಿರಿಟ್ ಕೊಟ್ಟಿದ್ದಾರೆ. ಇವತ್ತು ಒಂದು ಲೀಟರ್‌ಗೆ 3 ರೂಪಾಯಿ ಇವರಿಗೆ ಸೇರುತ್ತಿದೆ. ಇವರ ಜೇಬಿಗೆ ಸೇರುತ್ತಿದೆ. ಇದರ ಬಗ್ಗೆ ಈ ಹಿಂದೆ ಸದನ ಸಮಿತಿ ವರದಿ ಕೊಟ್ಟಿದೆ. ಇದರ ಬಗ್ಗೆ ಪಾಪ ಅವರಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಶಿವಮೂರ್ತಿಯವರೇ ಬಿಡುವಾಗಿದ್ದಾಗ ಆ ವರದಿಯನ್ನು ಓದಿ. ಆ ವರದಿ ಬಂದ ಮೇಲೆ ಎಲ್ಲಾ ಕೆಮಿಕಲ್ ಯೂನಿಟ್ಸ್‌ಗಳ ಇನ್‌ಸ್ಪೆಕ್ಷನ್ ಆಯಿತು. ಆಮೇಲೆ ಈ ರೀತಿ ಸ್ಪಿರಿಟನ್ನು ಕೊಡಬೇಕಾದರೆ ಏನೇನೋ ನಿರ್ಬಂಧ ಇರಬೇಕೆಂದು ಮಾಡಲಾಗಿದೆ. ಹಿಂದಿನ ಸರ್ಕಾರ ಇದನ್ನು ಮಾಡಿದೆ. ಅದೇ ನೀವು ಬಂದ ಮೇಲೆ ಅದಕ್ಕೆ ಇದ್ದಕ್ಕಿದ್ದ ಹಾಗೆ ಜೀವ ಕೊಟ್ಟಿದ್ದೀರಿ. ನಿರ್ಜೀವವಾಗಿದ್ದ ಅದಕ್ಕೆ ಸಂಜೀವನಿಯಾಗಿ ಅದಕ್ಕೆ ಜೀವವನ್ನು ಕೊಟ್ಟಿದ್ದೀರಿ.

ಉಪಾಧ್ಯಕ್ಷಿಣಿಯವರು (ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.) : ಆದ್ದರಿಂದ ನಾನು ಇದರ ಬಗ್ಗೆ ಗುರುತರವಾದ ಆಪಾದನೆ ಮಾಡುತ್ತಿದ್ದೇನೆ. ಇವತ್ತಿನ ದಿವಸ ಈ ಬಾಬಿನಲ್ಲೇ 2 ರಿಂದ 3 ಕೋಟಿ ರೂಪಾಯಿಗಳು ನಿಮಗೆ ಬರುತ್ತಿದೆ. ಇದು ಎಲ್ಲಿಗೆ ಹೋಗುತ್ತಿದೆ? ಇದನ್ನು ಲಘುವಾಗಿ ಭಾವಿಸಕೂಡದೆಂದು ನಾನು ಹೇಳುತ್ತೇನೆ. ಈ ಸದನದ ಸಮಿತಿ ವರದಿ ಇದ್ದರೂ ಕೂಡಾ ಅದೆಲ್ಲವನ್ನೂ ಬದಿಗೊತ್ತಿ ಹಿಂದೆ ಮಾಡದೇ ಇರತಕ್ಕಂಥ ಕೆಲಸವನ್ನು ನೀವು ಮಾಡುವುದಕ್ಕೆ ಹೊರಟಿದ್ದೀರಿ. ಇದಕ್ಕೆ ಪ್ರಬಲವಾದ ಕಾರಣ ಇದೆ.

ಅದರಿಂದ ನಾನು ಹೇಳಿದ್ದು. ಬಜೆಟ್ ಯಾವ ಎಕ್ಸೈಜ್ ದೊರೆಗಳ ಬ್ರೀಫ್ ಕೇಸ್‌ನಿಂದ ಬಂದಿದೆ ಎಂದು ಹೇಳಿದ್ದು. ಅದರ ಬಗ್ಗೆ ಈ ಸದನದ ಒಂದು ವಿಶೇಷವಾದ ಸಮಿತಿಯನ್ನು ಮಾಡಬೇಕು. ಎಕ್ಸೈಜ್ ಯೂನಿಟ್ಸ್‌ಗೆ ಕೊಟ್ಟಿರತಕ್ಕದ್ದು ನೀವು ಕೋರ್ಟಿನಲ್ಲಿ ನಡೆಸಿದ್ದೀರಿ. ಕೆಲವು ಮೊಕದ್ದಮೆಗಳು ಇವತ್ತಿನವರೆಗೆ ಕೂಡ ಇದ್ದಾವೆ, ಯಾವುದೇ ಆಬ್ಜೆಕ್ಷನ್ಸ್ ಇಲ್ಲದೆ ಇವತ್ತು ನಡೆಯುತ್ತಿದೆ. ಅದರ ಬಗ್ಗೆ ಕೂಡಾ ತನಿಖೆ ಆಗಬೇಕಾಗಿದೆ. ನೀವು ಹೇಳಬಹುದು, ಕೋರ್ಟಿನ ಮುಂದೆ ಇದೆ ಎಂದು. ಹೌದು, ಕೋರ್ಟ್ ಮುಂದೆ ಇರತಕ್ಕದ್ದು ಲೀಗಲ್ ಮ್ಯಾಟರ್. ಆದರೆ ಸರ್ಕಾರ ತೆಗೆದುಕೊಂಡಿರತಕ್ಕ ಕ್ರಮ ಏನು? ನೀವು ಶಾಮೀಲಾಗಿರತಕ್ಕ ಕ್ರಮ, ಸರ್ಕಾರ ಶಾಮೀಲಾಗಿರತಕ್ಕ ಕ್ರಮ, ಅದು ಇವತ್ತಿನ ದಿವಸ ಬಯಲಿಗೆ ಬರಬೇಕಾಗಿದೆ. ಬಯಲಿಗೆ ಬರಬೇಕಾಗಿದ್ದರೆ ಈ ಸದನದ ಒಂದು ಸಮಿತಿ ಆಗಬೇಕಾಗಿದೆ. ನಾನು ಅದನ್ನು ಒತ್ತಾಯ ಮಾಡುತ್ತೇನೆ. ಇಲ್ಲದೇ ಇದ್ದರೆ ಇವತ್ತು ಏನು ನಡೆಯುತ್ತಿದೆ, ಅವರೇ ಒಪ್ಪಿಕೊಂಡಿದ್ದಾರೆ ಏನೂ ಹಣ ಬರುತ್ತಾ ಇಲ್ಲ ಎಂದು. ಅದನ್ನು ನಾನು ಹೇಳಬೇಕಾಗಿಲ್ಲ. ಎಷ್ಟು ಹಣ ಬರಬೇಕಾಗಿತ್ತು? ಇವತ್ತು ಎಲ್ಲಿಯವರೆಗೆ ಹೋಗಿದೆ ಎಂದರೆ, ನಾನು ಆ ವಿವರಕ್ಕೆ ಹೋಗುವುದಿಲ್ಲ.

ಉಪಾಧ್ಯಕ್ಷಿಣಿಯವರು: ದಯಮಾಡಿ ಮುಗಿಸಿ, ಯಾಕೆಂದರೆ ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ.

ಶ್ರೀ ಸಿ. ಬೈರೇಗೌಡ: ಎಲ್ಲಿಯವರೆಗೆ ಹೋಗಿದ್ದಾರೆ ಎಂದರೆ, ಹೆಂಡತಿ ಗಂಡ ಡ್ರೈವರ್ಸ್‌ಗೆ ಹಾಕಿದ್ದಾರೆ ಕೆಲವು ಕಡೆ. ಯಾಕೆಂದರೆ ಬ್ಯಾಂಕ್ ಗ್ಯಾರಂಟಿ ಇದೆ. ಮೂರು ತಿಂಗಳೂ, 10 ದಿವಸದವರೆಗೆ ಬ್ಯಾಂಕ್ ಗ್ಯಾರಂಟಿ ಕೊಡಬೇಕು. ಒಂದು ತಿಂಗಳ ಕ್ಯಾಷ್ ನಿಮ್ಮ ಜೊತೆಯಲ್ಲಿ ಇರುತ್ತದೆ. ಸರ್ಕಾರದ ಕೈಯಲ್ಲಿ ಇರುತ್ತದೆ, ಅವೆಲ್ಲಾ ಹಣ. ಅದು ಯಾವುದನ್ನೂ ಕೂಡ ಮುಟ್ಟುಗೋಲು ಹಾಕಿಕೊಳ್ಳತಕ್ಕಂಥದ್ದಕ್ಕೆ ಇವರು ಪ್ರಯತ್ನ ಮಾಡಿಲ್ಲ. ಆ ಹಣವನ್ನು ಮುಟ್ಟುಗೋಲು ಹಾಕಿಕೊಂಡಿಲ್ಲ. ಇವತ್ತು ಎಲ್ಲಿಯವರೆಗೆ ಹೋಗಿದೆ ಎಂದರೆ ಒಂದು ತಿಂಗಳೂ ಅಡ್ವಾನ್ಸ್ ಆಗಿ ಕೊಡಬೇಕು.

ಕೆಲವು ಕಡೆ ಡೇ-ಟು-ಡೇ ನಾಳೆಯದನ್ನು ಇವತ್ತು ಕಟ್ಟಿಸಿಕೊಳ್ಳುತ್ತಿದ್ದಾರೆ. ಇದು ಕೂಡ ಕೆಲವು ತಾಲ್ಲೂಕುಗಳಲ್ಲಿ ನಡೆದಿದೆ. ನಿನ್ನೆಯದನ್ನು ತಿಂಗಳಾನುಗಟ್ಟಲೆ ವಸೂಲು ಮಾಡದೇ ಬಿಟ್ಟಿರತಕ್ಕ ನಿದರ್ಶನಗಳು ಕೂಡ ಇದ್ದಾವೆ. ಅವೆಲ್ಲವೂ ಕೂಡ ಹೊರಗೆ ಬರಬೇಕಾಗಿದೆ. ಕೋರ್ಟಿನಲ್ಲಿರತಕ್ಕ ವಿಚಾರವೆಲ್ಲ ನಾನು ಹೇಳುತ್ತಾ ಇರತಕ್ಕಂಥವು. ನಿಮ್ಮ ಹೊಂದಾಣಿಕೆ ಇದೆಯಲ್ಲಾ, ಸರ್ಕಾರದ ಹೊಂದಾಣಿಕೆ ಇವತ್ತಿನ ದಿವಸ ಈಚೆಗೆ ಬರಬೇಕಾಗಿದ್ದರೆ ಈ ಸದನದ ಒಂದು ಸಮಿತಿ ಆಗಬೇಕು. ಇದು ಅತೀ ಅವಶ್ಯಕ. ಇಲ್ಲ ಸರ್ಕಾರ ಒಪ್ಪಿದರೆ ಎಕ್ಸೈಜ್ ದೊರೆಗಳ ಜೇಬಿನಿಂದ ಅಥವಾ ಬ್ರೀಫ್‌ಕೇಸ್‌ನಿಂದ ಬಂದಿರತಕ್ಕದ್ದು ಅಲ್ಲ ಸರಕಾರ. ಬರೇ ಎಕ್ಸೈಜ್ ದೊರೆಗಳ ಸರ್ಕಾರ ಎಂದು ನಾನು ಹೇಳಲೇಬೇಕಾಗುತ್ತದೆ. ಇಷ್ಟನ್ನು ಹೇಳುತ್ತಾ..

ಉಪಾಧ್ಯಕ್ಷಿಣಿಯವರು: ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ. ತಮಗೆ ಗೊತ್ತಿದೆ, ಇವತ್ತು ನಾವು ಚರ್ಚೆಯನ್ನು ಮುಗಿಸಬೇಕು.

ಶ್ರೀ ಸಿ. ಬೈರೇಗೌಡ: ಇಷ್ಟು ವಿಷಯವನ್ನು ಹೇಳುತ್ತಾ ಇನ್ನೂ ನನಗೆ ಮಾತನಾಡುವುದು ಬಹಳ ಇತ್ತು. ಆದರೂ ಕಾಲಾವಕಾಶ ಇಲ್ಲದೆ ಇರುವ ಕಾರಣ ನಾನು ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ): ಮಾನ್ಯ ಉಪಾಧ್ಯಕ್ಷರೇ, ನಾನು 15 ನಿಮಿಷದಲ್ಲಿ ಮುಗಿಸುತ್ತೇನೆ.

ಉಪಾಧ್ಯಕ್ಷಿಣಿಯವರು: ಮಾನ್ಯ ವಿಶ್ವನಾಥ್ ಅವರೇ, ಮಾನ್ಯ ದೇಶಪಾಂಡೆಯವರು ದೆಹಲಿಗೆ ಹೋಗಬೇಕು. ಅವರು ಮುಗಿಸಿದ ನಂತರ ನೀವು ಮಾತನಾಡಿ.

ಶ್ರೀ ಹೆಚ್. ವಿಶ್ವನಾಥ್: ನಾನು ಸಹ ಪತ್ರ ಕಳಿಸಿದ್ದೇನೆ. ನಾನೂ ಊರಿಗೆ ಹೋಗಬೇಕಾಗಿದೆ.

ಉಪಾಧ್ಯಕ್ಷಿಣಿಯವರು: ದೇಶಪಾಂಡೆಯವರು 10 ನಿಮಿಷದಲ್ಲಿ ಮುಗಿಸುತ್ತಾರೆ, ಆ ನಂತರ ನೀವು ಮಾತನಾಡಿ.

+ ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ): ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹಾಗೂ ಅರ್ಥ ಸಚಿವರು ಆದ ಮಾನ್ಯ ಬಂಗಾರಪ್ಪನವರು ತದನಂತರ 1991-92ರ ಆಯವ್ಯಯ ಪತ್ರವನ್ನು ನಾನು ವಿರೋಧಿಸುತ್ತಾ ಕೆಲವು ವಿಚಾರವನ್ನು ಈ ಸದನದ ಮುಂದೆ ಇಡಲು ಪ್ರಯತ್ನ ಮಾಡುತ್ತೇನೆ. ಈಗಾಗಲೇ ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ಈ ಒಂದು ಮುಂಗಡ ಪತ್ರದಲ್ಲಿ ಯಾರು ನಮ್ಮ ದೇಶದ, ನಮ್ಮ ರಾಜ್ಯದ ಬೆನ್ನೆಲುಬು ಎನ್ನುತ್ತೇವೆ. ಆ ರೈತರ ಸಲುವಾಗಿ ಯಾವುದೇ ರಿಯಾಯಿತಿ ಇದರಲ್ಲಿ ಕಾಣಿಸುತ್ತಿಲ್ಲ. ನಾನು ತಿಳಿದುಕೊಂಡಿದ್ದೆ, ಮಾನ್ಯ ಮುಖ್ಯಮಂತ್ರಿಯವರು ರೈತರ ಪರವಾಗಿ ಇದ್ದಾರೆ ಎಂದು. ನಮ್ಮ ಸರ್ಕಾರ ಇದ್ದಾಗ ನಾವು ಏನು ರೈತರಿಗೆ 7ರೂಪಾಯಿ ಬಡ್ಡಿ ರಿಯಾಯಿತಿಯಿಂದ ಸಾಲ ಕೊಡುತ್ತಿದ್ದೆವು.

ಆ ಯೋಜನೆಯನ್ನು ಇವರು ಜಾರಿ ಮಾಡಬಹುದು ಎಂದು. ಅಷ್ಟೇ ಅಲ್ಲ, ರೈತನಿಗೆ ಇವತ್ತು ನಿಜವಾಗಿ ಸಮಸ್ಯೆ ಆಗಿದೆ. ಅದು ಸಾಲದ ಭಾರ ಮತ್ತು ಆತನು ಏನು ಬೆಳೆಸುತ್ತಾನೆ ಅದಕ್ಕೆ ಸರಿಯಾದ ಮಾರುಕಟ್ಟೆ ಇವತ್ತು ಸಿಗುತ್ತಾ ಇಲ್ಲ. ಈ ಮಾರುಕಟ್ಟೆ ವ್ಯವಸ್ಥೆ ಬಗ್ಗೆ ಯಾವುದಾದರೂ ಒಂದು ಘೋಷಣೆಯನ್ನು ಮಾನ್ಯ ಮುಖ್ಯಮಂತ್ರಿಯವರು ಮಾಡುತ್ತಾರೆಂದು ಅಪೇಕ್ಷೆ ಮಾಡಿದ್ದೆ. ಆದರೆ ಈ ಮುಂಗಡ ಪತ್ರದಲ್ಲಿ ರೈತ ಪರವಾಗಿ ಕೃಷಿ ಕಾರ್ಮಿಕರ ಪರವಾಗಿ ಯಾವುದೇ ಯೋಜನೆಯನ್ನು ನಾವು ಕಾಣುತ್ತಿಲ್ಲ.

ಒಂದು ಕಡೆ ನಾವು 31-3-91ರ ತನಕ ಯಾವುದೇ ವಸೂಲಾತಿ ಮಾಡುವುದಿಲ್ಲ ಎಂದು ಹೇಳಿದ್ದಾರೆ. 10 ಸಾವಿರ ರೂಪಾಯಿಗಳ ತನಕ ಸಾಲ ಇದ್ದವರು ಸಾಲವನ್ನು ತುಂಬ ಬೇಡಿ ಎಂದು ಹೇಳಿದ್ದಾರೆ. ಆದರೆ ಮುಂಗಡ ಪತ್ರದಲ್ಲಿ ಅದಕ್ಕಾಗಿ ಒಂದು ದುಡ್ಡನ್ನೂ ಕೂಡ ಇಟ್ಟಿಲ್ಲ. ಕೇಂದ್ರ ಸರ್ಕಾರದವರು ಹಣವನ್ನು ಕೊಟ್ಟರೆ ನಾವು ಮಾಡುತ್ತೇವೆ, ಇಲ್ಲವಾದರೆ ಸಾಧ್ಯವಿಲ್ಲ ಎಂದು ಹೇಳುವ ಹಾಗೆ ಹೇಳಿದ್ದಾರೆ. ನಿಜಕ್ಕೂ ರೈತರ ಬಗ್ಗೆ ಇವರಿಗೆ ಕಳಕಳಿ ಇದ್ದಿದ್ದರೆ ಇವರು ಮುಂಗಡಪತ್ರದಲ್ಲಿ ಸಾಲ ಮನ್ನಾ ಮಾಡುವ ವಿಚಾರದಲ್ಲಿ ಏನಾದರೂ ವ್ಯವಸ್ಥೆಯನ್ನು ಮಾಡಬೇಕಾಗಿತ್ತು. ಅದರ ಬಗ್ಗೆ ಪ್ರಸ್ತಾಪ ಮಾಡಬೇಕಾಗಿತ್ತು. ಅದನ್ನು ಬಿಟ್ಟು ನಮ್ಮ ಹಣಕಾಸಿನ ಪರಿಸ್ಥಿತಿಯು ಚೆನ್ನಾಗಿದೆ ಎಂದು ಹೇಳಿದ್ದಾರೆ. ಆದರೆ ನಿಜವಾದ ಪರಿಸ್ಥಿತಿಯು ಏನಾಗಿದೆ ಅಂದರೆ, ಸುಮಾರು 25 ಕೋಟಿಗಳಷ್ಟು ಇಂಡಸ್ಟ್ರೀ ಸಬ್ಸಿಡಿಯು ಇನ್ನೂ ಬಿಡುಗಡೆಯಾಗಿಲ್ಲ, ಭೂ ಅಭಿವೃದ್ಧಿ ಬ್ಯಾಂಕ್, ಅಪೆಕ್ಸ್ ಬ್ಯಾಂಕ್‌ಗಳ ಮೂಲಕ ರೈತರುಗಳಿಗೆ ಕೊಡುವ ಸಬ್ಸಿಡಿ ಹಣವು ಬಿಡುಗಡೆಯಾಗಿಲ್ಲ, ಲ್ಯಾಂಡ್ ರಿಫೋರ್ಮ್ಸ್‌ಗಾಗಿ ಕೊಡುವ ಹಣ ಬಿಡುಗಡೆಯಾಗಿಲ್ಲ, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗೆ ಸರಕಾರದಿಂದ 32.35ಕೋಟಿ ರೂಪಾಯಿಗಳು ಕೊಡಬೇಕಾಗಿದೆ. ಪರಿಸ್ಥಿತಿಯು ಹೀಗಿರುವಾಗ ನಮ್ಮ ಆರ್ಥಿಕ ಪರಿಸ್ಥಿತಿಯು ಸುಧಾರಣೆಯಾಗಿದೆ ಎಂದು ಹೇಳಿದರೆ ಹೇಗೆ? ಈ ಸರಕಾರ ಅಭಿವೃದ್ಧಿ ಕೆಲಸಕಾರ್ಯಗಳನ್ನು ತೆಗೆದುಕೊಂಡಿಲ್ಲ, ಯಾವ ಸಮಸ್ಯೆಗಳ ನಿವಾರಣೆಗಾಗಿ ಕಾರ್ಯಕ್ರಮಗಳನ್ನು ತೆಗೆದುಕೊಂಡಿಲ್ಲ, ಮತ್ತು ಇವುಗಳಿಗಾಗಿ ಹಣವನ್ನು ರಿಲೀಸ್ ಮಾಡಿಲ್ಲ, ಹಾಗಾದರೆ

ರಾಜ್ಯದಲ್ಲಿ ಯಾವ ತರಹದ ಆರ್ಥಿಕ ಪರಿಸ್ಥಿತಿಯು ರಾಜ್ಯದಲ್ಲಿ ಇದೆ ಎಂಬುದನ್ನು ದಯಮಾಡಿ ತಿಳಿಸಬೇಕು. ಮಾನ್ಯ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ, ಹಣದ ಸಂಗ್ರಹಣೆ ಮಾಡಿದರು. ಹಣಕಾಸಿನ ಪರಿಸ್ಥಿತಿಯು ಸುಧಾರಣೆಯಾಗಿದೆ ಎಂದು ಹೇಳಿದರು.

ಆದರೆ ಯಾವ ಅಭಿವೃದ್ಧಿ ಕೆಲಸಗಳನ್ನು ಮಾಡಲಿಲ್ಲ. ಇವರು ಈಗ ಬಂದು ಘೋಷಣೆ ಮಾಡುತ್ತಾ ಇದ್ದಾರೆ. ಬರತಕ್ಕಂಥ ಉತ್ಪತ್ತಿಯು ನಮಗೆ ಕಡಿಮೆಯಾಗುತ್ತಾ ಇದೆ. ಅಬಕಾರಿ ಇಲಾಖೆಯಿಂದ ಬರತಕ್ಕಂಥಾದ್ದಾಗಲಿ, ಇನ್‌ಕಂಟ್ಯಾಕ್ಸ್‌ನಿಂದ ಬರತಕ್ಕಂಥಾದ್ದಾಗಲಿ, ಸರಿಯಾದ ಪ್ರಮಾಣದಲ್ಲಿ ಬರುತ್ತಾ ಇಲ್ಲ ಬರುವಂತ ಪರಿಸ್ಥಿತಿಯು ದಿನೇದಿನೇ ಕಡಿಮೆಯಾಗುತ್ತಾ ಇದೆ. ಹಾಗೆ ಬರುವ ಉತ್ಪತ್ತಿಯು ಕಡಿಮೆಯಾಗುತ್ತಿರುವುದರಿಂದ ನಮ್ಮ ಟಾರ್ಗೆಟ್ ಮುಟ್ಟುವುದಕ್ಕೆ ಆಗಿಲ್ಲ ಎಂದು, ಇವರ ಬಜೆಟ್ ಭಾಷಣ ಅಂದರೆ ಕೇವಲ ಒಂದು ಸಾಕಷ್ಟು ಪುಟಗಳುಳ್ಳ ಉದ್ದದ ಭಾಷಣವಾಗಿದೆ. ಈ ಸದನದ ಇತಿಹಾಸದಲ್ಲಿ ಇಷ್ಟೊಂದು ಉದ್ದದ ಭಾಷಣವನ್ನು ಯಾವ ಮುಖ್ಯ ಮಂತ್ರಿಯೂ ಮಾಡಿರಲಿಲ್ಲ. ಕೇವಲ ಭರವಸೆಗಳಿಂದ ತುಂಬಿದ ಪುಟಗಳು ಮಾತ್ರ ಕಾಣುತ್ತವೆ. ಇವರಲ್ಲಿ ಬಡವರಿಗೆ, ಹಿಂದುಳಿದವರಿಗೆ ಏನೇನೂ ಇಲ್ಲ. ಈ ಬಜೆಟ್ ಭಾಷಣವು ಕೇವಲ ಪೊಳ್ಳು ಘೋಷಣೆಗಳಿಂದ ತುಂಬಿದ್ದಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಯವರಿಗೆ ಸ್ಪಷ್ಟಪಡಿಸಬೇಕಾಗುತ್ತದೆ. ಇವೊತ್ತು ಇವರ ಸರಕಾರವು ಯಾವ ನಿರ್ದೇಶನದಲ್ಲಿ ಹೋಗುತ್ತಿದೆ? ಮಾನ್ಯ ಮುಖ್ಯಮಂತ್ರಿಯವರು ಕೆಲವು ವಿರೋಧಪಕ್ಷದ ನಾಯಕರುಗಳ ಒತ್ತಾಯದ ಮೇರೆಗೆ ಎಕ್ಸ್‌ಪೋರ್ಟ್ ಡ್ಯೂಟಿ ಕಡಿಮೆ ಮಾಡಿದ್ದೇನೆ ಎಂದು ಹೇಳಿದ್ದಾರೆ. ಅದು ನಿಜ. ರಾಜ್ಯದ ಹಿತದೃಷ್ಟಿಯಿಂದ ಇವೊತ್ತು ನಾವು ಬೇರೆ ರಾಜ್ಯಗಳಿಗೆ ಕಂಪೇರ್ ಮಾಡಿದಾಗ ಈ ನಿರ್ಣಯವನ್ನು ತೆಗೆದುಕೊಂಡಿದ್ದು ಸರಿಯಾಗಿದೆ. ಆದರೆ ಇದನ್ನು ಮಾಡುವಾಗ ಮತ್ತೊಂದು ಸೂಚನೆಯನ್ನು ನಾವು ಕೊಟ್ಟಿದ್ದೇವೆ. ಇಂಪೋರ್ಟೆಡ್ ಡ್ಯೂಟಿಯನ್ನು ಹೆಚ್ಚಿಗೆ ಮಾಡಿ ಎಂದು ಹೇಳಿದ್ದೇವೆ. ಬೇರೆ ದೇಶಗಳಿಂದ ಬರತಕ್ಕಂಥ ಲಿಕ್ಕರ್‌ಗೆ ಹೆಚ್ಚಿಗೆ ಟ್ಯಾಕ್ಸ್ ಮಾಡಿ ಎಂದು ಹೇಳಿದ್ದೇವೆ. ಇದರಿಂದ ಹೆಚ್ಚಿಗೆ ಹಣವು ಬರುತ್ತದೆ. ಆಗ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಒಳ್ಳೆಯ ಸಲಹೆ ಎಂದು ಹೇಳಿದರು. ಬೇಕಾದರೆ ರಿಕಾರ್ಡ್‌ನಲ್ಲಿರುವುದನ್ನು ತೆಗೆದು ನೋಡಬಹುದು. ಆದರೆ ಅದನ್ನು ಬಜೆಟ್‌ನಲ್ಲಿ ಇಂಟ್ರಡ್ಯೂಸ್ ಮಾಡಲೇ ಇಲ್ಲ. ಇದನ್ನು ಏಕೆ ಮಾಡಿಲ್ಲ ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟೀಕರಣ ನೀಡಬೇಕು. ಮುಂದೆ ಚುನಾವಣೆ ಬರಲಿದೆ.

ಅದರ ಸಲುವಾಗಿ ಇವೊತ್ತು ವಸತಿ ಇಲಾಖೆ ಕ್ರಿಯಾಶೀಲವಾಗಿದೆ, ಅಬಕಾರಿ ಇಲಾಖೆಯು ಕ್ರಿಯಾಶೀಲವಾಗಿದೆ. ಹೇಮಮಾಲಿನಿ, ಸಿನಿಮಾ ನಟಿ, ಇವರಿಗೆ ಕೊಡುವ ಒಂದು ಪ್ರಸ್ತಾವನೆ ಸರಕಾರದಲ್ಲಿದೆ ಎಂದು ಕೇಳಿದ್ದೇನೆ. ಡಿನೋಟಿಫೈ ಮಾಡುವ ಪ್ರಸ್ತಾವ ಇದೆ ಎಂದು ಕೇಳಿದ್ದೇನೆ. ಅದೇ ಪ್ರಕಾರ ದೊಡ್ಡ ದೊಡ್ಡ ಸಿನಿಸ್ಟಾರ್ಸ್‌ಗೆ, ಇಂಡಸ್ಟ್ರೀಯಾಲಿಸ್ಟ್‌ಗಳಿಗೆ ಅವರಿಗೆ ಸಂಬಂಧಪಟ್ಟ ಎಲ್ಲಾ ಪ್ರಕರಣಗಳ ಬಗ್ಗೆ ಸರಕಾರದಲ್ಲಿ ಪರಿಶೀಲನೆ ನಡೆಯುತ್ತಾ ಇದೆ ಎಂದು ಕೂಡ ಕೇಳಿದ್ದೇನೆ. ಅಸೆಂಬ್ಲಿ ಆದ ನಂತರ ಇದೆಲ್ಲಾ ಡಿನೋಟಿಫೈ ಆಗುವ ಸಂದರ್ಭ ಇದೆಯಂತೆ. ಅಂಥ ಒಂದು ಸುದ್ದಿ ಬಂದಿದೆ. ಈ ವಿಚಾರಗಳ ಬಗ್ಗೆ ನಾನು ಸರಕಾರಕ್ಕೆ ಎಚ್ಚರಿಕೆ ಕೊಡುತ್ತಾ ಇದ್ದೇನೆ. ಜನರ ಹಿತದ ವಿರುದ್ಧವಾಗಿ ಯಾವುದೇ ಕ್ರಮವನ್ನು ತೆಗೆದುಕೊಂಡರೂ ಅದರ ವಿರುದ್ಧ ಹೋರಾಟ ಮಾಡುವುದಕ್ಕೆ ನಾವೆಲ್ಲರೂ ಸಿದ್ಧರಾಗಿದ್ದೇವೆ. ಆದುದರಿಂದ ಸರಕಾರದವರು ಜವಾಬ್ದಾರಿಯಿಂದ ಇಂಥ ವಿಚಾರಗಳ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ.

ನಮ್ಮ ಸಣ್ಣ ಕೈಗಾರಿಕೆಗಳು ಬೆಳೆಯಬೇಕು. ಕಾಟೇಜ್ ಇಂಡಸ್ಟ್ರೀಗಳು ಬೆಳೆಯಬೇಕು. ಈ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಒಂದು ದೊಡ್ಡ ಸ್ಕೀಮ್ ತರುತ್ತೇವೆ ಎಂದು ಹೇಳಿದ್ದರು. ಆದರೆ ಆ ಸ್ಕೀಮ್ ಬಗ್ಗೆ ಬಜೆಟ್‌ನಲ್ಲಿ ಏನೂ ಇಲ್ಲ. ರಾಜ್ಯದಲ್ಲಿ ಬೀಡಿ ಕಾರ್ಮಿಕರು 6 ಲಕ್ಷ ಜನರಿದ್ದಾರೆ. ಈ ಬಗ್ಗೆ ನಾನು ಭಾಷಣದಲ್ಲಿ ಹೇಳಿದ್ದೇನೆ. ಮಧ್ಯ ಪ್ರದೇಶದಿಂದ ಬರತಕ್ಕಂಥ ತಂದೂರ್ ಲೀವ್ಸ್ ಬರುತ್ತಾ ಇಲ್ಲ. ಅದರ ಪರಿಣಾಮವಾಗಿ ಪೂರ್ಣವಾದ ಇಂಡಸ್ಟ್ರೀಯು ಮುಕ್ತಾಯದ ಹಂತದಲ್ಲಿದೆ ಎಂದು ಹೇಳಿದ್ದೇನೆ. ಒಂದು ಕಡೆ ಕಾಟೇಜ್ ಇಂಡಸ್ಟ್ರೀ ಶುರು ಮಾಡುತ್ತೇವೆ ಎಂದು ಹೇಳಿ ಇನ್ನೊಂದು ಕಡೆ ಈ ತರಹ ಮಾಡುವುದು ಸರಿಯಲ್ಲ. ಸೀಮೆಂಟ್ ಇಂಡಸ್ಟ್ರಿಯು ನಮ್ಮ ರಾಜ್ಯದ ಇಂಡಸ್ಟ್ರಿಯಾಗಿದೆ. ಅದರ ಮೇಲೆ ನೀವು ಟ್ಯಾಕ್ಸ್ ರಿಯಾಯಿತಿ ಕೊಟ್ಟಿದ್ದು ಹೆಚ್ಚಾಗಿ ಕೊಡುವ ಅವಶ್ಯಕತೆ ಇರಲಿಲ್ಲ. ಹೀಗೆ ಮಾಡಿದ್ದರ ಪರಿಣಾಮವಾಗಿ ಸಿಮೆಂಟ್ ಇಂಡಸ್ಟ್ರಿ ಮುಚ್ಚುವ ಪರಿಸ್ಥಿತಿಗೆ ಬರಬಹುದು.

ಅದೇ ಪ್ರಕಾರ ಸನ್‌ಫ್ಲವರ್, ಗ್ರೌಂಡ್‌ನಟ್ ಮೇಲೆ ತಾವು ಟ್ಯಾಕ್ಸ್ ಹಾಕಿದಿರಿ. ಇದರಿಂದ ನಾವು ಎಣ್ಣೆ ಮಾಡುತ್ತೇವೆ, ಅದಕ್ಕೆ ಹಾಕಿದಿರಿ. ಏನಾಗುತ್ತಿದೆ ಎಂದರೆ ಮಹಾರಾಷ್ಟ್ರಕ್ಕೆ ಎಲ್ಲಾ ರಾಮೆಟೀರಿಯಲ್ಸ್ ಕೇವಲ 4 ಪರ್ಸೆಂಟ್ ಸಿಎಸ್‌ಟಿ ಮೇಲೆ ಹೋಗುತ್ತಿವೆ. ಹೀಗಾಗಿ ನಮ್ಮ ಕಡೆ ಇದ್ದ ಸಣ್ಣ ಕೈಗಾರಿಕೆ ಯಾವುವು ಎಣ್ಣೆ ಮಾಡುತ್ತಿದ್ದವು. ಅವೆಲ್ಲ ಬಂದ್ ಆಗುತ್ತ ಇವೆ. ಇಷ್ಟೇ ಅಲ್ಲ, ಕಾಸ್ಟ್ ಆಫ್ ಪ್ರೊಡಕ್ಷನ್ ಕೂಡಾ ಹೆಚ್ಚಾಗಿ ರಾಮೆಟೀರಿಯಲ್ಸ್ ಪರ್ಚೇಸ್ ಮೇಲೆ ಸರ್‌ಚಾರ್ಜ್ ಕೊಡಬೇಕು, ಆಮೇಲೆ ಫಿನಿಶ್ಡ್ ಪ್ರೊಡಕ್ಟ್ ಮೇಲೂ ಕೊಡಬೇಕು. ಹೀಗಾಗಿ ಇವತ್ತು ಏನು ತಯಾರು ಮಾಡುತ್ತಾರೆ ಅದರ ದರ ಹೆಚ್ಚಾಗಿ ನಮ್ಮ ಕೈಗಾರಿಕೆಗಳು ಮುಚ್ಚುವ ಪರಿಸ್ಥಿತಿಗೆ ಬಂದಿವೆ. ಆದ್ದರಿಂದ ಸಣ್ಣ ಕೈಗಾರಿಕೆ ರಾಜ್ಯದಲ್ಲಿ ಬೆಳೆಯಬೇಕು ಎಂದು ಆಸ್ಥೆ ಇದ್ದರೆ ಸರ್ಕಾರ ವಿಚಾರ ಮಾಡಬೇಕಾಗುತ್ತದೆ. ಯಾವ ತರಹ ಅವರ ಸಮಸ್ಯೆ ತಾವು ಬಗೆಹರಿಸುತ್ತೀರಿ, ಅದೇ ರೀತಿ ಸನ್‌ಫ್ಲವರ್ ಮತ್ತು ಗ್ರೌಂಡ್‌ನಟ್ ಮೆಟೀರಿಯಲ್ ಮೇಲೆ ಏನು ಟ್ಯಾಕ್ಸ್ ಹಾಕಿದ್ದೀರಿ ಅದನ್ನು ಮುಖ್ಯಮಂತ್ರಿಗಳು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ.

ಕುಡಿಯುವ ನೀರಿನ ಅಭಾವದ ಬಗ್ಗೆ ಸಾಕಷ್ಟು ಹಣ ರಿಲೀಸ್ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಹಣ ಎಲ್ಲಿ ಖರ್ಚಾಗುತ್ತಿದೆಯೋ ಗೊತ್ತಿಲ್ಲ. ಬೋರ್‌ವೆಲ್ ಡಿಗ್ ಮಾಡಲು ರಿಗ್ ಬರಬೇಕು, ರಾಜ್ಯದಲ್ಲಿ ಎಷ್ಟು ರಿಗ್‌ಗಳಿವೆ? ಎಷ್ಟು ಬೋರ್‌ವೆಲ್ ತೆಗೆದಿವೆ ಎಂಬ ಮಾಹಿತಿ ಸದನಕ್ಕೆ ಸರ್ಕಾರ ಕೊಡಬೇಕಾಗುತ್ತದೆ. ಬೆಂಗಳೂರು ನಗರದಲ್ಲಿ ಇವತ್ತು ಕುಡಿಯುವ ನೀರಿನ ಅಭಾವ ಇದೆ. ಮೂರು ದಿನ ನಾಲ್ಕು ದಿನ ನೀರಿಲ್ಲ ಕೆಲವು ಭಾಗದಲ್ಲಿ. ಮೊನ್ನೆ ದಿನ ಸಚಿವರು ಹೇಳಿದರು. 600 ಬೋರ್‌ವೆಲ್ ಡ್ರಿಲ್ ಮಾಡ್ತಿದ್ದೇವೆ ಬೆಂಗಳೂರಿನಲ್ಲಿ ಅಂತ, ಇನ್ನೂ 34 ಡ್ರಿಲ್ ಆಗಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಿಜವಾಗೂ ರೈತರು ಕೃಷಿ ಕಾರ್ಮಿಕರು, ಸಾಮಾನ್ಯ ಜನರ ಸಮಸ್ಯೆ ನಿವಾರಣೆ ಮಾಡಲು ಸರ್ಕಾರಕ್ಕೆ ಕಾಳಜಿ ಇದ್ದರೆ ತಾವು ಯೋಜನೆ ಹಾಕಿಕೊಂಡರೆ ಏನೂ ಆಗೊಲ್ಲ, ಅದರ ಇಂಪ್ಲಿಮೆಂಟೇಷನ್ ಆಗಬೇಕಾಗುತ್ತದೆ. ಅದಕ್ಕೆ ಸರಿಯಾದ ಕಮಿಟೆಡ್ ಏಜೆನ್ಸಿ ಬೇಕಾಗುತ್ತದೆ. ಅದರ ಸಲುವಾಗಿ ನಾನು ತಮ್ಮ ಮುಖಾಂತರ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡ್ತಾ ಇದ್ದೇನೆ.

ಕುಡಿಯುವ ನೀರಿನ ಅಭಾವ ಇಡೀ ರಾಜ್ಯದಲ್ಲಾಗಿದೆ, ಹಳ್ಳಿಗಳಲ್ಲಾಗಿದೆ. ಇದರ ಸಲುವಾಗಿ ಒಂದು ವಾಲಂಟರಿ ಸೆಲ್ ಮಾಡಿ, ಯಾವ್ಯಾವ ಪರಿಸ್ಥಿತಿ ಎಲ್ಲೆಲ್ಲಿದೆ ಎಂದು ತಿಳಿದುಕೊಂಡು ಆ ಸಮಸ್ಯೆ ಬಗೆಹರಿಸಲಿಕ್ಕೆ ಪ್ರಾಮಾಣಿಕವಾದ ಪ್ರಯತ್ನ ತಾವು ಮಾಡಬೇಕೆಂದು ಸದನದಲ್ಲಿ ಕೇಳಿಕೊಳ್ಳುತ್ತಾ ಇದ್ದೇನೆ. ಅಲ್ಲದೆ ಸಿಕ್ ಇಂಡಸ್ಟ್ರೀಸ್ ಬಗ್ಗೆಯೂ ಹೇಳಿದ್ದಾರೆ. ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್ಸ್ ಎಲ್ಲಿ ಸಿಕ್ಕಾಗಿವೆ

ಅವುಗಳನ್ನು ಮಾರಾಟ ಮಾಡಬೇಕೆಂದು ಬೇರೆ ನಿರ್ಣಯ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ನಾನು ಕೇಳುತ್ತಿದ್ದೇನೆ, ಯಾವ ಇಂಡಸ್ಟ್ರೀಗಳು ಸಿಕ್ ಆಗಿವೆ. ಅವಕ್ಕೆ ನಮ್ಮ ಕಡೆಯಿಂದ ಯಾವುದೇ ಸಪ್ಪೋರ್ಟ್ ಇಲ್ಲ. ಮೈಸೂರು ಲ್ಯಾಕ್ ಅಂಡ್ ಪೇಂಟ್ಸ್ ಅವರು ಪೇಂಟ್ಸ್‌ನ್ನು ತಯಾರು ಮಾಡುತ್ತಿದ್ದಾರೆ. ಆದರೆ ನಿಮ್ಮ ಪಿಡಬ್ಲ್ಯೂಡಿ ಇಲಾಖೆಯವರು ಅಲ್ಲಿ ಖರೀದಿ ಮಾಡೋಲ್ಲ. ಕಿಂಕೊ ಬಗ್ಗೆ ಹೇಳಿದರು, ಅದು ಕೆಎಸ್‌ಆರ್‌ಟಿಸಿಯ ಸರ್ಕಾರಿ ಸಂಸ್ಥೆ. ಅದರ ಸಲುವಾಗಿ ಈ ಇಂಡಸ್ಟ್ರೀಸ್ ಏಕೆ ಸಿಕ್ಕಾಗಿವೆ ಎಂದು ಮೊದಲು ಪರಿಶೀಲನೆ ಮಾಡಬೇಕಾಗುತ್ತದೆ. ನಾನು ಸಣ್ಣ ಕೈಗಾರಿಕಾ ಸಚಿವನಾಗಿದ್ದಾಗ 400 ಐಟಮ್ಸ್‌ನ್ನು ಸಣ್ಣ ಕೈಗಾರಿಕೆಗೆ ರಿಸರ್ವ ಮಾಡಿದ್ದೆವು. ಆದೇಶ ಕೊಟ್ಟಿದ್ದಿರಿ. ಸರ್ಕಾರಿ ಇಲಾಖೆಗಳು ಮತ್ತು ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಬೇರೆ ಕಡೆಯಿಂದ ಆರ್ಡರ್ಸ್ ತರುತ್ತಿವೆ. ನಮ್ಮ ರಾಜ್ಯದ ಸಣ್ಣ ಕೈಗಾರಿಕೆಯಿಂದ ಆದೇಶ ಬಂದಿದ್ದರೂ ತರುತ್ತಾರೆ. ಇದು ನಿಲ್ಲಬೇಕು. ನಿಜವಾಗಿಯೂ ನಮ್ಮ ಕೈಗಾರಿಕೆಗೆ ಉತ್ತೇಜನ ಕೊಡಬೇಕಾದರೆ ಹಿಂದುಳಿದ ಪ್ರದೇಶದಲ್ಲಿ ಕೈಗಾರಿಕೆಯಾಗಬೇಕಾದರೆ ನಿಜವಾಗಿ ನಿರುದ್ಯೋಗ ಸಮಸ್ಯೆ ನಿವಾರಣೆ ಮಾಡಬೇಕಾಗಿದ್ದರೆ ಸ್ಲಂ ಪ್ರಾಬ್ಲಮನ್ನು ಸಾಲ್ವ್ ಮಾಡಬೇಕಾದರೆ ಹಿಂದುಳಿದ ಪ್ರದೇಶಗಳಲ್ಲಿ ಸಣ್ಣ ಕೈಗಾರಿಕೆಗಳು ಶುರುವಾಗಬೇಕು. ಮಾಡೆಲ್ ಇಂಡಸ್ಟ್ರೀಸ್ ಶುರುವಾಗಬೇಕು. ಇದಾಗಬೇಕಾದರೆ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಆಗಬೇಕು.

ಸರಿಯಾದ ಮಾರ್ಕೆಟಿಂಗ್ ಫೆಸಿಲಿಟಿ ಕೊಡಬೇಕು ಮತ್ತು ರಾಜ್ಯಸರ್ಕಾರದ ಪ್ರತಿಯೊಂದು ಇಲಾಖೆಗೆ ತಾವು ಆದೇಶ ಕೊಡಬೇಕಾಗುತ್ತದೆ, ಅಷ್ಟೇ ಅಲ್ಲ ಅಂಡರ್‌ಟೇಕಿಂಗ್ಸ್‌ಗೆ ಆದೇಶ ಕೊಡಬೇಕು ಮೊದಲು ರಾಜ್ಯದಲ್ಲಿ ತಯಾರಾದ ಮಾಲನ್ನು ಖರೀದಿಸಬೇಕು, ಇಲ್ಲಿ ಸಿಗಲಿಲ್ಲ ಎಂದರೆ ರಾಜ್ಯದಿಂದ ತರಬಹುದೆಂದು. ಈ ವರ್ಗಾವಣೆ ನೀತಿಯಲ್ಲಿ ಯಾವುದೇ ಡಿಸಿಪ್ಲಿನಿಲ್ಲ. ಮನಸ್ಸಿಗೆ ಬಂದ ಹಾಗೆ ವರ್ಗಾವಣೆ. ಜೂನ್‌ನಲ್ಲಿ ಮಾಡುತ್ತಾರೆ, ಮೇನಲ್ಲಿ ಮಾಡುತ್ತಾರೆ. ಇವತ್ತೂ ಮಾಡುತ್ತಾ ಇದ್ದಾರೆ. ದಿನೇದಿನೇ ಮಾಡ್ತಾ ಇದ್ದಾರೆ. ಇವತ್ತು ಮುಖ್ಯಮಂತ್ರಿಗಳನ್ನು ಕೇಳ್ತಾ ಇದ್ದೇನೆ. ಅಡ್ಮಿನಿಸ್ಟ್ರೇಷ್‌ನಲ್ಲಿ ಬಿಗಿ ತರಲು ಏನಾದರೂ ಪ್ರಯತ್ನ ಮಾಡ್ತೀರೋ ಅಥವಾ ಇಲ್ಲವೋ? ಡಿಸಿಪ್ಲಿನ್ ಇಡ್ತೀರೋ ಇಲ್ಲವೋ? ಇಂದು ಯಾವ ಪ್ರಕಾರ ಆಡಳಿತ ನಡೆಯುತ್ತಿದೆ ಎಂದರೆ ಬೇಕಾದವರು ಹೋಗಿ ಬೇಕಾದವರನ್ನು ಟ್ರಾನ್ಸ್‌ಫಾರ್ ಮಾಡಿಸಿಕೊಂಡು ಬರಬಹುದು. ಆ ಪರಿಸ್ಥಿತಿ ನಿರ್ಮಾಣವಾಗಿದೆ.

ತಮ್ಮ ಕಛೇರಿಯಲ್ಲಿ ಯಾರು ವಸೂಲಿದಾರರು ಇದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳಿದೆ. ನಿಮಗೆ ನಿಜವಾಗಿಯೂ ಒಳ್ಳೆಯ ಹೆಸರು ಬರಬೇಕಾಗುತ್ತದೆ. ಈ ವಿಚಾರವನ್ನು ನಿಮ್ಮ ಶಾಸಕರು ಕೂಡಾ ಮಾತನಾಡುತ್ತಿದ್ದಾರೆ, ಎಲ್ಲರೂ ಇದರ ಬಗ್ಗೆ ಮಾತನಾಡುತ್ತಿದ್ದಾರೆ. ಸಾರ್ವಜನಿಕರು ಕೂಡಾ ಮಾತನಾಡುತ್ತಿದ್ದಾರೆ. ಇವರ ಮೇಲೆ ನೀವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಒಂದು ನಿರ್ಬಂಧವನ್ನು ತಾವು ಹಾಕಬೇಕಾಗುತ್ತದೆ. ಯಾವ ಪ್ರಕಾರ ಟ್ರಾನ್ಸ್‌ಫರ್ ಮಾಡಬೇಕೋ ಆ ರೀತಿಯಲ್ಲಿ ಮಾಡಿ. ಯಾರು ಎಲ್ಲಿ ಇರಬೇಕು ಎಂದು ಹೇಳುವುದು ಅದು ನಿಮ್ಮ ನಿರ್ಣಯ. ಅದನ್ನು ನಾವು ಹೇಳುವುದಕ್ಕೆ ಬರುವುದಿಲ್ಲ. ಆದರೆ ಇದನ್ನು ಮಾಡುವಾಗ ಡಿಸಿಪ್ಲಿನ್‌ನನ್ನು ಇಟ್ಟುಕೊಂಡು ಕಾಪಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್: ಭ್ರಷ್ಟ ಅಧಿಕಾರಿಗಳು ರಾಜಕೀಯ ಮಾಡುವವರನ್ನು ವರ್ಗಾವಣೆ ಮಾಡಲೇಬೇಕಾಗುತ್ತದೆ. ವರ್ಷಾನುಗಟ್ಟಲೆ ಅವರನ್ನು ಇಟ್ಟುಬಿಟ್ಟರೆ ರಾಜಕೀಯ ಮಾಡುತ್ತಾರೆ. ಜಾತಿ ರಾಜಕೀಯ ಮಾಡುತ್ತಾರೆ. ಎಲ್ಲಾ ರೀತಿಯಲ್ಲೂ ರಾಜಕೀಯ

ಮಾಡುತ್ತಾರೆ. ಈ ರೀತಿಯಲ್ಲಿ ಭ್ರಷ್ಟ ಇದ್ದವರನ್ನು ವರ್ಗಾವಣೆ ಮಾಡಲೇಬೇಕಾಗುತ್ತದೆ. ಸರ್ಕಾರ ಅದನ್ನು ಮಾಡಲಿ.

ಶ್ರೀ ಆರ್.ವಿ. ದೇಶಪಾಂಡೆ: ವರ್ಗಾವಣೆ ಮಾಡುವ ಅಧಿಕಾರ ನಿಮ್ಮದು. ಅದರ ಬಗ್ಗೆ ನಾವು ಮಾತನಾಡುವುದಿಲ್ಲ. ಆದರೆ ಯಾವ ಸಮಯದಲ್ಲಿ ಆಗಬೇಕು, ಯಾವಾಗ ಆಗಬೇಕು, ಅದನ್ನು ನಿರ್ಣಯ ಮಾಡಬೇಕಾಗುತ್ತದೆ. ಎಷ್ಟು ಹಣವನ್ನು ಟಿ.ಎ,, ಡಿ.ಎ. ಮೇಲೆ ವರ್ಗಾವಣೆ ಬಗ್ಗೆ ಕಳೆದ ವರ್ಷದಲ್ಲಿ ಖರ್ಚು ಮಾಡಿದ್ದೀರಿ ಎನ್ನುವುದು ಗೊತ್ತಾಗಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದು ಉದಾಹರಣೆಯನ್ನು ತರುತ್ತೇನೆ.

ಕಳೆದ ವರ್ಷ ವೀರೇಂದ್ರ ಪಾಟೀಲರು ಮಾನ್ಯ ಮುಖ್ಯಮಂತ್ರಿಗಳಾಗಿದ್ದಾಗ ಒಂದು ಆದೇಶವನ್ನು ಕೊಟ್ಟರು, ಅದೇನೆಂದರೆ 31-5-90 ಡೇಟ್ ಆದ ನಂತರ ಯಾರನ್ನು ಟ್ರಾನ್ಸ್‌ಫರ್ ಮಾಡಬೇಕು ಎಂದು. ಆದರೆ ಅರಣ್ಯ ಇಲಾಖೆಯಲ್ಲಿ ಏನು ಮಾಡಿದರು, 14-6-90 ಟ್ರಾನ್ಸ್‌ಫರ್ ಮಾಡಿ 31-5-90ಕ್ಕೆ ಡೇಟ್‌ಹಾಕಿದರು. ಆ ಅಧಿಕಾರಿಯ ಹೆಸರು ತಿಮ್ಮಯ್ಯ.....ಎಂದು. ಆ ಆರ್ಡರನ್ನೂ ಟ್ರಿಬ್ಯೂನಲ್‌ನಲ್ಲಿ ಛಾಲೆಂಜ್ ಮಾಡಿದರು. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಇದನ್ನು ಏತಕ್ಕೆ ತರುತ್ತಿದ್ದೇನೆಂದರೆ, ಇದರಲ್ಲಿ ಸ್ಟ್ರಿಕ್ಚರ್ ಆಗಿ ಹೋಗಿದೆ. ಮಿನಿಸ್ಟರ್ ಮೇಲೆ ಹಾಕಿದ್ದಾರೆ, ಅಧಿಕಾರಿಗಳ ಮೇಲೆ ಹಾಕಿದ್ದಾರೆ, ನನ್ನ ಹತ್ತಿರ ಟ್ರಿಬ್ಯೂನಲ್ ಜಡ್ಜ್‌ಮೆಂಟ್ ಇದೆ. ಈ ಜಡ್ಜ್‌ಮೆಂಟ್‌ನಲ್ಲಿ ಏನು ಹೇಳಿದ್ದಾರೆ. ಇದನ್ನು ಆಂಟಿ ಡೇಟ್ ಹಾಕಿ ಮಾಡಿ ಮಾಡಿದ್ದಾರೆ ಎಂದು ಹೇಳಿದ್ದಾರೆ 14-6-90ಕ್ಕೆ ಟ್ರಾನ್ಸ್‌ಫರ್ ಮಾಡಿಲ್ಲ, ಅದು ಸುಳ್ಳು, 31-5-90ಕ್ಕೆ ಟ್ರಾನ್ಸ್‌ಫರ್ ಆಗಿದೆ ಎಂದು ಹೇಳಿ ಚೀಫ್ ಕನ್‌ಸರ್ವೇಟರ್ ಆಫ್ ಫಾರೆಸ್ಟ್‌ನವರು ಅಫಿಡೆವಿಟ್‌ನ್ನು ಮಾಡಿದ್ದಾರೆ. ಈ ಟ್ರಾನ್ಸ್‌ಫರ್ 31-5-90ಕ್ಕೆ ಆಗಿದೆ 14-6-90ಕ್ಕೆ ಆಗಿಲ್ಲ, ಆದರೆ The Tribunal has come to the conclusion that, transfers were effected on 14.6.1990 but a false ante date has been inserted as 31-5-90. So, 31.5.90 is an ante-date inserted.

ಏನೂ ಮಾಡಿದ್ದಾರೆ? ಆ ಚೀಫ್ ಕನ್‌ಸರ್ವೇಟರ್ ಆಫ್ ಫಾರೆಸ್ಟ್ ಬಗ್ಗೆ ನಾನು ಏನು ಮಾತನಾಡುವುದಿಲ್ಲ. ಅವರು ಸುಳ್ಳು ಅಫಿಡವಿಟ್‌ನ್ನು ಮಾಡಿದ್ದಾರೆ. ಅದನ್ನು ಕೂಡ ಟ್ರಿಬ್ಯೂನಲ್‌ನಲ್ಲಿ ಹೇಳಿದ್ದಾರೆ. "His intentions are *malafide*, there, is no *bonafide* in these transfers".

ಸಚಿವರ ಒಂದು ದಬ್ಬಾಳಿಕೆಗೆ ಹೆದರಿ ಅವನು ಸುಳ್ಳು ಅಫಿಡವಿಟ್ಟನ್ನು ಮಾಡಿದ್ದಾನೆ. ಯಾರು ಸುಳ್ಳು ಅಫಿಡವಿಟ್ಟನ್ನು ಮಾಡಿದ್ದಾರೆ, ಆ ಅಧಿಕಾರಿಗೆ ಪ್ರಮೋಷನ್ ಆಗಿದೆ. ಪ್ರಿನ್ಸಿಪಾಲ್ ಚೀಫ್ ಕನ್‌ಸರ್ವೇಟರ್ ಆಫ್ ಫಾರೆಸ್ಟ್ ಆಗಿ ಅವರಿಗೆ ಪ್ರಮೋಷನ್ ಆಗಿದೆ.

ಶ್ರೀ ಎಂ. ಮಹದೇವ್: ನೀವು 1983 ರಿಂದ 1989ರವರೆಗೂ ಅಧಿಕಾರದಲ್ಲಿದ್ದೀರಿ, ಆಗ ಎಷ್ಟು ಟ್ರಾನ್ಸ್‌ಫರ್ ಮಾಡಿದ್ದೀರಿ, ಎಷ್ಟು ಅನಾಹುತಗಳಾಗಿದೆ, ಅವೆಲ್ಲವನ್ನೂ ಕಂಪೇರ್ ಮಾಡಿದರೆ ಇದು ಸ್ವಲ್ಪ ಕಡಿಮೆ ಅಲ್ಲವೇ?

ಶ್ರೀ ಆರ್.ವಿ. ದೇಶಪಾಂಡೆ: ಆ ಜಡ್ಜ್‌ಮೆಂಟ್‌ನ್ನು ತಮಗೆ ಕಳುಹಿಸುತ್ತೇನೆ. ಇನ್ನು ನಿಮ್ಮ ಗಮನಕ್ಕೆ ಬಂದಿಲ್ಲ, ಇಲ್ಲ ಯಾವ ಅಧಿಕಾರಿಯನ್ನು 14-6-90ಕ್ಕೆ ಟ್ರಾನ್ಸ್‌ಫರ್ ಮಾಡಿ 31-5-90 ಎಂದು ಫಾಲ್ಸ್ ಅಫಿಡವಿಟ್‌ನ್ನು ಚೀಫ್ ಕನ್‌ಸರ್ವೇಟರ್ ಆಫ್ ಫಾರೆಸ್ಟ್ ಅವರು ಮಾಡಿದ್ದಾರೆ, ಅವರಿಗೆ ಪ್ರೊಮೋಷನ್ ಕೊಟ್ಟಿದ್ದೀರಿ. ಇದನ್ನು ತಾವು ನೋಡಬೇಕಾಗುತ್ತದೆ. The tribunal has come the the conclusion that it is*malafide*. ಮತ್ತು ಮಾನ್ಯ ಸಚಿವರು ಇಲ್ಲಿಯೇ ಇದ್ದಾರೆ. ಸನ್ಮಾನ್ಯ ಬಸವಲಿಂಗಪ್ಪನವರು

ಆಗ ಫಾರೆಸ್ಟ್ ಮಂತ್ರಿಗಳಾಗಿದ್ದರು. ಆಗ ಅವರು ಆ ಟ್ರಾನ್ಸ್‌ಫಾರ್ಮರ್‌ಗೆ ಎಫೆಕ್ಟ್ ಮಾಡಿದ್ದಾರೆ. There is a collusion between the Minister and the Officers. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಈ ಜಡ್ಜ್‌ಮೆಂಟ್ ಕಾಪಿಯನ್ನು ಕಳುಹಿಸಿ ಕೊಡುತ್ತಿದ್ದೇನೆ. ನ್ಯಾಯಾಂಗಕ್ಕೆ ಟ್ರಿಬ್ಯೂನಲ್‌ಗೆ ಗೌರವ ಇದೆ, ಇಲ್ಲಿ ಜಡ್ಜ್‌ಮೆಂಟ್ ಕ್ಲಿಯರ್ ಕಟ್ ಇದೆ. ಮಾಲಾಫೈಡ್ಸ್ ಮತ್ತು ಬೋನಾಫೈಡ್ಸ್ ಬಗ್ಗೆ ಹೇಳಿದರೆ ಆಫೀಸರ್ಸ್‌ಗೆ ಬೋನಾಫೈಡ್ಸ್ ಇಲ್ಲ, ಟೋಟಲಿ ಮಾಲಾಫೈಡ್ಸ್ ಇದೆ ಎಂದು ಟ್ರಿಬ್ಯೂನಲ್‌ನಲ್ಲಿ ಡಿಸಿಷನ್‌ನ್ನು ಕೊಟ್ಟಿದ್ದಾರೆ. ಆ ಅಧಿಕಾರಿಗಳಿಗೆ ಪ್ರಮೋಷನ್ ಕೊಟ್ಟಿದ್ದಾರೆ. ಆ ಅಧಿಕಾರಿಯ ಮೇಲೆ ನಾನು ಹೆಚ್ಚಿನ ಆಪಾದನೆಯನ್ನು ಮಾಡಲಿಕ್ಕೆ ಹೋಗುವುದಿಲ್ಲ. 14ಕ್ಕೆ ಟ್ರಾನ್ಸ್‌ಫರ್ ಮಾಡಿ 31ಕ್ಕೆ ಆಗಿದೆ ಎಂದು ಹೇಳಿ ಸುಳ್ಳು ಅಫಿಡವಿಟ್ಟನ್ನು ಮಾಡಿದ್ದಾರೆ. ಅದನ್ನು ಮಾಡಿದ್ದು ತಪ್ಪು.

ಆ ಅಧಿಕಾರಿ ನಾನು ಮಾಡುವುದಿಲ್ಲ ಎಂದು ಹೇಳಬೇಕಾಗಿತ್ತು. ಆದರೆ ಆ ಅಧಿಕಾರಿ ಮಾಡಿದ್ದಾರೆ ಆದುದರಿಂದ ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇಂಥ ಸುಳ್ಳು ಅಫಿಡವಿಟ್ಟನ್ನು ಹಾಕಿದ್ದರಿಂದ ಟ್ರಿಬ್ಯೂನಲ್‌ನಲ್ಲಿ ಸ್ಟ್ರಿಕ್ಚರ್‌ನ್ನು ಪಾಸ್ ಮಾಡಿದರೂ ಸಹಾ ಯಾವ ಕ್ರಮವನ್ನು ಇದುವರೆಗೂ ತೆಗೆದುಕೊಂಡಿಲ್ಲ, ಆ ಸಮಯದಲ್ಲಿಯೇ ಇದ್ದ ಫಾರೆಸ್ಟ್ ಮಿನಿಸ್ಟರ್ ಸನ್ಮಾನ್ಯ ಬಸವಲಿಂಗಪ್ಪನವರು, ಚೀಫ್ ಕನ್‌ಸರ್ವೇಟರ್ ಆಫ್ ಫಾರೆಸ್ಟ್ ಇವರುಗಳು ಸೇರಿ ಟ್ರಾನ್ಸ್‌ಫರ್ ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ನಾನು ತಮ್ಮ ಮುಖೇನ, ಈ ಜಡ್ಜ್‌ಮೆಂಟ್ ಕಾಪಿಯನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡುತ್ತಿದ್ದೇನೆ. ಇದರ ಬಗ್ಗೆ ಪರಿಶೀಲಿಸಬೇಕು. ಪರಿಶೀಲಿಸಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಎಂದು ಹೇಳುತ್ತೇನೆ.

ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನನಗೆ ವಿಶ್ವಾಸ ಇದೆ. ಅವರು ಈ ಜಡ್ಜ್‌ಮೆಂಟ್ ಅನ್ನು ಪರಿಶೀಲನೆ ಮಾಡಿನೋಡಬೇಕು. ಅಸತ್ಯ ಇದ್ದರೆ ಕ್ರಮ ತೆಗೆದುಕೊಳ್ಳಬೇಕು. ನಿಮ್ಮ ಹಿಂದಿನ ಫಾರೆಸ್ಟ್ ಮಿನಿಸ್ಟರ್ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಅವರು ಸಹ ಈ ಮೊಕದ್ದಮೆಗೆ ಪಾರ್ಟಿಯಾಗಿದ್ದಾರೆ. ಆದ್ದರಿಂದ ಅವರ ಮೇಲೂ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ವಿಶ್ವನಾಥ್ (ಕೃಷ್ಣರಾಜನಗರ) : ಮಾನ್ಯ ಉಪಾಧ್ಯಕ್ಷಿಣಿಯವರೆ, ಮುಖ್ಯಮಂತ್ರಿಯವರಾದ ಶ್ರೀ ಎಸ್.ಬಂಗಾರಪ್ಪನವರು ಈ ಸದನದ ಮುಂದೆ ಮಂಡಿಸಿರತಕ್ಕ 1990-91ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಸ್ವಾಗತಿಸುತ್ತಾ ನನ್ನ ಸಲಹೆಯನ್ನು ಪ್ರಸ್ತಾಪ ಮಾಡಲಿಕ್ಕೆ ಇಚ್ಛಿಸುತ್ತೇನೆ. ಮಾನ್ಯ ಬಂಗಾರಪ್ಪನವರ ಸರ್ಕಾರ ಈ ರಾಜ್ಯದ ಶೋಷಿತರ, ದುರ್ಬಲರ, ಹಿಂದುಳಿದವರ ಮತ್ತು ದುಃಖದುಮ್ಮಾನಗಳ, ನೋವುನಲಿವುಗಳನ್ನು ಆಳವಾಗಿ ಅಧ್ಯಯನ ಮಾಡಿ ಅರ್ಥೈಸಿಕೊಂಡು ಈ ಆಯವ್ಯಯ ಪತ್ರವನ್ನು ಮಂಡಿಸಿದ್ದಾರೆ. ಹಿಂದುಳಿದ ವರ್ಗಗಳಿಂದ ಬಂದಂತಹ ಯುವಕನಾಗಿ ಈ ಸಮಾಜಗಳ ನೋವು ನಲಿವುಗಳನ್ನು ಬಲ್ಲವನಾಗಿ ಈ ಆಯವ್ಯಯ ಪತ್ರದಲ್ಲಿ ಹಲವಾರು ಜನಪರ ಕಲ್ಯಾಣ ಕಾರ್ಯಕ್ರಮಗಳನ್ನು ನನಗೆ ಕಂಡು ಸಂತೋಷವಾಗಿದೆ. ಇದರಲ್ಲಿ ಬಹಳ ಆಪ್ಯಾಯಮಾನವಾದಂತಹ ಮತ್ತು ಹಿಡಿಸಿದಂತಹ ಕಾರ್ಯಕ್ರಮವೆಂದರೆ ಹೊಸದಾಗಿ ಸರ್ಕಾರ ಕೊಟ್ಟಿರತಕ್ಕಂಥದ್ದು ವಿಶ್ವಗ್ರಾಮೀಣ ಗುಡಿ ಕೈಗಾರಿಕೆ ಯೋಜನೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಬದುಕು ಮಾಡುತ್ತಿರತಕ್ಕ ಅನುವಂಶಿಕ ವೃತ್ತಿಯನ್ನೇ ಅವಲಂಬಿಸಿ ತಮ್ಮ ಜೀವನವನ್ನು ಮಾಡತಕ್ಕ ಕೆಲವು ಸಮಾಜಗಳು ಇವೆ.

ನಮ್ಮ ಪಾದಗಳ ಸಂರಕ್ಷಣೆಯನ್ನು ಮಾಡತಕ್ಕಂಥ ಪಾದರಕ್ಷೆಯನ್ನು ಹೊಲಿಯತಕ್ಕ ಚಮ್ಮಾರರು, ನಮ್ಮ ಮೈಲಿಗೆ ಬಟ್ಟೆಯನ್ನು ದಿನ ನಿತ್ಯ ಮಡಿ ಮಾಡಿ ತಂದು ಕೊಡತಕ್ಕಂತಹ ಮಡಿವಾಳರು, ದಿನವೂ ನಮಗೆ ಅಂದವಾಗಿ ಮುಖ ಕ್ಷೌರವನ್ನು

ಮಾಡುವಂತಹ ನಯನ ಕ್ಷತ್ರಿಯರು ನಮ್ಮ ಮನೆಗಳಲ್ಲಿ ಮಂಗಳ ಕಾರ್ಯಗಳಲ್ಲಿ ಮಂಗಳ ವಾದ್ಯವನ್ನು ಮಾಡತಕ್ಕ ಸನಾದಿಗಳು ಮತ್ತು ಈ ಸಮಾಜದಲ್ಲಿ ಪ್ರತಿಯೊಂದಕ್ಕೂ ಬೇಕಾದಂತಹ ಬಿಡಿ ಹೂವುಗಳನ್ನು ಕಟ್ಟತಕ್ಕಂತಹ ದೇವಾದಿಗಳು, ಉಣ್ಣೆಯನ್ನು ಮತ್ತು ಕಂಬಳಿಯನ್ನು ಮಾಡತಕ್ಕ ಕುರುಬರು, ಹೀಗೆ ಈ ಸಮಾಜದಲ್ಲಿ ದಿನನಿತ್ಯದ ಸೇವೆಗಳನ್ನು ಮಾಡುತ್ತಾ ಬಂದಿದ್ದಾರಲ್ಲಾ, ಇವರ ಆರ್ಥಿಕ ಉನ್ನತಿಗೋಸ್ಕರವಾಗಿ ಈ "ವಿಶ್ವ ಗ್ರಾಮೀಣ ಗುಡಿ ಕೈಗಾರಿಕೆ ಯೋಜನೆಯನ್ನು" ಹೊಸದಾಗಿ ಈ ಸರ್ಕಾರ ರೂಪು ಮಾಡುತ್ತಾ ಇರತಕ್ಕಂಥದ್ದು ಅದರ ಸಲುವಾಗಿ 10 ಕೋಟಿ ರೂಪಾಯಿಗಳನ್ನು ಈ ವರ್ಷವೇ ಮೂಲ ಬಂಡವಾಳವಾಗಿ ಇಟ್ಟುಕೊಂಡಿರತಕ್ಕದ್ದು ಬಹಳ ಸಂತೋಷವಾದ ವಿಚಾರ. ಆಧುನಿಕ ಯುಗದಲ್ಲಿ ಕುಂಬಾರರು ಮಾಡತಕ್ಕಂಥಹ ಹೆಂಚುಗಳಿಗೆ ಇವತ್ತು ಬೆಲೆ ಇಲ್ಲ, ಒಬ್ಬ ಕುರುಬ ಮಾಡತಕ್ಕ ಕಂಬಳಿಗೆ ಬೆಲೆ ಇಲ್ಲ, ಮತ್ತು ನಮ್ಮ ಸನಾದಿ ಅವನು ಊದತಕ್ಕಂಥಹ ಹಳೆಯ ಓಲಗಕ್ಕೆ ಬೆಲೆಯಿಲ್ಲ. ಆಧುನಿಕ ಯುಗದಲ್ಲಿ ತಾಂತ್ರಿಕವಾಗಿ ನಾವು ಮುಂದುವರಿಯಬೇಕಾಗಿದೆ. ಅದನ್ನು ಮುಂದುವರಿಸಬೇಕಾಗಿದೆ. ಅದನ್ನು ಈ ಗುಡಿ ಕೈಗಾರಿಕೆಯಲ್ಲಿ ಬಹಳ ಆಧುನಿಕವಾಗಿ ಮಾರ್ಪಾಡು ಮಾಡಿ ಕರ್ನಾಟಕ ರಾಜ್ಯದಲ್ಲಿರತಕ್ಕಂಥಹ ಈ ಅನುವಂಶಿಕ ವೃತ್ತಿಯನ್ನು ತಮ್ಮ ಆರ್ಥಿಕ ಬೆಂಬಲಕ್ಕೆ ಇರತಕ್ಕದ್ದನ್ನು ಇನ್ನೂ ಚೆನ್ನಾಗಿ ಮಾಡಬೇಕು ಅನ್ನತಕ್ಕದ್ದನ್ನು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಈ ಹಿಂದುಳಿದ ವರ್ಗಗಳ ಸಲುವಾಗಿ ಈಗ ತಾನೆ ದೇಶಪಾಂಡೆಯವರು ಈ ಆಯವ್ಯಯದಲ್ಲಿ ಹಿಂದುಳಿದವರ ಸಲುವಾಗಿ ಏನೂ ಇಲ್ಲ, ಅಂತ ಹೇಳಿದರು, ಬಹುಶಃ ಅವರು ಹಿಂದುಳಿದ ವರ್ಗಗಳ ಕಾರ್ಯಕ್ರಮ ಬಗ್ಗೆ ಇಲ್ಲಿ ಏನನ್ನು ಕೊಟ್ಟಿದ್ದಾರೆ, ಅದನ್ನು ಓದಿಲ್ಲ, ಅಕ್ಷಯ, ಶುಶ್ರೂತ ವಿಶ್ವಗುಡಿ ಕೈಗಾರಿಕೆ ಯೋಜನೆ, ಆರಾಧನಾ, ಇವೆಲ್ಲಾ ಇದೆ. ಈ ಆರಾಧನಾ ಅಂದರೆ ಹಿಂದುಳಿದ ನಮ್ಮ ದೇವರುಗಳಿಗೆ ದೇವರು ಮನೆ ಅಂದರೆ ಈ ಕಡೆ, ಆ ಕಡೆ, ಎರಡು ಚಪ್ಪಡಿ, ಮೇಲೆ ಒಂದು ಚಪ್ಪಡಿ, ಅದರ ಹತ್ತಿರ ಒಂದು ಬೇವಿನ ಮರ.

ಮಾರಮ್ಮನ ಹಬ್ಬ ಬಂದಾಗ ವರ್ಷಕ್ಕೊಂದು ಸಲ ಎಣ್ಣೆ ಹುಯ್ದು ಪೂಜಿಸಿದರೆ ಆಯಿತು ಅಷ್ಟೆ ಪೂಜೆ, ನಮ್ಮ ದೇವರುಗಳಲ್ಲಿ ಕಾಳಿ, ಕೆಂಕಾಳಿ ಮಾರಮ್ಮ ಎಂದು ಪೂಜಿಸುತ್ತಾರೆ. ಆ ದಿವಸವಾದ ಮೇಲೆ ನಾವು ಮರೆತೇ ಬಿಡುತ್ತೇವೆ. ಇದನ್ನು ತಪ್ಪಿಸುವ ಸಲುವಾಗಿ, ಮಾನ್ಯ ಬಂಗಾರಪ್ಪನವರು ನಮ್ಮ ಈ ದೇವರುಗಳನ್ನು ರಕ್ಷಣೆ ಮಾಡುವ ಸಲುವಾಗಿ, ಮತ್ತು ಹಿಂದುಳಿದವರ ದೇವರುಗಳನ್ನು ರಕ್ಷಣೆ ಮಾಡುವ ಸಲುವಾಗಿ ಆರಾಧನ ಎಂಬ ಒಂದು ಯೋಜನೆಯನ್ನು ತಂದಿರುವುದು ಬಹಳ ಸಂತೋಷಕರವಾದ ವಿಚಾರ. ನಂಬಿಕೆಯೇ ದೇವರು. ಹೌದು. ದೇವರು ಪ್ರತ್ಯಕ್ಷವಾಗಿ ಯಾರಿಗೂ ಏನನ್ನೂ ಕೊಡದೇ ಇದ್ದರೂ ಕೂಡ, ನಮ್ಮ ಮನಸ್ಸಿನ ಸಂತೋಷದ, ಸಮಾಧಾನದ ಸಲುವಾಗಿ ಈ ಯೋಜನೆಯನ್ನು ತಯಾರು ಮಾಡಿದ್ದಾರೆ. ಈ ಯೋಜನೆಗೆ ಇನ್ನು ಹೆಚ್ಚಿನ ಹಣವನ್ನು ಕೊಟ್ಟು ನಮ್ಮ ದೇವರುಗಳನ್ನು ಸಂರಕ್ಷಣೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದವರಲ್ಲಿ ಒತ್ತಾಯ ಮಾಡಬಯಸುತ್ತೇನೆ. ಮತ್ತು ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಇರುವಂಥ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಏನಿದೆ, ಅಧ್ಯಕ್ಷರೆ, 1977ನೇ ಇಸವಿಯಲ್ಲಿ ದೇವರಾಜ ಅರಸುರವರ ಕಾಲದಲ್ಲಿ ನಿರ್ಮಾಣವಾದಂಥ ಈ ಅಭಿವೃದ್ಧಿ ಘಟಕಕ್ಕೆ ಇಲ್ಲಿಯವರೆಗೆ ಕೊಟ್ಟಂಥ ಹಣ ಎಷ್ಟೆಂದರೆ ನಮಗೆ ಒಟ್ಟು 2 ಕೋಟಿ 74 ಲಕ್ಷ ರೂ.ಗಳು. ಆದರೆ ಈ ನಿಗಮಕ್ಕೆ ಈ ವರ್ಷದ ಸಾಲಿನಲ್ಲಿ 4 ಕೋಟಿ ರೂ.ಗಳನ್ನು ಆಯವ್ಯಯದಲ್ಲಿ ಕೊಟ್ಟಿದ್ದಾರೆ. 12-13ವರ್ಷಗಳಿಗೆ ಕೊಟ್ಟಿರುವಂಥ ಹಣಕ್ಕಿಂತ ಈ ವರ್ಷವೊಂದಕ್ಕೆ 4 ಕೋಟಿ ರೂ.ಗಳನ್ನು ನಮ್ಮ ಸರ್ಕಾರ ಒದಗಿಸಿಕೊಟ್ಟಿದೆ. ಈ ಸಮಾಜದ ಜನರಿಗೆ ಅಂದರೆ, ಇಟ್ಟಿಗೆ ಕುಯ್ಯುವವರಿಗೆ, ಗಾರೆ ಕೆಲಸದವರಿಗೆ, ಸೈಕಲ್ ಶಾಪ್ ಮಾಡುವವರಿಗೆ,

ರಿಕ್ಷಾ ಓಡಿಸುವವರಿಗೆ, ಈ ತರಹದ ಕಸುಬನ್ನು ಮಾಡುವವರ ಅನುಕೂಲಕ್ಕಾಗಿ ಸರ್ಕಾರ ಈ ಹಣವನ್ನು ಆಯವ್ಯಯದಲ್ಲಿ ಒದಗಿಸಿಕೊಟ್ಟಿದೆ. ಇದರ ಜೊತೆಗೆ ಸರ್ಕಾರ ತೆಗೆದುಕೊಂಡಿರುವ ಇನ್ನೊಂದು ದಿಟ್ಟವಾದ ಹೆಜ್ಜೆ ಏನೆಂದರೆ ನಮ್ಮ ಅಕ್ಕತಂಗಿಯರಿಗೆ ಅಂದರೆ ನಮ್ಮ ಹೆಣ್ಣು ಮಕ್ಕಳಿಗೆ ಶೇಕಡ 30ರಷ್ಟು ಮೀಸಲಾತಿ ಕೊಡುವಂಥದ್ದು. ಇವತ್ತು ನಮ್ಮ ಸಮಾಜ ಹೇಗಿದೆ ಎಂದರೆ, ನಮ್ಮ ಹೆಣ್ಣು ಮಕ್ಕಳು ಗಂಡನ ಮನೆಯಲ್ಲಿ ಕೆಟ್ಟು ಬಂದಾಗ, ಮದುವೆ ಆಗದೇ ಇದ್ದಾಗ, ಅವರುಗಳು ಈ ಖಾರದ ಪುಡಿ, ಹಪ್ಪಳ, ಸಂಡಿಗೆ ಮಾಡಿದರೆ ಯಾರೂ ತೆಗೆದುಕೊಳ್ಳುವುದಿಲ್ಲ, ನಮ್ಮ ಜಾತಿಯ ದಲಿತರು, ದುರ್ಬಲರು ಮಾಡುವಂಥ ಖಾರದಪುಡಿ, ಹಪ್ಪಳ, ಸಂಡಿಗೆಯನ್ನು ಯಾರೂ ತೆಗೆದುಕೊಳ್ಳುವುದಿಲ್ಲ. ಬೀದಿಯಲ್ಲಿ ವಡೆ ಸುಡೋಣವೆಂದರೆ ಅದನ್ನು ಯಾರೂ ತೆಗೆದುಕೊಳ್ಳುವುದಿಲ್ಲ. ದೊಡ್ಡವರ ಮನೆಯಲ್ಲಿ ಮುಸುರೆ ಕೆಲಸವನ್ನು ಮಾಡೋಣ ಎಂದರೆ, ಅಲ್ಲಿಯೂ ನಮ್ಮನ್ನು ಸೇರಿಸಿಕೊಳ್ಳುವುದಿಲ್ಲ. ಹಾಗಾದರೆ ಜೀವನಕ್ಕೆ ಏನು ಮಾಡುವುದು ಅಧ್ಯಕ್ಷರೇ? ಇವತ್ತು 30ಪರ್ಸೆಂಟ್ ಮೀಸಲಾತಿ ಹೆಣ್ಣು ಮಕ್ಕಳಿಗೆ ಕೊಟ್ಟಿರುವುದು ಬಹಳ ಶ್ಲಾಘನೀಯವಾದುದು. ಆದರೆ ಇದರಲ್ಲಿ ಒಂದು ವಿಚಾರ, ಈ ಮೀಸಲಾತಿಯನ್ನು ಯಾರಿಗೆ ಕೊಡುತ್ತಾರೆ, ಸಂಪೂರ್ಣ ಮಹಿಳೆಯರಿಗೋ? ಅಥವಾ ಇದರಲ್ಲಿ ಮುಂದುವರಿದವರು, ಹಿಂದುಳಿದವರು, ಶೋಷಿತರು ಎಂದು ಕ್ಲಾಸಿಫೈ ಮಾಡಲಾಗಿದೆಯೇ? ಇದನ್ನು ಕ್ಲಾಸಿಫೈ ಮಾಡಿ ರಿಸರ್ವೇಷನ್ ಮಾಡದೇ ಹೋದರೆ, ಈ 30 ಪರ್ಸೆಂಟ್ ರಿಸರ್ವೇಷನ್ ಸೌಲಭ್ಯವನ್ನು ಮುಂದುವರಿದ ಜನಾಂಗದವರೇ ಅನುಭವಿಸಿಕೊಂಡು ಹೋಗುತ್ತಾರೆ.

ಹಾಗೂ ಸರ್ಕಾರ ಯಾವ ಉದ್ದೇಶದಿಂದ ಈ ಯೋಜನೆಯನ್ನು ತಂದಿದೆಯೋ ಅದರ ಸಾಫಲ್ಯತೆಯನ್ನು ಕಾಣಲು ಕಷ್ಟವಾಗುತ್ತದೆ ಎಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ. ಮತ್ತೆ ಈ ಸಲ ಮಹಿಳೆಯರ ಅಭಿವೃದ್ಧಿ ನಿಗಮಕ್ಕೆ ಸುಮಾರು 570 ಲಕ್ಷ ರೂ.ಗಳನ್ನು ಕೊಟ್ಟಿದ್ದಾರೆ. ಇದು ಕೂಡ ಬಹಳ ಸಂತೋಷಕರವಾದ ವಿಚಾರ. ಹೆಣ್ಣು ಮಕ್ಕಳಿಗೆ ಕರಕುಶಲದ ಅಭಿವೃದ್ಧಿಗಾಗಿ ಅಂದರೆ, ಹಸು ಸಾಕುವುದು, ಎಮ್ಮೆ ಸಾಕುವುದು, ಗುಡಿ ಕೈಗಾರಿಕೆಗಳನ್ನು ಮಾಡುವುದು, ಇಂಥದ್ದಕ್ಕೆ, 570 ಲಕ್ಷ ರೂ.ಗಳನ್ನು ಮೂಲ ಬಂಡವಾಳವನ್ನಾಗಿ ಈ ಸಲ ಒದಗಿಸಿಕೊಟ್ಟಿರುವುದು ಬಹಳ ಸಂತೋಷಕರವಾದ ವಿಚಾರ. ಹಿಂದುಳಿದ ವರ್ಗದವರಿಗೆ ಬಹಳಷ್ಟು ಕಾರ್ಯಕ್ರಮಗಳನ್ನು ಈ ಸರ್ಕಾರ ಹಮ್ಮಿಕೊಂಡಿದೆ. ನಮ್ಮ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಚಂದ್ರೇಗೌಡರು ನಿನ್ನೆ ದಿವಸ ಭಾಷಣ ಮಾಡುತ್ತಾ ಹಿಂದುಳಿದ ವರ್ಗಕ್ಕೆ ಸೀಮಿತವಾಗಿ ಮಾತನಾಡಿದ್ದಾರೆ. ಹಿಂದುಳಿದ ವರ್ಗದವರ ಬಗ್ಗೆ ಚುನಾವಣೆ ಕಳಕಳಿ ಎಂದು ಹೇಳಿದ್ದಾರೆ. ಆದರೆ ಅವರಿಗೆ ನಾವು ಹೇಳಬೇಕಾಗುತ್ತದೆ, ಕಾಂಗ್ರೆಸ್ ಸರ್ಕಾರ ಈ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟ ಮೇಲೂ ಆಡಳಿತದಲ್ಲಿ ಹಿಂದುಳಿದವರಿಗೆ, ದಲಿತರಿಗೆ ಮತ್ತು ಶೋಷಿತರಿಗೆ ಸಂಪೂರ್ಣವಾಗಿ ಎಲ್ಲಾ ಪ್ರಾತಿನಿಧ್ಯಗಳನ್ನು ಕೊಡುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಿದೆ ಎಂದು. ಹಿಂದುಳಿದ ವರ್ಗದ ಹರಿಕಾರರಾಗಿದ್ದಂಥ ದೇವರಾಜ ಅರಸರು ತಮ್ಮ ಸರ್ಕಾರದಲ್ಲಿ ರಚನೆ ಮಾಡಿ ಹಿಂದುಳಿದವರಿಗೆ ಬೈಬಲ್ ಆಗಿದ್ದಂತ ಹಾವನೂರ್ ವರದಿಯನ್ನು ಸ್ಕ್ರ್ಯಾಪ್‌ಮಾಡಿ, ವೆಂಕಟಸ್ವಾಮಿ ವರದಿಯನ್ನು ಬುಟ್ಟಿಗೆ ತೊಟ್ಟಿಗೆ ಹಾಕಿದಂಥ ಚಂದ್ರೇಗೌಡರು ಇದ್ದಂಥ ಪಕ್ಷ ಇವೊತ್ತು ಹಿಂದುಳಿದ ವರ್ಗದ ಬಗ್ಗೆ ಮಾತನಾಡಲಿಕ್ಕೆ ಯಾವ ಹಕ್ಕು ಇದೆ ಎಂದು ಕೇಳಬೇಕಾಗಿದೆ.

ಆದ್ದರಿಂದ ಇವೊತ್ತು ಹಿಂದುಳಿದವರ ಪರವಾಗಿ ನೀವು ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡು ಬಂದಿದ್ದೀರಿ. ಹಿಂದುಳಿದ ವರ್ಗಗಳ ಮುಖ್ಯಮಂತ್ರಿಗಳಾದ ಮಾನ್ಯ ಬಂಗಾರಪ್ಪನವರಿಗೆ ಒತ್ತಾಯಿಸುತ್ತೇನೆ. ನಿಮ್ಮ ಅಧಿಕಾರಾವಧಿಯಲ್ಲಿ ಈ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಕಲ್ಯಾಣ ಸಲುವಾಗಿ ಯಾವ ಹೆಗಡೆ ವರದಿ ಇದೆ,

ಇವೊತ್ತು ಪ್ರಸ್ತುತ, ಹೆಗಡೆ ರಸಾಯನ ಇದೆ, ಆ ವರದಿ, ಆ ಮೀಸಲಾತಿಯನ್ನು ಸ್ಕ್ರಾಪ್ ಮಾಡಿ ಚಿನ್ನಪ್ಪರೆಡ್ಡಿ ವರದಿಯನ್ನು ತಾವು ಅನುಷ್ಠಾನಕ್ಕೆ ತರಲೇಬೇಕು ಎನ್ನತಕ್ಕ ಮಾತನ್ನು ಹಿಂದುಳಿದ ವರ್ಗಗಳ ಒಬ್ಬ ಯುವಕನಾಗಿ, ಕಷ್ಟನಿಷ್ಠೂರಗಳನ್ನು ಅನುಭವಿಸಿಕೊಂಡುಬಂದಂಥ ಸಮಾಜದ ಪ್ರತಿನಿಧಿಯಾಗಿ ನಾನು ಅವರನ್ನು ಒತ್ತಾಯ ಮಾಡಿ ಕೇಳುತ್ತಿದ್ದೇನೆ.

ಶ್ರೀ ಬಸವರಾಜ್ ರಾಯರೆಡ್ಡಿ: ನಿಮ್ಮ ಸರ್ಕಾರ ಚಿನ್ನಪ್ಪರೆಡ್ಡಿ ವರದಿಯನ್ನು ಏತಕ್ಕೆ ಜಾರಿಗೆ ತರಲಿಲ್ಲ?

ಶ್ರೀ ಹೆಚ್. ವಿಶ್ವನಾಥ್: ಇನ್ನು ವಸತಿ ಯೋಜನೆ, ಈ ಯೋಜನೆಯಲ್ಲಿ 1983ನೇ ಇಸವಿಯಿಂದ ಈ ತನಕ ಕೂಡ ಹಿಂದುಳಿದವರ ಬಗ್ಗೆ ಹೇಳುವಂಥ ಸರ್ಕಾರ ಬಡವರಿಗೆ ಹಂಚುವ ಸಲುವಾಗಿ ಒಂದೇ ಒಂದು ಎಕರೆ ಭೂಸ್ವಾಧೀನ ಮಾಡಿಲ್ಲ. ಈ ರಾಜ್ಯದಲ್ಲಿ ಭೂಸ್ವಾಧೀನ ಮಾಡಲಿಕ್ಕೆ ಆಗಲಿಲ್ಲ. ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಈ ಯೋಜನೆಯನ್ನು ಅನುಷ್ಠಾನಕ್ಕೆ ತರುವುದಕ್ಕೆ ಶ್ರೀಮತಿ ಇಂದಿರಾಗಾಂಧಿಯವರು, 20 ಅಂಶಗಳ ಕಾರ್ಯಕ್ರಮದಲ್ಲಿ ಮುಖ್ಯ ಅಂಶವಾದುದು ನಿರ್ಗತಿಕರಿಗೆ ಗ್ರಾಮಾಂತರ ಪ್ರದೇಶದಲ್ಲಿ ಯಾರು ಯಾರದೋ ಸೂರಿನಲ್ಲಿ, ನಾಯಿ ನರಿಗಳಂತೆ ವಾಸ ಮಾಡುತ್ತಿದ್ದಂಥವರಿಗೆ ಈಚೆಗೆ ಕರೆದುಕೊಂಡು ಬಂದು ಅವರಿಗೆ ಒಂದು ಗುಡಿಸಲು ಕಟ್ಟಿ, ಒಂದು ನಿವೇಶನ ಕೊಟ್ಟು ಗುಡಿಸಲು ಕೊಟ್ಟು ಹಾಯಾಗಿ ಕಾಲು ಚಾಚಿ ಮಲಗುವುದಕ್ಕೋಸ್ಕರ ತಂದಂಥ ಯೋಜನೆ 1983ನೇ ಇಸವಿಯಿಂದ ಈ ತನಕ ಕೂಡ ಒಂದಲ್ಲ ಒಂದು ಎಕರೆ ಇವರು ಮಾಡಲಿಕ್ಕೆ ಆಗಲಿಲ್ಲ. ಆದರೆ ಈ ಸಾರಿ ಬಂಗಾರಪ್ಪನವರ ಸರ್ಕಾರ ಒಂದು ಲಕ್ಷ ಮನೆ ಕಟ್ಟತಕ್ಕಂಥ ಯೋಜನೆ, ಪ್ರತಿ ತಾಲ್ಲೂಕಿನಲ್ಲಿಯೂ ಕೂಡ ಒಂದು ಸಾವಿರ ಮನೆಗಳನ್ನು ಕಟ್ಟತಕ್ಕಂಥ ಯೋಜನೆಯನ್ನು ಆಯವ್ಯಯದಲ್ಲಿ ರೂಪ ಮಾಡಿರತಕ್ಕಂಥದ್ದು ಮತ್ತು ಅಂಬೇಡ್ಕರ್‌ರವರ ಶತಮಾನೋತ್ಸವ ಅಂಗವಾಗಿ ಸುಮಾರು 30ಕೋಟಿ ರೂಪಾಯಿಗಳ ಯೋಜನೆಗಳನ್ನು ಪ್ರಕಟ ಮಾಡುತ್ತಿರತಕ್ಕಂಥದ್ದು, ಹರಿಜನಗಿರಿಜನರಿಗೆ ಎಲ್ಲಾ ತಾಲ್ಲೂಕುಗಳಲ್ಲೂ ಕೂಡ ನಿವೇಶನ ಮತ್ತು ಸೂರನ್ನು ಕೊಡತಕ್ಕಂಥ ಯೋಜನೆಯನ್ನು ಮಾಡುತ್ತಿರತಕ್ಕಂಥದ್ದು ಬಹಳ ಶ್ಲಾಘನೀಯವಾದ ವಿಚಾರ ಎನ್ನತಕ್ಕ ಮಾತನ್ನು ಹೇಳುತ್ತಾ ಮತ್ತು ಈ ಭೂ ನ್ಯಾಯಮಂಡಲಿಗಳು, ಇವುಗಳ ಮೂಲಕ ಭೂಮಿಯನ್ನು ಪಡೆದುಕೊಂಡಂಥ ಮಾಜಿ ಗೇಣಿದಾರರು ಅವರು ಕೊಡತಕ್ಕಂಥ ಪ್ರೀಮಿಯಮ್ ಹಣವನ್ನು ಸರ್ಕಾರ ವಹಿಸಿಕೊಂಡು ಕಟ್ಟತಕ್ಕಂಥಾದ್ದು ಕೂಡ ಗ್ರಾಮಾಂತರ ಪ್ರದೇಶದ ಬಹಳಷ್ಟು ಜನರಿಗೆ ಅನುಕೂಲವಾಗಿದೆ ಎನ್ನತಕ್ಕ ಮಾತನ್ನು ಹೇಳುತ್ತಾ ಅದರ ಜೊತೆಗೆ ಅಕ್ರಮ ಭೂಮಿಯನ್ನು ಸಕ್ರಮ ಮಾಡತಕ್ಕದ್ದು ಲಕ್ಷಾಂತರ ಎಕರೆ ಇದೆ. ಇವೊತ್ತು ಯಾರೂ ವಿರೋಧಪಕ್ಷದವರು ಇದರ ಬಗ್ಗೆ ಮಾತನಾಡಲಿಕ್ಕೆ ಆಗುವುದಿಲ್ಲ. ಈ ಅಕ್ರಮ ಭೂಮಿಯನ್ನು ಸಕ್ರಮ ಮಾಡತಕ್ಕಂಥ ಸಮಿತಿಗಳಿಗೆ ಆಯಾಯ ತಾಲ್ಲೂಕಿನ ಶಾಸಕರುಗಳನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿ ಯಾರಿಗೆ ಜಮೀನು ತಲುಪಬೇಕಾಗಿತ್ತೋ, ಸಮಾಜದಲ್ಲಿ ಏನೂ ಇಲ್ಲದೇ ಇರತಕ್ಕಂಥ ಜನರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಮಾಡಿರುವುದು ಬಹಳ ಚೆನ್ನಾಗಿದೆ ಎಂದು ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಅಧಿಕಾರಾವಧಿಯಲ್ಲಿ ಬಹಳಷ್ಟು ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ.

ನನ್ನ ಸಲಹೆ ಇಷ್ಟೆ, ತಮ್ಮ ಅಧಿಕಾರಾವಧಿಯಲ್ಲಿ, ಈ ರಾಜ್ಯದ ಆಡಳಿತ ಸುಸೂತ್ರವಾಗಿ ನಡೆಯತಕ್ಕಂಥ ಅಡ್ಮಿನಿಸ್ಟ್ರೇಟೀವ್ ರಿಫಾರಮ್ಸ್ ಸುಧಾರಣೆಯಾಗಬೇಕಾಗಿದೆ. ಆದ್ದರಿಂದ, ನಾನು ಬಂಗಾರಪ್ಪನವರಲ್ಲಿ ಒತ್ತಾಯ ಮಾಡುತ್ತೇನೆ, ನೀವು ಒಂದು ವಾರ ಕಾಲ ಈ ವಿಧಾನಸಭೆಯನ್ನು ಅದರ ಸಲುವಾಗಿ ಕರೆಯಬೇಕಾಗುತ್ತದೆ. ಇವೊತ್ತು

ಇರತಕ್ಕಂಥ ವ್ಯವಸ್ಥೆ ಯಾವುದೋ ಬ್ರಿಟೀಷರ ಕಾಲದ ವ್ಯವಸ್ಥೆ, ಸೆಕ್ರೆಟರಿ, ಡೆಪ್ಯುಟಿ ಸೆಕ್ರೆಟರಿ, ಅಂದರೆ ಸೆಕ್ರೆಟರಿ, ಎಸ್.ಒ. ಕೇಸ್‌ವರ್ಕರ್, ಆಮೇಲೆ ಮಂತ್ರಿಗಳು ಇದು ಅಲ್ಲ. ಆದ್ದರಿಂದ, ತಮ್ಮ ಕಾಲದಲ್ಲಿ ಇದು ಚಿರಂತರವಾಗಿ ಉಳಿಯತಕ್ಕಂಥ ಒಂದು ಕೆಲಸ. ಈ ರಾಜ್ಯದ ಸಾರ್ವಜನಿಕ ಜೀವನದಲ್ಲಿ, ಅವರ ದಿನನಿತ್ಯದ ಕೆಲಸಗಳಲ್ಲಿ ಜನಪರ ಕಾರ್ಯಕ್ರಮಗಳು ತಲುಪಬೇಕಾದರೆ ಮತ್ತು ಅವರು ಸಮಾಧಾನವಾಗಿಯೂ ಕೂಡ ಶ್ರೀಸಾಮಾನ್ಯನಾಗಬೇಕಾದರೆ, ಯಾವುದೋ ಓಬೀರಾಯನ ಕಾಲ ಈ ಆಡಳಿತ ವ್ಯವಸ್ಥೆ ಹೋಗಿ, ಈ ಅಡ್ಮಿನಿಸ್ಟ್ರೇಟೀವ್ ರಿಫಾರಮ್ಸ್ ಹಿಂದೆ ಏನು ಕೊಟ್ಟಿದ್ದರು ಆ ಧೂಳು ಕೊಡವಿ, ಈ ಸುಧಾರಣೆ ಸಮಿತಿ ಹಿಂದೆ ಕೊಟ್ಟಂಥಾದ್ದನ್ನು ಪರಿಶೀಲನೆ ಮಾಡಿ, ಇದಕ್ಕಾಗಿ ಚರ್ಚಿಸಲು ಒಂದು ವಾರಗಳ ಕಾಲ ವಿಧಾನಸಭೆಯನ್ನು ಕರೆದು ಆಮೂಲಾಗ್ರವಾಗಿ ಅದರ ಬಗ್ಗೆ ಚರ್ಚಿಸಿ ಈ ಆಡಳಿತಕ್ಕೆ ಒಂದು ಸುಧಾರಣೆಯನ್ನು ತರಬೇಕು ಎನ್ನತಕ್ಕ ಒತ್ತಾಯವನ್ನು ನಾನು ಒತ್ತಾಯಪೂರ್ವಕವಾಗಿ ಆಗ್ರಹಿಸುತ್ತಾ, ತಾವು ಇಷ್ಟು ಹೊತ್ತು ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಾಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ: ಮಾನ್ಯ ಉಪಾಧ್ಯಕ್ಷಿಣಿಯವರೆ, ಇವತ್ತಿನ ಕಾರ್ಯಕ್ರಮ ಪಟ್ಟಿಯಲ್ಲಿ ಅರ್ಧ ಗಂಟೆ ಕಾಲದ ಚರ್ಚೆ ಇತ್ತು...

ಉಪಾಧ್ಯಕ್ಷಿಣಿಯವರು: 2ಗಂಟೆಗೆ ಚರ್ಚೆಯನ್ನು ಮುಗಿಸಿ ಅನಂತರ ತೆಗೆದುಕೊಳ್ಳೋಣ.

+ ಶ್ರೀ ಗೋಪಿನಾಥ್ ಆರ್. ಸಾಂಡ್ರ (ಹುಬ್ಬಳ್ಳಿ ಗ್ರಾಮಾಂತರ): ಮಾನ್ಯ ಉಪಾಧ್ಯಕ್ಷಿಣಿಯವರೆ, ಸಮಾಜವಾದಿ, ಜನಪರವಾದಿ, ಹಿಂದುಳಿದ ಶೋಷಿತ ಜನರಿಗೆ ರಕ್ಷಣೆಯನ್ನು ಕೊಡತಕ್ಕ ಕಂಕಣಬದ್ಧರಾದ ಮಾನ್ಯ ಮುಖ್ಯ ಮಂತ್ರಿಗಳು ಇವತ್ತಿನದಿವಸ ನಮ್ಮ ಮುಂದೆ ಆದರ್ಶವಾದ, ಬಹಳ ಜನರಿಗೆ ಪ್ರಿಯವಾಗತಕ್ಕಂಥ ಮುಂಗಡಪತ್ರವನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ನಾನು ನನ್ನ ಮತದಾರ ಕ್ಷೇತ್ರದ ಜನತೆ, ಕನ್ನಡಿಗರಷ್ಟೇ ಅಲ್ಲದೆ ಬಹುತೇಕ ಜನತೆ ಇದನ್ನು ಸ್ವಾಗತಿಸದೇ ಇರಲಾರದು. ನಾನು ಇದನ್ನು ಅತ್ಯಂತ ಮನಃ ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಇದು ಪ್ರಗತಿಪರವಾದುದು, ನ್ಯಾಯಯುತವಾದುದು ಮತ್ತು ಬಹಳ ಜನರಿಗೆ ಉಪಯೋಗವಾಗುವಂಥ ಮುಂಗಡಪತ್ರ ಎಂದು ಹೇಳಿದರೆ ತಪ್ಪಾಗಲಾರದು. ಶ್ರೀಮಾನ್ ಬಂಗಾರಪ್ಪನವರು ಮಾನ್ಯ ರಾಜ್ಯಪಾಲರ ಭಾಷಣದಲ್ಲಿರತಕ್ಕ ಅಂಶಗಳನ್ನು ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿರತಕ್ಕ ಅನೇಕ ಅಂಶಗಳನ್ನೂ ಗಣನೆಗೆ ತೆಗೆದುಕೊಂಡು ಈ ಮುಂಗಡಪತ್ರವನ್ನು ಮಂಡಿಸಿದ್ದಕ್ಕೆ ನಾನು ಅತ್ಯಂತ ಅಭಿಮಾನದಿಂದ ಇವರನ್ನು ಶ್ಲಾಘನೆ ಮಾಡುತ್ತೇನೆ. ಸರ್ವೇ ಜನೋ ಸುಖಿನೋ ಭವಂತು ಎನ್ನತಕ್ಕ ಮಾತನ್ನು ಈ ಮುಂಗಡ ಪತ್ರದಲ್ಲಿ ಹೇಳಿದ್ದಾರೆಂದರೆ ತಪ್ಪಾಗಲಿಕ್ಕಿಲ್ಲ. ಕುಡಿಯುವ ನೀರು, ವಸತಿಕಾರ್ಯ, ರೈತರ, ಕೃಷಿಕಾರ್ಮಿಕರ, ಮಕ್ಕಳ, ಮಹಿಳೆಯರ, ನಿರುದ್ಯೋಗಿಗಳ, ದಿನಗೂಲಿಗಳ, ಸ್ಟೈಪೆಂಡರಿಗಳ, ಪೆನ್‌ಷನ್‌ದಾರರ, ಇವರೆಲ್ಲರ ಬಗ್ಗೆ ವಿಶೇಷ ಆಸಕ್ತಿಯನ್ನು ವಹಿಸಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ ಇದನ್ನು ಜಾರಿಗೆ ತರಲು ಕಂಕಣಬದ್ಧರಾಗಿದ್ದಾರೆನ್ನತಕ್ಕ ಮಾತನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದಾಗ ಹಿಂದಿನ ಸರ್ಕಾರ ಸರ್ಕಾರೀ ನೌಕರರಿಗೆ ಪಗಾರ್ ಕೊಡುವುದಕ್ಕೂ ಸಾಧ್ಯವಾಗದ ಪರಿಸ್ಥಿತಿಯಲ್ಲಿದ್ದಾಗ, ಕೋಮು ಗಲಭೆಗಳು ನಡೆಯುತ್ತಿರುವಾಗ ನಮ್ಮ ಮಾನ್ಯ ಬಂಗಾರಪ್ಪನವರು ಅಧಿಕಾರಕ್ಕೆ ಬಂದಿದ್ದಾರೆ.

ಇವರು ಬಂದ ತಕ್ಷಣ ಕೋಮುವಾರು ಗಲಭೆಗಳನ್ನು ನಿಲ್ಲಿಸಿ ಅಲ್ಲಿ ಸಂಕಟವಾದವರಿಗೆ ಯೋಗ್ಯ ಮತ್ತು ಸಕಾಲಿಕವಾದ ಪರಿಹಾರವನ್ನು ಒದಗಿಸಿದ್ದಾರೆ. ಇದು ಸ್ತುತ್ಯ ಕಾರ್ಯವೆಂದು ನಾನು ಹೇಳಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷಿಣಿಯವರೆ, ಈಗ ಮಾನ್ಯ ಮುಖ್ಯಮಂತ್ರಿಗಳು ಹೋದರೆ ಹೇಗೆ?

(ಗೊಂದಲ)

ಉಪಾಧ್ಯಕ್ಷಿಣಿಯವರು: ಬೇರೆ ಮಂತ್ರಿಗಳಿದ್ದಾರೆ.

ಶ್ರೀ ಗೋಪಿನಾಥ್ ಆರ್. ಸಾಂಡ್ರ : ಹರಿಜನ, ಗಿರಿಜನ, ಹಾಗೂ ಶೋಷಿತ ಹಿಂದುಳಿದ ವರ್ಗಗಳ ಬಗ್ಗೆ ಚಿಂತಿಸಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರಾದ ಸಾಂಡ್ರರವರು ಈ ಸದನಕ್ಕೆ ಬಹಳ ಹಿರಿಯ ಸದಸ್ಯರು. ಕಳೆದ 20 ವರ್ಷಗಳಿಂದ ಈ ಸದನದ ಸದಸ್ಯರಾಗಿದ್ದಾರೆ. ಈಗ ತಾನೇ ಹೇಳಿದರು ಹಿಂದಿನ ಸರ್ಕಾರ ಅಧಿಕಾರದಲ್ಲಿದ್ದಾಗ ಸರ್ಕಾರಿ ನೌಕರರಿಗೆ ಸಂಬಳ ಕೊಟ್ಟಿರಲಿಲ್ಲ ಎಂದು ಯಾವ ತಿಂಗಳು ಕೊಟ್ಟಿರಲಿಲ್ಲ ಎಂಬುದನ್ನು ಹೇಳಬೇಕು.

(ಗೊಂದಲ)

ಶ್ರೀ ಗೋಪಿನಾಥ ಆರ್. ಸಾಂಡ್ರ : ನೀವು ಸರ್ಕಾರಿ ನೌಕರರನ್ನು ಯಾರನ್ನೇ ಕೇಳಿದರೂ ಕೂಡ ಹೇಳುತ್ತಾರೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಯಾವ ತಿಂಗಳಲ್ಲಿ ಎಂಬುದನ್ನು ಹೇಳಬೇಕು. ಈ ರೀತಿ ವೇಗ್ ಆಗಿ ಹೇಳುವುದು ಸರಿಯಲ್ಲ.....

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಸದಸ್ಯರು ದಯವಿಟ್ಟು ಸ್ವಲ್ಪ ಈಲ್ಡ್ ಆಗಿ. ತಾವು ಹೇಳಿಬಿಟ್ಟಿರೆ ಯಾರೋ ಸರ್ಕಾರಿ ನೌಕರರು ಹೇಳಿಬಿಟ್ಟರು ನಮಗೆ ಹಣವನ್ನು, ಸಂಬಳವನ್ನು ಕೊಡಲಿಕ್ಕೆ ಹಿಂದಿನ ಸರ್ಕಾರದಲ್ಲಿ ಹಣವಿಲ್ಲವೆಂದು. ನಾನು ಕೇಳುವುದು ಏನೆಂದರೆ ಸ್ಪೆಸಿಫಿಕ್ ಆಗಿ ತಮ್ಮ ಹತ್ತಿರ ವಿವರ ಇದ್ದರೆ ಹೇಳಿ ಈಗ ನಾನೂ ಕೂಡ ಹೇಳಬಹುದಲ್ಲ, ಈಗ ಸರ್ಕಾರಿ ನೌಕರರು ಏನು ಹೇಳುತ್ತಿದ್ದಾರೆಂದರೆ ನಿಮ್ಮ ಸರ್ಕಾರ ಇದ್ದಾಗ ಬಹಳ ಚೆನ್ನಾಗಿತ್ತು. ಇವಾಗ ಕೆಟ್ಟಿದೆ, ನಮಗೆ ಜಾಗಾನು ಸಿಗುತ್ತಿಲ್ಲವೆಂದು ಹೇಳುತ್ತಿದ್ದಾರೆಂದು. ಅದಕ್ಕೆ ಸ್ಪೆಸಿಫಿಕ್ ಆಗಿ ಹೇಳಿ. ಯಾವ ತಿಂಗಳಲ್ಲಿ ಹೆಗಡೆಯವರು, ಬೊಮ್ಮಾಯಿಯವರು ಇದ್ದಾಗ ಸಂಬಳ ನಿಲ್ಲಿಸಿದ್ದರು ಎಂದು. ಸುಮ್ಮಸುಮ್ಮನೆ ಸಂಬಳವನ್ನು ಕೊಟ್ಟಿಲ್ಲವೆಂದು ಹೇಳುವುದು ಸರಿಯಲ್ಲ. ಮಾನ್ಯ ಗೋಪಿನಾಥ್ ಸಾಂಡ್ರರವರು ಬೇಜವಾಬ್ದಾರಿಯಿಂದ ಹೇಳುತ್ತಿದ್ದಾರೆ. ಈ ರೀತಿ ಮಾತನಾಡುವುದು ಸರಿಯಲ್ಲ.

(ಗೊಂದಲ)

ಯಾವ ತಿಂಗಳಲ್ಲಿ ಸಂಬಳವನ್ನು ಕೊಟ್ಟಿಲ್ಲವೆನ್ನುವುದನ್ನು ಮಾನ್ಯ ಸದಸ್ಯರು ಹೇಳಬೇಕು. ಮಾತನಾಡುವಾಗ ಜವಾಬ್ದಾರಿಯಿಂದ ಮಾತನಾಡಬೇಕು. ನೀವು ಹಳ್ಳಿಗಳಿಗೆ ಹೋಗುತ್ತಿದ್ದರೆ ಗೊತ್ತಾಗುತ್ತಿತ್ತು.

(ಗೊಂದಲ)

ಉಪಾಧ್ಯಕ್ಷಣಿಯವರು: ಮಾನ್ಯ ಗೋಪಿನಾಥ್ ಸಾಂಡ್ರರವರೇ ತಾವು ತಮ್ಮ ಭಾಷಣವನ್ನು ಮುಂದುವರಿಸಿ.

ಶ್ರೀ ಬಿ.ಹೆಚ್. ಬನ್ನಿಕೋಡ್: ಇದು ಆಧಾರವಿಲ್ಲದ ಮಾತು. ಜವಾಬ್ದಾರಿಯುತ ವಾದ ಮಾತಲ್ಲ.

ಶ್ರೀ ಗೋಪಿನಾಥ್ ಆರ್. ಸಾಂಡ್ರ : ಜವಾಬ್ದಾರಿಯನ್ನು ಹೊತ್ತುಕೊಂಡೆ ಜವಾಬ್ದಾರಿಯುತವಾಗಿ ನಾವು ಮಾತನಾಡುತ್ತಿರುವುದು.

(ಗೊಂದಲ)

ಸತ್ಯವಾದುದನ್ನು ಹೇಳಿದರೆ ನಿಮಗೇತಕ್ಕೆ ಇಷ್ಟು ಸಿಟ್ಟು ಬರುತ್ತದೆ? ದಯವಿಟ್ಟು ನನಗೆ ಸ್ವಲ್ಪ ಅವಕಾಶವನ್ನು ಕೊಡಿ. ಟೈಮ್ ಕೊಟ್ಟಿದ್ದಾರೆ. ನಾನು ವಿಚಾರಗಳನ್ನು ಹೇಳುವುದಕ್ಕೆ ಅವಕಾಶವನ್ನು ಕೊಡಿ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಈ ರೀತಿ ಮಧ್ಯೆಮಧ್ಯೆ ಹೇಳುತ್ತಿದ್ದರೆ ನಾನು ಹೇಗೆ ಮಾತನಾಡುವುದು.

ನಮ್ಮ ರಾಜ್ಯದಲ್ಲಿ 100 ಹಳ್ಳಿಗಳಲ್ಲಿ ಬರಗಾಲವಿದೆ. ಅಲ್ಲಿ ಜನರು ಅನೇಕ ಕಷ್ಟನಷ್ಟಗಳನ್ನು ಪಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈ 100 ಹಳ್ಳಿಗಳಲ್ಲಿ ಬರಗಾಲ ಇದ್ದಾಗ ನಮ್ಮ ಸರ್ಕಾರದ ಮುಖ್ಯಮಂತ್ರಿಗಳಾದ ಬಂಗಾರಪ್ಪನವರು ಈ ಬರಗಾಲವನ್ನು ಎದುರಿಸುವುದಕ್ಕೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಈ ಕಾರ್ಯಕ್ರಮದ ಒಂದು ಉದಾಹರಣೆಯನ್ನು ಹೇಳುತ್ತೇನೆ. ಕುಡಿಯುವ ನೀರಿಗಾಗಿ ಬೇಕಾದಷ್ಟು ಹಣವನ್ನು ಒದಗಿಸಿದ್ದಾರೆಂದು ನಾನು ಧೈರ್ಯವಾಗಿ ಹೇಳುತ್ತಿದ್ದೇನೆ. ಈ ಕಾರ್ಯಕ್ರಮವನ್ನು ಹಾಕಿಕೊಂಡು ಬೇಕಾದಷ್ಟು ಹಣವನ್ನು ಒದಗಿಸಲು ಆತ್ಮ ವಿಶ್ವಾಸದಿಂದ ಧೈರ್ಯ ಕೊಟ್ಟಿದ್ದಾರೆ. ಇವತ್ತು ಇಷ್ಟೆಲ್ಲ ನಮಗೆ ಹಣವನ್ನು ಕೊಟ್ಟಿದ್ದರೂ ನನ್ನ ಕ್ಷೇತ್ರದಲ್ಲಿ ನಮ್ಮ ಉತ್ತರ ಕರ್ನಾಟಕ ಜಿಲ್ಲೆಯಲ್ಲಿ ಕೂಡ ಈ ಕುಡಿಯುವ ನೀರಿನ ಬರವನ್ನು ಹೊಡೆದೋಡಿಸುವುದಕ್ಕೆ ಬಹಳಷ್ಟು ಪ್ರಯತ್ನ ಮಾಡಿದ್ದೇವೆನ್ನುವ ಮಾತನ್ನು ಹೇಳುತ್ತಿದ್ದೇನೆ.

(ಗೊಂದಲ)

ಮಾನ್ಯ ಬಂಗಾರಪ್ಪನವರು ಇಟ್ಟಿರತಕ್ಕ ಮುಂಗಡ ಪತ್ರದಲ್ಲಿ ಅನೇಕ ಉತ್ತಮವಾದ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಅದರಲ್ಲೂ ರೈತರಿಗಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಅವನ್ನು ಒಂದೊಂದಾಗಿ ಹೇಳಬಯಸುತ್ತೇನೆ. ಬಹುಶಃ ಅವರು ಮುಂಗಡ ಪತ್ರವನ್ನು ಓದಿರಲಿಕ್ಕಿಲ್ಲವೆಂದು ಕಾಣುತ್ತದೆ. "ಓದಿದ್ದರೂ ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು ಸಿಕ್ಕಿದ ಹಾಗೆ" ಮಾತನಾಡುತ್ತಾರೆ. ದಯಮಾಡಿ ನಾನು ಮಾಡುವಾಗ ಮಧ್ಯೆ ಅವರು ಮಾತನಾಡದೆ ಇರಲಿ ಮತ್ತು ನನ್ನ ವಿಚಾರಗಳನ್ನು ಹೇಳುವುದಕ್ಕೆ ಅವಕಾಶ ಕೊಡಲಿ ಎಂದು ಕೇಳಿಕೊಳ್ಳುತ್ತೇನೆ. ರೈತರ ಬಗ್ಗೆ ಹಾಕಿಕೊಂಡಿರತಕ್ಕ ಕಾರ್ಯಕ್ರಮಗಳು ಎಂದರೆ, ಹತ್ತು ಎಕರೆಗಳಿಗಿಂತ ಕಡಿಮೆ ಭೂಮಿ ಹೊಂದಿರುವ ಮಾಜಿ ಗೇಣಿದಾರರು ಸಂದಾಯ ಮಾಡಬೇಕಾದ ಕಂತನ್ನು ಮಾಫಿ ಮಾಡಲಾಗಿದೆ. ಸಣ್ಣ ಹಿಡುವಳಿದಾರರ ಹಿತದೃಷ್ಟಿಯಿಂದ ಫ್ರಾಗ್‌ಮೆಂಟೇಷನ್ ಆಕ್ಟನ್ನು ರದ್ದು ಮಾಡಲಾಗಿದೆ. ಕೃಷಿ ಪಾಸ್ ಪುಸ್ತಕಗಳನ್ನು ನೀಡಲೂ ನಿರ್ಧರಿಸಿದೆ.

ಈ ಕೃಷಿ ಪಾಸ್ ಬುಕ್ ಇದ್ದರೆ ರೈತರು ಅಲ್ಲಿ ಇಲ್ಲಿ ಓಡಾಡುವ ಪ್ರಸಂಗ ಬರುವುದಿಲ್ಲ. ಸಾಲ ತೆಗೆದುಕೊಳ್ಳುವುದಕ್ಕೆ, ಬೀಜ ತೆಗೆದುಕೊಳ್ಳುವುದಕ್ಕೆ ಮತ್ತೊಂದಕ್ಕೆ ಇದು ಅನುಕೂಲವಾಗಿದೆ. ಪಾಸ್ ಪುಸ್ತಕವನ್ನು ತೋರಿಸಿದರೆ ಅವರಿಗೆ ನ್ಯಾಯವಾಗಿ ನೇರವಾಗಿ ಸಲ್ಲಬೇಕಾದ ಸೌಲಭ್ಯಗಳು ಸಲ್ಲತಕ್ಕ ವ್ಯವಸ್ಥೆಯನ್ನು ಅದರ ಮೂಲಕ ಮಾಡಲಾಗಿದೆ. ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸಿದ್ದಾರೆ. ರೈತರು ಪಂಪ್‌ಸೆಟ್ಟುಗಳನ್ನು ಕೇಳಿದಾಗ ಹೆಚ್ಚು ಹೆಚ್ಚು ಪಂಪುಸೆಟ್ಟುಗಳನ್ನು ಕೊಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದಾರೆ. ನೀರಾವರಿ ವಿದ್ಯುತ್ ಶುಲ್ಕವನ್ನು 5 ಹೆಚ್.ಪಿ. ಪಂಪುಸೆಟ್ಟುಗಳಿಗೆ ವಿದ್ಯುತ್ ಶುಲ್ಕ 90 ರೂಪಾಯಿಗಳಿದ್ದುದನ್ನು 50 ರೂಪಾಯಿಗಳಿಗೆ ಇಳಿಸಿದ್ದಾರೆ. 10 ಹೆಚ್.ಪಿ.ವರೆಗಿನ ಪಂಪುಸೆಟ್ಟುಗಳಿಗೆ 130 ರೂಪಾಯಿ ಇದ್ದುದನ್ನು 60 ರೂಪಾಯಿಗಳಿಗೆ ಇಳಿಸಿದ್ದಾರೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ 16 ಕೋಟಿ ರೂಪಾಯಿ ಹೊರೆಯಾಗಿದೆ. ಹತ್ತು

ಸಾವಿರ ರೂಪಾಯಿ ಕೃಷಿ ಸಾಲ ಮನ್ನಾ ಮಾಡುವ ನಿರ್ಣಯವನ್ನು ಕಾರ್ಯರೂಪಕ್ಕೆ ತರುವ ತೀರ್ಮಾನ ಮಾಡಿದ್ದಾರೆ. ರೈತರಿಗೆ ಸಕಾಲಕ್ಕೆ ಬೀಜ, ಗೊಬ್ಬರ ಒದಗಿಸುವ ಏರ್ಪಾಡು ಮಾಡಿದ್ದಾರೆ. ಇದೆಲ್ಲಾ ರೈತರಿಗಾಗಿ ಮಾಡಿರತಕ್ಕದ್ದು. ಮಾನ್ಯ ವಿರೋಧ ಪಕ್ಷದ ಸದಸ್ಯರು ರೈತರಿಗಾಗಿ ಏನೂ ಮಾಡಿಲ್ಲವೆಂದು ಹೇಳುತ್ತಾರೆ.

ಹಾಗಾದರೆ ಪಟ್ಟಣದವರಿಗೆ ಮಾಡಿದ್ದಾರೆಂದು ತಿಳಿದುಕೊಳ್ಳಬೇಕೆ? ಇನ್ನೂ ಹೊಸ ಹೊಸ ಯೋಜನೆಗಳನ್ನು ರೂಪಿಸಿ ಬಡ ಜನರಿಗೆ ಅನುಕೂಲವಾಗುವಂತಹ ಅನೇಕ ಯೋಜನೆಗಳನ್ನು ಈ ಮುಂಗಡ ಪತ್ರದಲ್ಲಿ ಹೇಳಿದ್ದಾರೆ. ಉದಾಹರಣೆಗೆ, ಅಕ್ಷಯ ಯೋಜನೆ, ಮಕ್ಕಳು ನಮ್ಮ ದೇಶದ ಸಂಪತ್ತು, ನಮ್ಮ ನಾಡಿನ ಸಂಪತ್ತು. ಅವರಿಗೆ ಯೋಗ್ಯ ಶಿಕ್ಷಣ ಕೊಡುವುದು, ಅವರ ಆರೋಗ್ಯ ಕಾಪಾಡುವುದು ನಮ್ಮ ಕರ್ತವ್ಯ. ಅದನ್ನು ತಿಳಿದುಕೊಂಡು ನಮ್ಮ ಸರ್ಕಾರದವರು ಅಕ್ಷಯ ಯೋಜನೆ ಎಂದು ಮಾಡಿದ್ದಾರೆ. ಇವತ್ತಿನ ದಿವಸ ನೂರಕ್ಕೆ 70ರಷ್ಟು ಮಕ್ಕಳು ಶಾಲೆಗೆ ಹೋಗುವುದಿಲ್ಲ. ಕಾರಣ, ಬಡತನ, ಹೊಟ್ಟೆಪಾಡಿಗಾಗಿ ದುಡಿಮೆ ಮಾಡಬೇಕಾಗುತ್ತದೆ. ಆದ್ದರಿಂದ ಈ ರೀತಿ ಶಾಲೆಗೆ ಹೋಗದಿರುವ ಪದ್ಧತಿಯನ್ನು ತೆಗೆದುಹಾಕಲು ಸರ್ಕಾರ ಅಕ್ಷಯ ಯೋಜನೆಯನ್ನು ಮಾಡಿದೆ. ಅಲ್ಲದೆ ಅದಕ್ಕಾಗಿ 20 ಕೋಟಿ ರೂಪಾಯಿಗಳನ್ನು ಪ್ರಾವಿಷನ್ ಮಾಡಿದೆ.

ಇನ್ನೂ ಹೆಚ್ಚು ಮಾಡಲಿಕ್ಕೆ ಬಂಗಾರಪ್ಪನವರು ಹಿಂದುಮುಂದು ನೋಡುವುದಿಲ್ಲ. ಇದು ಸಾಧನೆ ಅಲ್ಲವೇ? ಎರಡನೆಯದಾಗಿ ಸೋಂಕಿನಿಂದ ರಕ್ಷಣೆ ಯೋಜನೆ ಬಗ್ಗೆ ಹೇಳುವುದಾದರೆ, ಆರು ತಿಂಗಳಿನಿಂದ 3 ವರ್ಷದೊಳಗಿನ ಮಕ್ಕಳು ಸಾಯುತ್ತಿವೆ. ಅವರಿಗೆ ಯೋಗ್ಯವಾದ ಔಷದೋಪಚಾರ ಮಾಡಬೇಕೆಂದು ಮಾಡಿದ್ದಾರೆ.

ಇದು ಯಶಸ್ವಿಯಾಗಬೇಕಾದರೆ ನಾನು ಒಂದು ಸಲಹೆಯನ್ನು ತಮ್ಮ ಮೂಲಕ ಸರ್ಕಾರಕ್ಕೆ ಮಾಡಬಯಸುತ್ತೇನೆ. ಮೊಬೈಲ್ ಹಾಸ್ಪಿಟಲ್ ಮೂಲಕ ಚುರುಕಿನಿಂದ ಕೆಲಸ ಮಾಡಬಹುದು. ಶುಶ್ರೂಷೆ ಬಗ್ಗೆ ಹೇಳುವುದಾದರೆ, 6 ತಿಂಗಳಿಗೆ ಒಂದು ಸಾರಿ ಪ್ರತಿಯೊಬ್ಬ ನಾಗರೀಕರಿಗೆ ಹೆಲ್ತ್ ಚೆಕ್ ಅಪ್ ಮಾಡುವ ವ್ಯವಸ್ಥೆ ಮಾಡಿದ್ದಾರೆ. ಇದಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ಈಗಾಗಲೇ ಬಜೆಟ್ಟಿನಲ್ಲಿ ಪ್ರಾವಿಷನ್ ಮಾಡಲಾಗಿದೆ. ವಿರೋಧ ಪಕ್ಷದವರು ಅನ್ನಬಹುದು, ಒಂದು ಕೋಟಿ ರೂಪಾಯಿಗಳಲ್ಲಿ 4 ಕೋಟಿ ಜನರಿಗೆ ಹೇಗೆ ಚೆಕ್‌ಅಪ್ ಮಾಡುತ್ತೀರಿ ಎಂದು. ಇದಕ್ಕೆ ಬೇರೆ ಬೇರೆ ವಿಧಾನಗಳನ್ನು ಅನುಸರಿಸಿ, ರೋಟರಿ ಕ್ಲಬ್‌ನಂಥ ಸೇವಾ ಸಂಘದವರ ಸಹಕಾರ ಪಡೆದು ಈ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ. ಇದು ಬಹಳ ಸೂಕ್ತವಾದ ಕಾರ್ಯಕ್ರಮ. ಇದನ್ನು ಯಾರೂ ವಿರೋಧಿಸುವಂತಹ ಅಥವಾ ಇದರ ಬಗ್ಗೆ ತಪ್ಪು ಕಲ್ಪನೆ ಮಾಡುವಂತಹ ಅವಕಾಶ ಇರುವುದಿಲ್ಲ.

ಇನ್ನು ಎಣ್ಣೆ ಬೀಜಗಳು: ನಮ್ಮ ರಾಜ್ಯದೊಳಗೆ ಹೆಚ್ಚು ಎಣ್ಣೆ ಬೀಜಗಳನ್ನು ಬೆಳೆಯಬೇಕು. ಇದಕ್ಕೆ ಹೆಚ್ಚಿನ ಸವಲತ್ತು ಸೌಕರ್ಯಗಳನ್ನು ಕೊಡಬೇಕೆಂದು ನಮ್ಮ ಸರ್ಕಾರದವರು ಹೊರಟಿದ್ದಾರೆ. 15ಲಕ್ಷ ಟನ್ ಎಣ್ಣೆ ಬೀಜವನ್ನು ನಾವು ಬೆಳೆಯಬೇಕು. ಅದರ ಸಲುವಾಗಿ ಟೆಕ್ನಾಲಜಿ ಮೆಷಿನರಿ ಎಂದು ಮಾಡಿ ನಾಲ್ಕು ವಿಭಾಗಗಳನ್ನು ಮಾಡಿ ಅದರ ಮೂಲಕ ನಮ್ಮ ರೈತರಿಗೆ ಸಹಾಯ ಮಾಡಬೇಕು, ಅವರಿಗೆ ಅಡ್ವೈಸ್ ಕೊಡಬೇಕು ಎನ್ನುವ ಕಾರ್ಯಕ್ರಮ ಅತ್ಯಂತ ಸೂಕ್ತವಾದಂಥ.......

ಶ್ರೀ ಬಸವರಾಜ ರಾಯರೆಡ್ಡಿ: ಇದು ಹೊಸದಾಗಿ ಮಾಡಿದಂಥ ಕಾರ್ಯಕ್ರಮ ಏನಲ್ಲ.

ಶ್ರೀ ಗೋಪಿನಾಥ್ ಆರ್. ಸಾಂಡ್ರ: ದಯಮಾಡಿ ಮಾತನಾಡಬೇಡಿ ನೀವು. ನನಗೆ ಮಾತನಾಡುವುದಕ್ಕೆ ಅಧ್ಯಕ್ಷಿಣಿಯವರು ಅವಕಾಶ ಕೊಟ್ಟಿದ್ದಾರೆ. ಆ ಅವಕಾಶವನ್ನು

ಪೂರ್ತಿಯಾಗಿ ಬಳಸಿಕೊಳ್ಳುವುದಕ್ಕೆ ನನಗೆ ಅವಕಾಶ ಕೊಡಿ. ನೀವು ಹೇಳುವ ಅವಶ್ಯಕತೆ ಇಲ್ಲ. ನನಗೆ ಮಾತನಾಡುವುದಕ್ಕೆ ಅವರು ಅವಕಾಶ ಕೊಟ್ಟಿದ್ದಾರೆ. ನನಗೆ ಟೈಮಾಗುತ್ತದೆ.

ಉಪಾಧ್ಯಕ್ಷಣಿಯವರು : ತಾವು ಮುಂದುವರೆಸಿ.

ಶ್ರೀ ಗೋಪಿನಾಥ್ ಆರ್. ಸಾಂಡ್ರ : ಇನ್ನು ಕ್ಷೀರಧಾರೆ, ಹಾಲು ಉತ್ಪಾದನೆ ಹೆಚ್ಚು ಮಾಡಬೇಕು, ಕೃತಕ ಗರ್ಭಧಾರಣೆಯಿಂದ ಹೆಚ್ಚು ತಳಿಗಳನ್ನು ಬೆಳೆಸಬೇಕು. ಮಿಶ್ರ ತಳಿ ಜಾನುವಾರುಗಳನ್ನು ಬೆಳೆಸಿ ಕ್ಷೀರಧಾರೆ ಮೂಲಕ ಒಂದು ಲಕ್ಷ ಜನ ರೈತರನ್ನು ಅದರಲ್ಲಿ ಅಳವಡಿಸುವುದಾಗಿ ಮಂಡಲಿ ನಿಶ್ಚಯಿಸಿದೆ. ಈ ದಿಸೆಯಲ್ಲಿ 500 ಸಂಘಗಳನ್ನು ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಇದು ಅತ್ಯಂತ ಶ್ರೇಷ್ಠವಾದ, ಉತ್ಕೃಷ್ಟವಾದ ಯೋಜನೆ ಎಂದು ಹೇಳುತ್ತೇನೆ. ಇನ್ನು ಆರಾಧನೆ. ಇವತ್ತಿನ ದಿವಸ ಸನ್ಮಾನ್ಯ ಮಿತ್ರರು ಹೇಳಿದರು. ಮಾರಮ್ಮ, ಎಲ್ಲಮ್ಮ, ದುರ್ಗವ್ವ ಈ ಗುಡಿಗಳನ್ನು ಯಾರೂ ನೋಡುವಂಥ ಪರಿಸ್ಥಿತಿ ಇಲ್ಲ. ದೇವರಲ್ಲಿ ನಂಬಿಕೆ ಇರುವವರು, ವಿಶ್ವಾಸ ಇರುವವರು ಈ ಗುಡಿಗಳಿಗೆ ಒಂದು ನಯಾಪೈಸೆ ಕೊಟ್ಟಿಲ್ಲ. ದೊಡ್ಡ ದೇವಸ್ಥಾನಗಳಿಗೆ ಧರ್ಮದರ್ಶಿಗಳು, ಮಠಾಧಿಪತಿಗಳು ಸಾಕಷ್ಟು ಕೊಟ್ಟಿದ್ದಾರೆ. ಬಡಜನರು, ಹಿಂದುಳಿದ ವರ್ಗದವರು ಹರಿಜನ ಗಿರಿಜನರು, ಲಂಬಾಣಿ ತಾಂಡಾ, ಕೊಳಚಿ ಪ್ರದೇಶಗಳಲ್ಲಿರುವ ಗುಡಿಗಳೇನಿವೆ ಆ ಗುಡಿಗಳ ಉದ್ಧಾರ ಮಾಡಬೇಕು. ಆ ಗುಡಿಗಳಿಗೆ ಜನರು ಬಂದು ಆರಾಧನೆ ಮಾಡಬೇಕೆನ್ನುವ ದೃಷ್ಟಿಯಿಂದ ಈ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಇಂಥ ಕಾರ್ಯಕ್ರಮವನ್ನು ಹಿಂದೆಂದೂ ಮಾಡಿರಲಿಲ್ಲ ಎಂದು ಅಭಿಮಾನದಿಂದ ಹೇಳುತ್ತೇನೆ. ಒಂದು ಕೋಟಿ ರೂಪಾಯಿ ಹಣವನ್ನು ಹಿಂದೂ ದೇವಸ್ಥಾನಗಳಿಗೆ, ಮುಸ್ಲಿಂ ಬಾಂಧವರಿಗೆ 90 ಲಕ್ಷ ರೂಪಾಯಿ ಹಣವನ್ನು ಕೊಟ್ಟಿದ್ದಾರೆ. ಯಾರಿಗೆ ದೇವರಲ್ಲಿ ಪ್ರೀತಿ ವಿಶ್ವಾಸ, ನಂಬಿಕೆ ಇದೆ ಅಂಥವರು ಬಹಳ ಗೌರವದಿಂದ ಮುಖ್ಯಮಂತ್ರಿಗಳ ಈ ಯೋಜನೆಯನ್ನು ಅಭಿನಂದಿಸುತ್ತಾರೆ.

ಇನ್ನು ಮಾದರಿ ಗ್ರಾಮ. ನಾವು ಮಾಡಿದ್ದನ್ನು ಅಭಿಮಾನದಿಂದ ಹೇಳಬೇಕಾದುದು ನನ್ನ ಕರ್ತವ್ಯ. ಅದನ್ನು ನಾನು ಹೇಳುತ್ತಿದ್ದೇನೆ. ಪ್ರತಿಯೊಂದು ಜಿಲ್ಲೆಗೆ ಮಾದರಿ ಗ್ರಾಮ ಮಾಡಬೇಕು ಎಂದು. ಇದಕ್ಕೆ 10 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. 50ರಿಂದ 60 ಲಕ್ಷ ರೂಪಾಯಿಗಳನ್ನು ಒಂದೊಂದು ಕಡೆ ಕೊಡಬೇಕೆಂದು ಮಾಡಿದ್ದಾರೆ. ಒಂದು ಮಾತನ್ನು ಸರ್ಕಾರಕ್ಕೆ ಹೇಳುತ್ತೇನೆ. ಈ ಮಾದರಿ ಗ್ರಾಮ ಮಾಡುತ್ತೇವೆಂದು ನ್ಯಾಷನಲೈಸ್ ಬ್ಯಾಂಕ್‌ನವರು ಹಳ್ಳಿಗಳನ್ನು ದತ್ತು ತೆಗೆದುಕೊಂಡರು. ಕೆ.ಎಸ್.ಎಫ್.ಸಿ.ಯವರು ತೆಗೆದುಕೊಳ್ಳುತ್ತಿದ್ದಾರೆ. ಆದರೆ ಅಲ್ಲಿ ಆಗುವಂಥ ಕೆಲಸ ಏನಿದೆ ಎಂದರೆ ಶೂನ್ಯ. ಸುಮ್ಮನೆ ಹೆಸರಿಗೆ ದತ್ತು ಗ್ರಾಮ ಎಂದು ಬೋರ್ಡ್ ಬರೆಯುತ್ತಾರೆ. ಆ ರೀತಿ ಇದು ಆಗಬಾರದು. ಅದು ಆಗುವುದಿಲ್ಲ. ಏಕೆಂದರೆ ಹತ್ತು ಕೋಟಿ ರೂಪಾಯಿಗಳ ಪ್ರಾವಿಷನ್ ಇದಕ್ಕೆ ಮಾಡಿದ್ದಾರೆ. ಆದರೂ ನೀವು ಎಚ್ಚರಿಕೆ ವಹಿಸಬೇಕೆಂದು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಆಶ್ರಯ. ಮನುಷ್ಯನಿಗೆ ಬೇಕಾಗಿರುವುದು ವಸತಿ, ನೆರಳು, ಇದಕ್ಕೆ ಹೆಚ್ಚು ಮಹತ್ವ ಕೊಟ್ಟು ಮ್ಯಾಸೀವ್ ಹೌಸಿಂಗ್ ಪ್ರೋಗ್ರಾಂ ಎಂದು ಮಾಡಿ ದುರ್ಬಲ ವರ್ಗದವರಿಗೆ ಕೊಡುತ್ತಾರೆ. ಡ್ರೈವರ್‌ಗಳಿಗೆ ಕಂಡಕ್ಟರ್‌ಗಳಿಗೆ ಮತ್ತು ಅನೇಕ ಬಡತನ ರೇಖೆಗಿಂತ ಕೆಳಗಿರುವವರಿಗೆ ವಸತಿ ಸೌಕರ್ಯ ಮಾಡುವಂಥ ಆತ್ಮವಿಶ್ವಾಸದಿಂದ ಧೈರ್ಯದಿಂದ ನಾವು ಮಾಡಿಕೊಡುತ್ತೇವೆಂದು ಅದಕ್ಕಾಗಿ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಪ್ರತಿಯೊಬ್ಬರೂ ಮೆಚ್ಚುವಂಥ ಕಾರ್ಯಕ್ರಮ ಇದು. ಇದನ್ನು ಆದಷ್ಟು ಕಾರ್ಯರೂಪದಲ್ಲಿ ತರುವಂಥ ಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಹರಿಜನರ ಸಲುವಾಗಿ ಈ ಅಂಬೇಡ್ಕರ್ ಜಯೋಂತೋತ್ಸವದ ವರ್ಷದಲ್ಲಿ 30 ಕೋಟಿ ರೂಪಾಯಿಯನ್ನು ವೆಚ್ಚಮಾಡಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ, ಅದು ಉಪಯೋಗವಾಗತಕ್ಕಂತಹ ಕಾರ್ಯಕ್ರಮವಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಂಬೇಡ್ಕರ್ ಬಗ್ಗೆ ಪೂರ್ತಿ ಹೇಳಿ.

(ಗೊಂದಲ)

ಶ್ರೀ ಗೋಪಿನಾಥ್ ಆರ್. ಸಾಂಡ್ರ : ಈ ಮೂವತ್ತು ಕೋಟಿ ರೂಪಾಯಿಗಳಲ್ಲಿ ಮನೆಗಳನ್ನು ನಿರ್ಮಾಣ ಮಾಡಲು, ಈಗ ಇರತಕ್ಕಂತಹ ಕಾರ್ಯಕ್ರಮಗಳನ್ನು ಬಿಟ್ಟು ವಿಶೇಷವಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ಅಂದರೆ ನೂತನವಾಗಿ ವಿದ್ಯಾರ್ಥಿನಿಲಯಗಳನ್ನು ಕಟ್ಟಲು, ದೇವದಾಸಿಯರನ್ನು ಪುನರ್ರುದ್ಧಾರ ಮಾಡಲು, ವಿಶೇಷ ನೀರಾವರಿ ಯೋಜನೆಗಳಿಗಾಗಿ, ಕೊಳವೆ ಬಾವಿಗಳನ್ನು ತೋಡಲು ಈ ರೀತಿ ವಿಶೇಷವಾದ ಕಾರ್ಯಕ್ರಮಗಳನ್ನು ಅಂಬೇಡ್ಕರ್‌ರವರ ನೆನಪಿಗಾಗಿ ಮಾಡಿದ್ದಾರೆ.

ಇನ್ನು ವಿಶೇಷ ಪ್ರದೇಶಗಳ ಕಾರ್ಯಕ್ರಮ, ಈ ಕಾರ್ಯಕ್ರಮದ ಅನ್ವಯ ಯಾವ್ಯಾವು ಹಿಂದುಳಿದ ಪ್ರದೇಶಗಳಿವೆಯೋ ಅಂತಹ ಪ್ರದೇಶಗಳ ಅಭಿವೃದ್ಧಿಗಾಗಿ ಹೈದರಾಬಾದ್ ಅಭಿವೃದ್ಧಿ ಬೋರ್ಡ್ ಎಂದು ಮಾಡಿ ಅದಕ್ಕೆ 60 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಮತ್ತೆ ಮಲೆನಾಡಿನ ಅಭಿವೃದ್ಧಿ ಮಂಡಳಿ ಮಾಡಿ ಅದಕ್ಕೂ ಸಾಕಷ್ಟು ಹಣವನ್ನು ಒದಗಿಸಿದ್ದಾರೆ ಇದಲ್ಲದೆ ಗುಡ್ಡಗಾಡು ಪ್ರದೇಶದ ಅಭಿವೃದ್ಧಿಗಾಗಿ ಕೋಟ್ಯಾಂತರ ರೂಪಾಯಿಗಳ ಹಣವನ್ನು ಕೊಟ್ಟಿದ್ದಾರೆ. ಈ ಒಂದು ಪ್ರಸಂಗದಲ್ಲಿ ಒಂದು ಮಾತನ್ನು ಹೇಳುತ್ತೇನೆ ಮಲೆನಾಡು ಅಭಿವೃದ್ಧಿ ಬೋರ್ಡ್ ಆಯಿತು, ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಬೋರ್ಡ್ ಎಂದು ಆಯಿತು ಇನ್ನು ಹೊಸ ಮತ್ತು ಹಳೆಯ ಮೈಸೂರು ಭಾಗದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದೆ, ಇದರ ಬಗ್ಗೆ ಹೆಚ್ಚಿನ ಕೆಲಸ ಮಾಡುವಂತಹ ಅಗತ್ಯವಿಲ್ಲ. ಆದರೆ ದುರ್ದೈವದಿಂದ ಹೈದ್ರಾಬಾದ್ ಕರ್ನಾಟಕ ಎಂದು ಹೇಳುವಂಥ ಈ ನಾಲ್ಕು ಜಿಲ್ಲೆಗಳೇನು ಇವೆ ಇಲ್ಲಿ ಯಾವುದೇ ಯೋಜನೆಗಳಾಗಿಲ್ಲ. ಆದುದರಿಂದ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಇದರ ಕಡೆ ಗಮನಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದನ್ನು ಏಕೆ ತೆಗೆದುಕೊಂಡಿಲ್ಲ?

ಶ್ರೀ ಗೋಪಿನಾಥ್ ಆರ್ ಸಾಂಡ್ರ : ಆದುದರಿಂದಲೇ ಅದನ್ನು ತೆಗೆದುಕೊಳ್ಳಬೇಕೆಂದು ಅದರ ಬಗ್ಗೆ ವಿಶೇಷವಾದ ಲಕ್ಷ್ಯೆಯನ್ನು ಕೊಡಬೇಕೆಂದು ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಅದಲ್ಲದೆ ವೃದ್ಧಾಪ್ಯ ವೇತನವನ್ನು ಮಾಡಿದ್ದಾರೆ, ಶಾಸಕರ ವೇತನವನ್ನು ಹೆಚ್ಚು ಮಾಡಿದ್ದಾರೆ, ದಿನಗೂಲಿ ನೌಕರರನ್ನು ಖಾಯಂ ಮಾಡಿದ್ದಾರೆ, 15ಕೋಟಿ ರೂಪಾಯಿಗಳನ್ನು ಕೊಂಕಣ ರೈಲ್ವೆಗಾಗಿ ಕೊಡಲಾಗಿದೆ, ವಯಸ್ಸು ಮೀರಿದ ಪಧವೀಧರರಿಗೆ ಅರ್ಜಿಯನ್ನು ಹಾಕಲು ವಯಸ್ಸಿನಲ್ಲಿ ಸಡಿಲಿಕೆಯನ್ನು ಕೊಟ್ಟಿದ್ದಾರೆ, ಪಶ್ಚಿಮಘಟ್ಟದ ಹರಿದ್ರೇಣುವನ್ನು ಕಾಯ್ದುಕೊಂಡು ಹೋಗುವುದಕ್ಕೆ ಒಂದು ಯೋಜನೆಯನ್ನು ಮಾಡಿದ್ದಾರೆ. ಇಂತಹ ಉತ್ತಮವಾದಂತಹ ಶ್ರೇಷ್ಠವಾದಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡು ಜನರ ಮುಂದೆ ನಾವು ಬಂದಿದ್ದೇವೆ. ಜನರಿಗಾಗಿ ನಾವು ಮಾಡಿದ್ದೇವೆ, ಆದರೆ ವಿರೋಧಪಕ್ಷದವರು ನಾವು ಏನು ಮಾಡಿಲ್ಲ, ರೈತರಿಗೆ ಮಾಡಲಿಲ್ಲ, ಹಿಂದುಳಿದವರಿಗೆ ಕೆಲಸ ಮಾಡಲಿಲ್ಲ ಎಂದೆಲ್ಲಾ ಹೇಳುತ್ತಿದ್ದಾರೆ. ಈ ಸಲದ ಬಜೆಟ್‌ನಲ್ಲಿ ಹಿಂದುಳಿದವರ ಅಭಿವೃದ್ಧಿಗಾಗಿ 32 ಪರ್ಸೆಂಟ್ ಕೊಟ್ಟಿದ್ದಾರೆ ಅದು ಸಾಲದು 50 ಪರ್ಸೆಂಟ್ ಕೊಡಬೇಕೆಂದು ಮಾನ್ಯ ಬಂಗಾರಪ್ಪನವರಲ್ಲಿ ಒತ್ತಾಯ ಮಾಡುತ್ತೇನೆ.

ಇನ್ನು ಕೈಗಾರಿಕೆ, ನಮ್ಮಲ್ಲಿ 61 ಪಬ್ಲಿಕ್ ಅಂಡರ್ ಟೇಕಿಂಗ್ ಕೈಗಾರಿಕೆಗಳಿವೆ, ಈ 61 ಕೈಗಾರಿಕೆಗಳಲ್ಲಿ ಹಿಂದಿನ, ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರು. ಹೀಗೆ ಹಾಕಿಕೊಂಡ ಪ್ರಕಾರ ದೊಡ್ಡ ದೊಡ್ಡ ಉದ್ಯಮಗಳಲ್ಲಿ ಏನು ಕೆಲಸವಾಗುತ್ತಿದೆ, ಅಲ್ಲಿ ಏನು ನಡೆಯುತ್ತಿದೆ ಎನ್ನುವಂಥದ್ದನ್ನು ನಾವ್ಯಾರು ನೋಡಲಿಲ್ಲ, ಇವೊತ್ತು ನಾವು ಅದನ್ನು ಕಣ್ಣು ತೆರೆದು ನೋಡಬೇಕಾಗುತ್ತದೆ. ಕೈಗಾರಿಕೆಯಲ್ಲಿ 4-5ನೇ ಸ್ಥಾನದಲ್ಲಿದ್ದ ನಾವು ಇಂದು 8ನೇ ಸ್ಥಾನಕ್ಕೆ ಬಂದಿದ್ದೇವೆ. ವಿಶ್ವೇಶ್ವರಯ್ಯನವರ ಮುಖಂಡತ್ವದಲ್ಲಿ ಒಂದು ಕೈಗಾರಿಕಾ ಪಾಲಿಸಿಯನ್ನು ಮಾಡಿತ್ತು. ಆದರೆ ಈ 61 ಕೈಗಾರಿಕೆಗಳಲ್ಲಿ ನಮ್ಮ ಹಣ 460 ಕೋಟಿ ರೂಪಾಯಿಗಳಷ್ಟು ಶೇರು ಬಂಡವಾಳ, ಸಾಲವಾಗಿ 1713 ಕೋಟಿ ರೂಪಾಯಿಗಳು ಮತ್ತು ಗ್ಯಾರಂಟಿಯಾಗಿದ್ದುದು 1180 ಕೋಟಿ ರೂಪಾಯಿ. ಇದರಿಂದ ಕನಿಷ್ಟ ಪಕ್ಷ 13 ಕೋಟಿ 70 ಲಕ್ಷಗಳಷ್ಟು ಬಡ್ಡಿ ನಮಗೆ ಬರಬೇಕಾಗಿತ್ತು. ಆದರೆ 1988-89ರಲ್ಲಿ 34.11ಲಕ್ಷ ಲಾಭ ಗಳಿಸಿದೆ, 1989-90ರಲ್ಲಿ 43.59ಲಕ್ಷ ಬಂದಿದೆ. ಆದುದರಿಂದ ಇದರ ಬಗ್ಗೆ ಒಂದು ವಿಶೇಷ ಸಮಿತಿಯನ್ನು ನೇಮಿಸಿ ಈ ಕೈಗಾರಿಕೆಗಳಲ್ಲಿ ಯಾರು ಯಾರು ತಪ್ಪಿತಸ್ಥರಿದ್ದಾರೆ ಮತ್ತು ಅವುಗಳಲ್ಲಿ ಆಡಳಿತ ಮಾಡಿದಂತಹ ಐ.ಎ.ಎಸ್. ಅಧಿಕಾರಿಗಳು ದೊಡ್ಡ ದೊಡ್ಡ ಅಧಿಕಾರಿಗಳು ಇದ್ದಾರೆ, ಇದರ ಬಗ್ಗೆ ಕ್ಷಣವೂ ತಡಮಾಡದೆ ಯೋಗ್ಯವಾದ ವಿಚಾರಣೆಯನ್ನು ಮಾಡಿ ಯಾರು ತಪ್ಪಿತಸ್ಥರಿದ್ದಾರೆ ಅವರನ್ನು ಕಾರಣಕರ್ತರನ್ನಾಗಿ ಮಾಡಬೇಕು, ಅದಲ್ಲದೆ ಇವುಗಳಿಗೆ ಅನೇಕ ರೀತಿಯಲ್ಲಿ ಪರಿಹಾರ ಒದಗಿಸಕೊಡಬೇಕು. ಸರ್ಕಾರ ಇದರ ಬಗ್ಗೆ ಬಹಳ ಚಿಂತನೆ ಮಾಡುತ್ತಿದೆ. ಸಮಾಜವಾದಕ್ಕೆ ಹೆಸರುವಾಸಿಯಾದ ಬಂಗಾರಪ್ಪನವರು ಇವೊತ್ತು ತುಂಬಾ ನೊಂದ ಮನಸ್ಸಿನಿಂದ ಈ ಕೈಗಾರಿಕೆಗಳನ್ನೇನು ಮಾಡಬೇಕು? ವಿಧಿಯಿಲ್ಲದೆ ಪ್ರೈವೇಟ್ ಏಜೆನ್ಸಿಗೆ ಒಪ್ಪಿಕೊಂಡಿದ್ದಾರೆ.

ಇದನ್ನು ವಿರೋಧಪಕ್ಷದವರು ಖಂಡನೀಯವೆಂದು ಹೇಳುತ್ತಿದ್ದಾರೆ. ಯಾವಾಗ ಯಾವ್ಯಾವ ವಿಚಾರಗಳು ಬರುತ್ತದೆ, ಅವುಗಳನ್ನೂ ಅನುಸರಿಸಿಕೊಂಡು ನಾವು ನಡೆಯಬೇಕಾಗುತ್ತದೆ. ಗೊರ್ಬಚೇವ್ ಅವರು ಸ್ಟ್ಯಾಲಿನ್ ಸೂತ್ರವನ್ನು ಬಿಟ್ಟು ಬೇರೆ ಕಡೆಗೆ ಹೊರಟಿದ್ದಾರೆ. ಅಂಥ ಸಮಯದಲ್ಲಿ ನಾವು ಸಮಾಜವಾದವನ್ನೇ ನಂಬಿಕೊಂಡು ಹೋಗಬಾರದು. ಸಾರ್ವಜನಿಕ ಹಿತದೃಷ್ಟಿಯಿಂದ, ತೆರಿಗೆದಾರರ ಹಿತದೃಷ್ಟಿಯಿಂದ ನಾವು ಇಂಡಸ್ಟ್ರಿಯಲ್ ಪಾಲಿಸಿಯನ್ನು ಬದಲಾವಣೆ ಮಾಡಬೇಕಾಗುತ್ತದೆ. ಅದು ಅನಿವಾರ್ಯ ಇಲ್ಲದಿದ್ದರೆ ಸಾರ್ವಜನಿಕ ಹಣ ತೆರಿಗೆದಾರರ ಹಣ ದುಂದಾಗುತ್ತದೆ ಎಂದು ಹೇಳಬಯಸುತ್ತೇನೆ. ಈ ರೋಗಗ್ರಸ್ಥ ಕೈಗಾರಿಕೆಗಳಿಗೆ ಕೂಡ ಅದೇ ರೀತಿಯಾಗುತ್ತಿದೆ. ಇನ್ನು ವಿಶ್ವ ಗ್ರಾಮೀಣ ಹಾಗೂ ಗುಡಿ ಕೈಗಾರಿಕೆ ಯೋಜನೆ ಬಗ್ಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಇವತ್ತು ನಮ್ಮ ಕಾಂಗ್ರೆಸ್‌ನವರು ಹಾಗೂ ಎಲ್ಲಾ ವಿರೋಧಪಕ್ಷದವರು ಗಾಂಧೀಜಿಯನ್ನು ಮರೆತಿದ್ದಾರೆ. ಗಾಂಧೀಜಿಯವರ ಹೆಸರು ಸಹ ತೆಗೆದುಕೊಳ್ಳುವಂತಹ ಒಂದು ಪರಿಸ್ಥಿತಿ ಇವತ್ತಿನ ದಿವಸ ಇಲ್ಲ. ಅಂತಹ ಕಾಲದಲ್ಲಿ ಗಾಂಧೀಜಿಯವರ ಕಲ್ಪನೆ ಏನು ಇದೆ ಅವರು ಹೇಳಿದಂತೆ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬೇಕಾದರೆ ಏನು ಮಾಡಬೇಕೆನ್ನುವುದನ್ನು ವಿಚಾರ ಮಾಡಿದ ಅವರು ಏನು ಕನಸನ್ನು ಇದರ ಬಗ್ಗೆ ಹೊಂದಿದ್ದರು. ಅದನ್ನು ಇಂದು ನನಸು ಮಾಡಲು ಈ ಯೋಜನೆಯಿಂದ ಅದನ್ನು ಕಾರ್ಯಗತ ಮಾಡುತ್ತಿದ್ದಾರೆ. ಹಳ್ಳಿ ಹಳ್ಳಿಗೆ ಈ ಕಾರ್ಯಕ್ರಮ ಹಬ್ಬುತ್ತದೆ. ನಿರುದ್ಯೋಗಿಗಳ ಸಂಖ್ಯೆ 12 ಲಕ್ಷದಿಂದ 80 ಲಕ್ಷ ಇದೆ ಎಂದು ಏನು ಹೇಳುತ್ತೇವೆ ಅದು ಕಡಿಮೆಯಾಗುತ್ತದೆಂದು ಇಲ್ಲಿ ಹೇಳಬಯಸುತ್ತೇನೆ. ಇವತ್ತು ನಮ್ಮ ನಾಡಿನಲ್ಲಿರುವ ಕಾರ್ಪೊರೇಷನ್ ಮತ್ತು ಮುನಿಸಿಪಾಲಿಟಿಗಳ ಆರ್ಥಿಕ ಪರಿಸ್ಥಿತಿ ಚಿಂತಾಜನಕವಾಗಿದೆ. ಇವತ್ತು ಬರುವಂಥಹ ಉತ್ಪನ್ನ ಕೇವಲ ಸ್ಯಾಲರಿಗೆ ಸರ್ವಿಸ್ ಕಾಸ್ಟ್‌ಗೆ ಹೋಗುತ್ತಿದೆ. ರಿಪೇರಿಯನ್ನು ಸಹ ಸರಿಯಾಗಿ ಮಾಡಲಾರದಂತಹ ಸ್ಥಿತಿ

ನಮ್ಮದು ಇದೆ. ಮಾನ್ಯ ಬಂಗಾರಪ್ಪನವರು ಯಾವ ರೀತಿಯಿಂದ ಇದನ್ನು ಸರಿದೂಗಿಸಬಹುದು ಎಂದು ಚಿಂತನೆ ಮಾಡಿದ್ದಾರೆ. ಲೋಕಲ್ ಗಲ್ಫ್ ಗವರ್ನ್‌ಮೆಂಟ್ ಎಂದು ಅನ್ನುತ್ತೀರಿ ಪ್ರತಿಯೊಂದು ಮಾತಿಗೂ ಸರಕಾರಕ್ಕೆ ರೋಡ್ ಮಾಡಿಸುವುದಕ್ಕೆ ಹಣ ಕೊಡಿ, ಕುಡಿಯುವ ನೀರು ತರುತ್ತೇವೆ ಹಣ ಕೊಡಿ ಎಂದು ಕೇಳುವುದು ಸರಿಯಲ್ಲ. ಚುನಾಯಿತ ಪ್ರತಿನಿಧಿಗಳು ಕೇಳುಂಥಾದ್ದು ನನಗೆ ಸರಿ ಕಾಣುವುದಿಲ್ಲ. ಇದು ಆಗಬಾರದು. ನಾನು ಅತ್ಯಂತ ಧೃಡತೆಯಿಂದ ಈ ಮಾತನ್ನು ಹೇಳುತ್ತೇನೆ. ಆಕ್ಟ್ರಾಯ್ಸ್ ಪದ್ಧತಿಯನ್ನು ಜಾರಿಗೆ ತರಬೇಕು ಅದನ್ನು ತರದಿದ್ದರೆ ಇದಕ್ಕೆ ಉಳಿಗಾಲವಿಲ್ಲ. ನಗರಸಭೆಗಳು, ಪುರಸಭೆಗಳೂ ನಡೆಯುವುದಿಲ್ಲ, ಇದನ್ನು ತರಲು ಧೃಡಸಂಕಲ್ಪ ಮಾಡಬೇಕಾಗಿದೆ. ಇದನ್ನು ಮಾಡದಿದ್ದರೆ ಜನಗಳಿಗೆ ಬಾಯಿ ಬಾಯಿ ಬಿಡುವಂತಹ ಪರಿಸ್ಥಿತಿ ಬರುತ್ತದೆ. ಇದನ್ನು ತರುವಾಗ ವ್ಯಾಪಾರಸ್ಥರು ಟ್ರಾನ್ಸ್‌ಪೋರ್ಟ್ ಕಂಟ್ರಾಕ್ಟರ್‌ಗಳು ಏನು ಇದ್ದಾರೆ ಅವರು ಅನೇಕ ತೊಂದರೆಗಳನ್ನು ಅಡ್ಡಿ ಆತಂಕಗಳನ್ನು ತರುವವರಿದ್ದಾರೆ ದಯಮಾಡಿ ಇದನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕು.

ಮಹಾರಾಷ್ಟ್ರದವರೂ ಕೂಡ ಇದನ್ನು ಮಾಡಿದ್ದಾರೆ ಅವರು ಇವರ್‍ಯಾರಿಗೂ ಕೂಡ ಬಗ್ಗದೆ ಮಾಡಿದ್ದಾರೆ. ಇವತ್ತಿನ ದಿವಸ ಆಕ್ಟ್ರಾಯ್ ಅನ್ನು ತರಬೇಕಾಗಿದೆ ಅದನ್ನು ಎಂಟ್ರಿ ಟ್ಯಾಕ್ಸ್ ಎಂದೋ ಅಥವಾ ಮತ್ತೊಂದು ರೂಪದಲ್ಲೋ ಮುಂದುವರಿಸಿಕೊಡು ಹೋಗಬೇಕು. ಈ ಪದ್ಧತಿಯನ್ನು ತಂದು ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಮುಂದೆ ಸುಧಾರಿಸಲಿಕ್ಕೆ ಏನಾದರೂ ಪ್ರಯತ್ನ ಮಾಡಬೇಕು. ಇದನ್ನು ನಮ್ಮ ಸರಕಾರದವರು ಮಾಡುತ್ತಾರೆಂದು ನಾನು ನಂಬಿದ್ದೇನೆ. ಮಾಡದಿದ್ದರೆ ಚುನಾಯಿತ ಪ್ರತಿನಿಧಿಗಳಾದ ನಾವೆಲ್ಲರೂ ಮತ್ತು ಮುನಿಸಿಪಲ್ ಸದಸ್ಯರೂ ಕೂಡ ಪ್ರತಿಭಟಿಸಬೇಕಾಗುತ್ತದೆ. ಇನ್ನು ವಿದೇಶಿ ನೆರವಿನ ಬಗ್ಗೆ ಹೇಳುವುದಾದರೆ ಅನೇಕ ಅಭಿವೃದ್ಧಿ ಕಾರ್ಯಗಳಿಗೆ ಹಣವನ್ನು ಪಡೆಯುವಂತಹ ಒಂದು ಅವಕಾಶ ನಮ್ಮಲ್ಲಿ ಇದೆ. ಇವತ್ತಿನ ದಿವಸ ಸಾರ್ವಜನಿಕ ಸಂಸ್ಥೆಗಳು ಮತ್ತು ವಿದೇಶೀ ರಾಷ್ಟ್ರಗಳು....

ಶ್ರೀ ವಾಟಾಳ್ ನಾಗರಾಜ್: ಕೋರಮ್ ಇಲ್ಲ ಸಭೆಯನ್ನು ಮುಂದೂಡಿ ಮಧ್ಯಾಹ್ನ ಅವರು ಮುಂದುವರಿಸಲಿ.

ಉಪಾಧ್ಯಕ್ಷಿಣಿಯವರು: ನೋಡುತ್ತೇನೆ.

ಶ್ರೀ ಗೋಪಿನಾಥ್ ಆರ್. ಸಾಂಡ್ರ: ಫಾರಿನ್ ಏಡ್ ತೆಗೆದುಕೊಂಡು ಅನೇಕ ಡೆವಲಪ್‌ಮೆಂಟ್ ವರ್ಕ್ಸ್ ಅನ್ನು ಮಾಡಬೇಕು. ಹಣವನ್ನು ಕೊಡಲಿಕ್ಕೆ ತಯಾರಿದ್ದಾರೆ ಅದನ್ನು ನಮ್ಮ ಸರಕಾರ ಉಪಯೋಗ ಮಾಡಿಕೊಳ್ಳಬೇಕು. ಮಾನ್ಯ ಕೆ.ಹೆಚ್ ಪಾಟೀಲರೂ ಕೂಡ ಒಮ್ಮೆ ಹೋಗಿ ಬಂದಿದ್ದಾರೆ ಆದರೆ ಅದು ಫಲಕಾರಿಯಾಗಲಿಲ್ಲ. ಅದು ಮತ್ತೆ ಆಗಬಾರದು. ಇದಕ್ಕೆ ಒಂದು ಸಮಿತಿಯನ್ನು ನೇಮಿಸಿ ವಿದೇಶೀ ಸಹಾಯವನ್ನು ಯಾವ ರೀತಿ ಪಡೆಯಬೇಕೆಂಬುದನ್ನು ವಿಚಾರ ಮಾಡಬೇಕು. ಲಂಡನ್‌ನಲ್ಲಿ ಓವರ್‌ಸೀಸ್ ಅಸೋಷಿಯೇಷಿನ್ ಎಂದು ಇದೆ ಅವರು ಇವತ್ತಿನ ದಿವಸ ನಮಗೆ ಸಹಾಯ ಮಾಡುವುದಕ್ಕೆ ಮುಂದೆ ಬಂದಿದ್ದಾರೆ. ಅದೇ ರೀತಿ ಚೈನಾ, ಜಪಾನ್‌ನವರೂ ಕೂಡ ಮುಂದೆ ಬರುತ್ತಿದ್ದಾರೆ. ಇಟಲಿಯವರೂ ಬರುತ್ತಿದ್ದಾರೆ. ಅನೇಕ ರಾಷ್ಟ್ರಗಳು ಹಿಂದುಳಿದಿರುವಂತಹ ರಾಷ್ಟ್ರಗಳಿಗೆ ಹಾಗೂ ಹಿಂದೂಸ್ಥಾನದವರಿಗೆ ನೆರವನ್ನು ಕೊಡಲು ಮುಂದೆ ಬಂದಿದ್ದಾರೆ ಅದರ ಅವಕಾಶವನ್ನು ಉಪಯೋಗ ಮಾಡಿಕೊಳ್ಳಬೇಕು. ಆಂಧ್ರದವರೂ ಕೂಡ ಸ್ಲಂನ್ನು ಸುಧಾರಿಸಲಿಕ್ಕೆ ತೆಗೆದುಕೊಂಡಿದ್ದಾರೆ.

ಅದನ್ನು ನೀವು ಕೂಡ ತೆಗೆದುಕೊಳ್ಳಬೇಕು. ಕೇಂದ್ರಸರ್ಕಾರದ ಅಪ್ಪಣೆಯನ್ನು ಪಡೆಯಬೇಕು. ಒತ್ತಾಯಪೂರ್ವಕವಾಗಿ ಕೇಳಬೇಕೆಂದು ಹೇಳುತ್ತೇನೆ. ಅದು ಅಲ್ಲದೆ ಎಸ್‌ಆರ್‌ಐನವರು ಕೂಡ ಹಿಂದೂಸ್ಥಾನದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹಣವನ್ನು

ಕೊಡಲು ತಯಾರಾಗಿದ್ದಾರೆ. ಅವರ ಉಪಯೋಗವನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಉಪಾಧ್ಯಕ್ಷಣಿಯವರು: ಮಾನ್ಯ ಸದಸ್ಯರು 40 ನಿಮಿಷ ಮಾತನಾಡಿದ್ದೀರಿ. ಇನ್ನೂ ಮಾತನಾಡುವವರು ಬಹಳ ಜನರು ಇದ್ದಾರೆ. ಕೊನೆಯ ಪಾಯಿಂಟ್ ಎಂದು ಬಹಳ ಸಮಯದಿಂದ ಮಾತನಾಡುತ್ತಿದ್ದೀರಿ.

ಶ್ರೀ ಗೋಪಿನಾಥ ಆರ್. ಸಾಂಡ್ರ : ಇನ್ನು ಮೂರು ಪಾಯಿಂಟ್‌ಗಳಿವೆ. ಅಡ್ಮಿನಿಸ್ಟ್ರೇಟಿವ್ ಪ್ರೊಸೀಜರ್ ಬಗ್ಗೆ ಹೇಳುತ್ತೇನೆ. ಅನೇಕ ಐ.ಎ.ಎಸ್. ಅಧಿಕಾರಿಗಳು ಏನಿದ್ದಾರೆ. ಅವರು ಮನಸ್ಸು ಕೊಟ್ಟು ಕೆಲಸಮಾಡುತ್ತಿಲ್ಲ. ಮನಸೋಯಿಚ್ಛೆ ಕೆಲಸ ಮಾಡುತ್ತಿದ್ದಾರೆ. ಸರ್ಕಾರ ಯಾವುದೇ ಒಂದು ಕಾರ್ಯಕ್ರಮವನ್ನು ಹಾಕಿಕೊಂಡರೂ ಅದನ್ನು ಕಾರ್ಯಗತ ಮಾಡುವಂತಹವರು ಈ ಅಧಿಕಾರಿಗಳು ಮನಸ್ಸಿಲ್ಲದೆ ಕೆಲಸ ಮಾಡಿದರೆ ಅದು ಕಾರ್ಯಗತವಾಗುವುದಿಲ್ಲ. ನಮ್ಮ ಸರ್ಕಾರ ಪಂಚಸೂತ್ರ ಕಾರ್ಯಕ್ರಮ ಏನು ಹಾಕಿಕೊಂಡಿದೆ ಅದನ್ನು ಕಾರ್ಯಗತ ಮಾಡಬೇಕು. ಅಧಿಕಾರಿಗಳನ್ನು ಕಂಟ್ರೋಲ್ ಮಾಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಏನು ಪಂಚಭೂತ ಕಾರ್ಯಕ್ರಮಗಳೇ?

ಶ್ರೀ ಗೋಪಿನಾಥ ಆರ್. ಸಾಂಡ್ರ : ಪಂಚಭೂತ ಅಲ್ಲ, ಪಂಚಸೂತ್ರ. ಒಂದು ಫೈಲು ಒಂದೆರಡು ವರ್ಷ ಒಂದೇ ಕಛೇರಿಯಲ್ಲಿರುತ್ತದೆ. ಅಂತಹವರ ಮೇಲೆ ಒಂದು ರಿಸ್ಟ್ರಿಕ್ಷನ್ ಹಾಕಬೇಕು. ಕಛೇರಿಯ ವೇಳೆಯಲ್ಲಿ ಕ್ಯಾಂಟೀನುಗಳನ್ನು ತೆಗೆದಿರಬಾರದು. ಚಹಾದ ವೇಳೆಗೆ ಎಷ್ಟು ಟೈಮ್ ಇರಬೇಕು ಅಷ್ಟು ಟೈಮ್ ಕೊಡಿ. ಅದೇ ರೀತಿಯಲ್ಲಿ ಊಟದ ಟೈಮ್ ಎಷ್ಟು ಹೊತ್ತು ಕೊಡಬೇಕೋ ಅಷ್ಟು ಹೊತ್ತು ಕೊಡಿ. ಬಾಕಿ ಟೈಮ್‌ನಲ್ಲಿ ನೌಕರರು ಕುರ್ಚಿ ಹಿಡಿದು ಕುಳಿತು ಕೆಲಸಮಾಡುವಂತೆ ಮಾಡಿಯೆಂದು ನಾನು ಕೇಳಿಕೊಳ್ಳುತ್ತೇನೆ. ಉತ್ತರ ಕರ್ನಾಟಕ ಭಾಗದಿಂದ 57 ಜನ ಶಾಸಕರು ಇದ್ದೇವೆ. ನಾವು ಎಷ್ಟು ಕೆಲಸ ಅಪೇಕ್ಷೆ ಮಾಡುತ್ತೇವೆ ಅಷ್ಟು ಆಗುತ್ತಿಲ್ಲವೆನ್ನುವ ಮಾತನ್ನು ಹೇಳುತ್ತಾರೆ. ಅದು ಉತ್ತರ ಕರ್ನಾಟಕದ ಜನರ ತಲೆಯಲ್ಲಿ ಬಂದಿದೆ. ಸರ್ಕಾರದವರು ನಮ್ಮನ್ನು ಕಡೆಗಣಿಸುತ್ತಿದ್ದಾರೆ ಎನ್ನುವ ಭಾವನೆ ಬಂದಿದೆ. ಆ ಬಗ್ಗೆ ಉಗ್ರಕ್ರಮ ಕೈಗೊಳ್ಳಬೇಕೆಂಬ ವಿಚಾರವನ್ನು ಮಾಡುತ್ತಿದ್ದಾರೆ. ಅವರ ಮನಸ್ಸಿನಿಂದ ಈ ವಿಚಾರವನ್ನು ತೆಗೆದುಹಾಕಲಿಕ್ಕೆ ಯೋಗ್ಯವಾದ ಮತ್ತು ನ್ಯಾಯವಾದ ಕಾರ್ಯಕ್ರಮವನ್ನು ಹಾಕಿಕೊಂಡು ಉತ್ತರ ಕರ್ನಾಟಕ ಭಾಗದ ನಾಲ್ಕು ಜಿಲ್ಲೆಗಳ ಬಗ್ಗೆ ವಿಶೇಷವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ತಮ್ಮಲ್ಲಿ ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕೊನೆಯದಾಗಿ ಹೇಳುವುದಾದರೆ ಎಲ್ಲಾ ಕೆಲಸಗಳು ಸ್ಥಗಿತವಾಗಿವೆ. ಮಂದಗತಿಯಿಂದ ನಡೆದಿವೆ. ಎಲ್ಲಾ ಕೆಲಸಗಳನ್ನು ಮಾಡಬೇಕೆಂದು ಆದೇಶ ನೀಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಮೆಡಿಕಲ್ ಡಿಪಾರ್ಟ್‌ಮೆಂಟ್‌ಗೆ ಕೊಟ್ಟಿರತಕ್ಕ ಹಣ ಏನೇನೂ ಸಾಲದು. ಇನ್ನೂ 5 ಪರ್ಸೆಂಟ್ ಹೆಚ್ಚಿಗೆ ಕೊಡಬೇಕೆಂದು ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಪಬ್ಲಿಕ್ ಹೆಲ್ತ್ ಸೆಂಟರ್ಸ್ ಆಸ್ಪತ್ರೆಗಳಿಗೆ ಅವು ಎಲ್ಲೆಲ್ಲಿ ಇವೆ ಅವುಗಳಿಗೆ ಸಾಕಷ್ಟು ಔಷಧಿಗಳನ್ನು ಸಪ್ಲೈ ಮಾಡಬೇಕು. ಬೆಡ್‌ಗಳನ್ನು ಕೊಡಬೇಕು. ಅಲ್ಲಿ ಆಪರೇಷನ್ ಮಾಡುವ ವ್ಯವಸ್ಥೆಯನ್ನು ಸಹ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆಸ್ಪತ್ರೆಗಳು ಎಲ್ಲಿವೆ ಅಲ್ಲಿ ಧರ್ಮಶಾಲೆಗಳನ್ನು ಕಟ್ಟಿಸಬೇಕೆಂದು ಹೇಳುತ್ತೇನೆ. ಧರ್ಮಶಾಲೆಗಳನ್ನು ಆಸ್ಪತ್ರೆಯವರು ಕಟ್ಟಿಸಲಿಕ್ಕೆ ಆಗದಿದ್ದರೆ ಸಾರ್ವಜನಿಕ ಸೇವಾಸಂಸ್ಥೆಗಳು ಧರ್ಮಶಾಲೆಗಳನ್ನು ಕಟ್ಟಲಿಕ್ಕೆ ಮುಂದೆ ಬಂದರೆ ಅವುಗಳು ಕಟ್ಟಲಿಕ್ಕೆ ಅವಕಾಶ ಮಾಡಿಕೊಡಬೇಕು. ಅವರಿಗೆ ಸಹಾಯವನ್ನು ಸರ್ಕಾರ ಮಾಡಬೇಕೆಂದು ನಾನು

ಕೇಳಿಕೊಳ್ಳುತ್ತೇನೆ. ಮೊಬೈಲ್ ಆಸ್ಪತ್ರೆಗಳ ಅವಶ್ಯಕತೆಯಿದೆ, ಅದನ್ನು ಜಾರಿಯಲ್ಲಿ ತರಬೇಕೆಂದು ಹೇಳುತ್ತೇನೆ.

ಕೊನೆಯದಾಗಿ, ನಾನು ನನ್ನ ಕ್ಷೇತ್ರದ ಬಗ್ಗೆ ಎರಡು ಮಾತುಗಳನ್ನು ಹೇಳದಿದ್ದರೆ ತಪ್ಪಾದೀತು. ಹುಬ್ಬಳ್ಳಿಧಾರವಾಡ ನಗರ ನಮ್ಮ ರಾಜ್ಯದ ಎರಡನೆಯ ಬಹು ದೊಡ್ಡ ನಗರ. ಸರ್ಕಾರ ಅದರ ಅಭಿವೃದ್ಧಿಯ ಬಗ್ಗೆ ಆಸ್ಥೆಯನ್ನು ವಹಿಸಬೇಕು. ಮಾನ್ಯ ಬಂಗಾರಪ್ಪನವರು ಬೆಂಗಳೂರು ನಗರದ ಬಗ್ಗೆ ವಿಶೇಷವಾದ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಬಜೆಟ್‌ನಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿರುವುದು ಇದೆ. ಹಿಂದುಳಿದ ಜನ ಹೆಚ್ಚಾಗಿರುವ ಹುಬ್ಬಳ್ಳಿ ನಗರದ ಕಡೆ ಬಂಗಾರಪ್ಪನವರು ವಿಶೇಷವಾದ ಲಕ್ಷ್ಯವನ್ನು ವಹಿಸಬೇಕೆಂದು ಅತ್ಯಂತ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಹುಬ್ಬಳ್ಳಿ-ಧಾರವಾಡ ಮಹಾನಗರಕ್ಕೆ ಬಹಳಷ್ಟು ಕೆಲಸಗಳು ಆಗಬೇಕಾಗಿದೆ. ರಸ್ತೆಗಳ ವ್ಯವಸ್ಥೆ ಚೆನ್ನಾಗಿ ಇಲ್ಲ. ರಸ್ತೆಗಳನ್ನು ರಿಪೇರಿ ಮಾಡುವಂಥಾದ್ದು ಆಗಬೇಕು. ಎಲ್ಲದಕ್ಕಿಂತಲೂ ಮುಖ್ಯವಾಗಿ ಮಾದಾಯಿ ನೀರಿನ ಡೈವರ್ಶನ್ ಆಗಬೇಕಾಗಿದೆ. ಇದಕ್ಕೆ ಹೆಚ್ಚಿನ ಮಹತ್ವ ಕೊಟ್ಟು ಆಧ್ಯತೆ ಮೇರೆಗೆ ಕಾರ್ಯಕ್ರಮ ಕೈಗೊಳ್ಳಬೇಕು. ನನಗೆ ಬಹಳ ಸಂತೋಷವಾಗಿದೆ. ಅವರು ಎರಡು ಸಲ ಮಾದಾಯಿ ಯೋಜನೆಯನ್ನು ನಾವು ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ ಬಜೆಟ್‌ನ ತೆಗೆದು ನೋಡಿದರೆ ಹಣ ಪ್ರಾವಿಜನ್ ಮಾಡಿಲ್ಲ. ಅದನ್ನು ದಯವಿಟ್ಟು ಮಾಡಬೇಕು. ಅವರು ಇನ್ನೊಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ನಾನು ಏನೇ ಮಾಡಿದರೂ, ಎಲ್ಲಿಂದಾದರೂ ನಿಮಗೆ ಹಣ ತೆಗೆದುಕೊಂಡು ಬಂದು ನಿಮ್ಮ ಯೋಜನೆಗಳೇನಿವೆ ಅದನ್ನು ಪೂರೈಸುವುದಾಗಿ ಆತ್ಮವಿಶ್ವಾಸದಿಂದ ನಮಗೆ ಹೇಳಿದ್ದಾರೆ. ಇನ್ನು ಸೈಟ್‌ಲೆಸ್‌ಗೆ ಸೈಟ್ಸ್ ಕೊಟ್ಟಿಲ್ಲ. ಸ್ಲಮ್ ಡೆವೆಲಪ್‌ಮೆಂಟ್ ಪ್ರೋಗ್ರಾಮ್ ಆಗಿಲ್ಲ. ಹುಬ್ಬಳ್ಳಿ-ಧಾರವಾಡ ಟೂರಿಸ್ಟ್ ಸೆಂಟರ್ ಆಗಬೇಕು, ಹೋಟೆಲ್ಸ್ ಆಗಬೇಕು. ಹಾಗೆಯೇ ಹುಬ್ಬಳ್ಳಿ-ಧಾರವಾಡ ಮತ್ತು ಉತ್ತರ ಕರ್ನಾಟಕದಲ್ಲಿ ಹೌಸಿಂಗ್ ಸೊಸೈಟಿ ಆಗಬೇಕು. ಅವರು ಅನೇಕ ವರ್ಷಗಳಿಂದ ಭೂಮಿ ಪಡೆದುಕೊಂಡು ಖರೀದಿ ಮಾಡಿ ಇವತ್ತು ಪರ್ಮಿಶನ್‌ಗಾಗಿ ಸರ್ಕಾರದ ಮುಂದೆ ಇದ್ದಾಗ, ಇನ್ನೂ ಆಗಿಲ್ಲ. ಅದನ್ನು ಮಾಡಿಸಿಕೊಡಬೇಕು ಅಂತ ಹೇಳಿ ಇನ್ನೊಮ್ಮೆ ಮುಖ್ಯಮಂತ್ರಿಗಳು ನಮ್ಮೆಲ್ಲರ ಯೋಗಕ್ಷೇಮವನ್ನು ವಿಶೇಷವಾಗಿ ಹಿಂದುಳಿದಿರತಕ್ಕಂಥವರಿಗೆ, ಬಡವರಿಗಾಗಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಇದನ್ನು ನಾನು ಅತ್ಯಂತ ಆತ್ಮ ಸಂತೋಷದಿಂದ ಸ್ವಾಗತ ಮಾಡುತ್ತೇನೆ. ಮತ್ತು ಚೀಫ್ ಮಿನಿಸ್ಟರ್ ಫಂಡ್‌ನಿಂದ ಬರೇ ಬೆಂಗಳೂರಿಗೆ ಖರ್ಚು ಮಾಡಬೇಡಿ. ಹುಬ್ಬಳ್ಳಿ-ಧಾರವಾಡಗಳೂ ಕೂಡ ನಿಮ್ಮದೆಂದು ತಿಳಿದುಕೊಂಡು ಕೆಲಸ ಮಾಡಬೇಕೆಂದು ಹೇಳಿ......

ಉಪಾಧ್ಯಕ್ಷಣಿಯವರು : ಈಗ ತಾವು ಕುಳಿತಿಕೊಳ್ಳಬೇಕು. ಶ್ರೀ ವಾಟಾಳ್ ನಾಗರಾಜ್‌ರವರೇ ನೀವು ಮಾತನಾಡುತ್ತೀರಲ್ಲ?

ಶ್ರೀ ವಾಟಾಳ್ ನಾಗರಾಜ್ : ನಾನು ಮಧ್ಯಾಹ್ನ ಮಾತನಾಡುತ್ತೇನೆ.

(ಗೊಂದಲ)

ಶ್ರೀ ಗೋಪಿನಾಥ್ ಆರ್. ಸಾಂಡ್ರ : ಮಾನ್ಯ ಮುಖ್ಯಮಂತ್ರಿಗಳು ಜನಪ್ರಿಯವಾದ ಬಜೆಟ್‌ನ್ನು ಕೊಟ್ಟಿದ್ದಾರೆ. ಅವರಿಗೆ ಧನ್ಯವಾದಗಳನ್ನು ಅರ್ಪಿಸಿ, ಸಮಯ ಕೊಟ್ಟಿದ್ದಕ್ಕಾಗಿ ತಮಗೂ ಕೂಡ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷಣಿಯವರು : ಇವತ್ತು ಶುಕ್ರವಾರವಾಗಿದ್ದು ಬೆಳಗಿನ ಅಧಿವೇಶನ ಸೇರಿದ್ದೇವೆ. ಇದು ಮಧ್ಯಾಹ್ನಕ್ಕೆ ಮುಗಿಯಬೇಕಾಗಿತ್ತು. ಆದರೆ ಇನ್ನೂ ಚರ್ಚೆಯಲ್ಲಿ

ಸಭೆ ಒಪ್ಪುವುದಾದರೆ ಈಗ ಸಭೆಯನ್ನು ಮುಂದೂಡಿ ಮತ್ತೆ ಮೂರು ಗಂಟೆಗೆ ಸೇರುವುದಕ್ಕೆ ನನ್ನದಂತೂ ಅಭ್ಯಂತರ ಇಲ್ಲ.

(ಸಭೆ ಒಪ್ಪಿಗೆ ಸೂಚಿಸಿತು)

ಈಗ ಸದನವು ಮುಂದೂಡಲ್ಪಟ್ಟು ಮತ್ತು ಪುನಃ ಮೂರು ಗಂಟೆಗೆ ಸೇರುತ್ತದೆ.

(ಸದನವು 1.43 ಗಂಟೆಗೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 3 ಘಂಟೆ 25 ನಿಮಿಷಕ್ಕೆ ಸೇರಿತು.)

ಸನ್ಮಾನ್ಯ ಉಪಸಭಾಧ್ಯಕ್ಷಣಿ

ಯವರಾದ ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು.)

ಉಪಾಧ್ಯಕ್ಷಣೀಯವರು : ಈಗ ಮಾನ್ಯ ಶಿಕ್ಷಣ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುತ್ತಾರೆ.

ಮಂತ್ರಿಯವರಿಂದ ಹೇಳಿಕೆ

ದ್ವಿತೀಯ ಪಿ.ಯು.ಸಿ.ಯ ಗಣಿತ ಶಾಸ್ತ್ರದ ಪ್ರಶ್ನೆಪತ್ರಿಕೆ ಬಯಲಾಗಿದೆ ಎನ್ನುವ ಸುದ್ಧಿಯ ಕುರಿತು ವಿವರಣೆ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಉಪಾಧ್ಯಕ್ಷಣಿಯವರೇ, ತಮ್ಮ ಅನುಮತಿಯನ್ನು ಪಡೆದು ಈ ಕೆಳಕಂಡ ಹೇಳಿಕೆಯನ್ನು ಕೊಡಲು ಇಚ್ಛಿಸುತ್ತೇನೆ.

ದ್ವಿತೀಯ ಪದವಿ ಪೂರ್ವ ಪರೀಕ್ಷೆಗಳು ಇಂದು ಪ್ರಾರಂಭವಾಗಿದ್ದು, ಗಣಿತಶಾಸ್ತ್ರದ ಪರೀಕ್ಷೆಯು ಇಂದು ನಡೆಯಿತು. ಈ ಪರೀಕ್ಷೆ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ, ಕೆಲವು ವಿದ್ಯಾರ್ಥಿಗಳು, ಪದವಿ ಪೂರ್ವ ಇಲಾಖೆಯ ನಿರ್ದೇಶಕರಿಗೆ, ಪ್ರಶ್ನೆ ಪತ್ರಿಕೆ ಬಯಲಾಗಿದೆ ಎಂದು ಸುದ್ದಿ ಕೊಟ್ಟು, ಸಂಬಂಧಪಟ್ಟ ನಕಲಿ ಪತ್ರಿಕೆಯನ್ನು ಕೊಟ್ಟಾಗ, ಅದನ್ನು ಅವರು ಅಸಲೀ ಪ್ರಶ್ನೆ ಪತ್ರಿಕೆಯೊಂದಿಗೆ ತಾಳಿ ಮಾಡಿ ನೋಡಿದ್ದಾರೆ. ನಕಲೀ ಪ್ರಶ್ನೆ ಪತ್ರಿಕೆಯಲ್ಲಿರುವ ಪ್ರಶ್ನೆಗಳಿಗೂ, ಅಸಲೀ ಪ್ರಶ್ನೆ ಪತ್ರಿಕೆಯಲ್ಲಿರುವ ಪ್ರಶ್ನೆಗಳಿಗೂ ಯಾವುದೇ ಸಾಮ್ಯತೆ ಕಂಡುಬಂದಿಲ್ಲ ಹಾಗೂ ನಕಲೀ ಪ್ರಶ್ನೆ ಪತ್ರಿಕೆಗಳನ್ನು ದುರುದ್ದೇಶದಿಂದ ಕೆಲವು ದುಷ್ಕರ್ಮಿಗಳು ದುರ್ಲಾಭಪಡೆಯುವ ದೃಷ್ಟಿಯಿಂದಲೂ ಇಂತಹ ಪ್ರಶ್ನೆ ಪತ್ರಿಕೆ ತಯಾರಿಸಿ ಮಾರಾಟ ಮಾಡುತ್ತಿದ್ದರೆಂದು ತಿಳಿದು ಬಂದಿದೆ.

ಈ ವಿಚಾರದಲ್ಲಿ ಪೊಲೀಸರು ತೀವ್ರ ಕಾರ್ಯಕ್ರಮ ತೆಗೆದುಕೊಂಡಿದ್ದು, ಇಂತಹ ದುಷ್ಕರ್ಮಿಗಳ ಬಗ್ಗೆ ಇಡೀ ರಾಜ್ಯದಲ್ಲಿ ನಿಗಾ ಇಟ್ಟಿದ್ದಾರೆ ಮತ್ತು ಬೆಂಗಳೂರು ನಗರದಲ್ಲಿ ವಿಶೇಷ ಪೊಲೀಸ್ ದಳವನ್ನು ನಿಯುಕ್ತಿಗೊಳಿಸಿದ್ದು ಈ ದಳವು ಈ ಬಗ್ಗೆ ತೀವ್ರ. ನಿಗಾ ವಹಿಸುತ್ತಿದ್ದು, ಇಂತಹ ದುಷ್ಕೃತ್ಯ ಕಂಡುಬಂದಲ್ಲಿ, ಅಂತಹವರ ವಿರುದ್ಧ ತೀವ್ರ ಕ್ರಮ ತೆಗೆದುಕೊಳ್ಳಲಾಗುವುದು.

ಪ್ರಶ್ನೆ ಪತ್ರಿಕೆಗಳ ಜೋಪಾನದ ಬಗ್ಗೆ ಸರ್ಕಾರವು ತೀವ್ರ ಹಾಗೂ ಸೂಕ್ತವಾದ ವ್ಯವಸ್ಥೆ ಮಾಡಿದ್ದು, ಪ್ರಶ್ನೆ ಪತ್ರಿಕೆಗಳು ಬಯಲಾಗುವ ಸಾಧ್ಯತೆ ಇಲ್ಲವೆಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಕೆಲವು ದುಷ್ಕರ್ಮಿಗಳು, ನಕಲೀ ಪ್ರಶ್ನೆ ಪತ್ರಿಕೆಗಳನ್ನು ಸೃಷ್ಟಿಸಿ, ದುರ್ಲಾಭ ಪಡೆಯಲು ಹಾಗೂ ವಿದ್ಯಾರ್ಥಿಗಳು ಗೊಂದಲವನ್ನುಂಟು ಮಾಡಲು ಪ್ರಯತ್ನಿಸುತ್ತಿರುವುದು ಕಂಡು ಬಂದಲ್ಲಿ, ವಿದ್ಯಾರ್ಥಿಗಳು ಪೋಷಕರು ಹಾಗೂ ಸಾರ್ವಜನಿಕರು, ಕೂಡಲೇ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸುವಂತೆ, ನಾನು ಕಳಕಳಿಯ ಮನವಿ ಮಾಡುತ್ತೇನೆ.